24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 119 | ನವದೆಹಲಿ | ಬೆಲೆ ₹10 | ಅಕ್ಟೋಬರ್, 25, 2026, ಭಾನುವಾರ

## ಒಳಪುಟಗಳಲ್ಲಿ

ವಿಶ್ವ ಪೋಲಿಯೋ ದಿನ: ಪೋಲಿಯೋ ಮುಕ್ತ ಜಗತ್ತಿನ ಸಂಕಲ್ಪ ರೋಟರಿ ಜಿಲ್ಲೆ 3191ರಿಂದ ಬೃಹತ್ ಜಾಗೃತಿ ಅಭಿಯಾನ - ಪು.5

ಬರಿದಾದ ಮಾಣಿಕೇಶ್ವರ ಬ್ಯಾರೇಜ್: ರೈತರಲ್ಲಿ ಆತಂಕ - ಪು.6

ಶ್ರಮದಾನ-ಸಸಿ ನೆಡುವ ಕಾರ್ಯಕ್ರಮ ಸಮಾಜದ ಪ್ರಗತಿಗೆ ಸಂಘಟನೆಯೇ ಬುನಾದಿ - ಪು.7

# ಉದ್ಯೋಗ ಸೃಷ್ಟಿ, ಪಾರಂಪರಿಕ ತಾಣಗಳ ಪರಿಚಯಿಸಲು ಕ್ರಾಂತಿಕಾರಿ ಹೆಜ್ಜೆ

## 2026-27ನೇ ಸಾಲಿನ ಗೋಲ್ಡನ ಚಾರಿಯೆಟ್ ಐಷಾರಾಮಿ ಪ್ರವಾಸಿ ರೈಲು ಸಂಚಾರಕ್ಕೆ ಸಿಎಂ ಚಾಲನೆ



**ಬೆಂಗಳೂರು, ಅ.24:** ಕರ್ನಾಟಕದಲ್ಲಿ ನೈಸರ್ಗಿಕ ಸಂಪತ್ತು ಬಹಳ ಶ್ರೀಮಂತವಾಗಿದೆ. ಪಾರಂಪರಿಕ ತಾಣಗಳನ್ನು ಹೊಂದಿದೆ. ಹಂಪಿ, ಬೇಲೂರು, ಮಲೆನಾಡು, ಮೈಸೂರು, ಕರಾವಳಿ, ಕೊಡಗು ಹೀಗೆ ಎಲ್ಲ ಪ್ರವಾಸಿ ಕೇಂದ್ರಗಳನ್ನು ಆಕರ್ಷಣೆ ಮಾಡುವುದಕ್ಕಾಗಿ, ಹೊಸ ತಾಣಗಳನ್ನು ಪರಿಚಯಿಸಲು ನಮ್ಮ ಸರ್ಕಾರ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಕ್ರಾಂತಿಕಾರಿ ಹೆಜ್ಜೆಯನ್ನು ಇಟ್ಟಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

2026–27ನೇ ಸಾಲಿನ ಐಷಾರಾಮಿ ಪ್ರವಾಸಿ ರೈಲಿನ ಹೊಸ ಋತುವಿಗೆ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಶನಿವಾರ ಹಸಿರುನಿಶಾನೆ ತೋರಿಸಿ ಮಾತನಾಡಿದ ಅವರು, ಗೋಲ್ಡನ್ ಚಾರಿಯೆಟ್ ಮೂಲಕ ಜನರಿಗೆ ಕರ್ನಾಟಕದ ಪ್ರವಾಸಿ ತಾಣಗಳನ್ನು ಪರಿಚಯಿಸುವ ಹಾಗೂ ಉದ್ಯೋಗ ಸೃಷ್ಟಿಯ ಗುರಿಯನ್ನು ಹೊಂದಿದ್ದೇವೆ. ಇದರಿಂದ ನಮಗೆ ಲಾಭದ ಅಗತ್ಯವಿಲ್ಲ. ಆದರೆ, ನಷ್ಟವಾಗದಂತೆ ನೋಡಿಕೊಳ್ಳಬೇಕು. ಇದಕ್ಕೆ ಎಲ್ಲರ ನೆರವು ಬೇಕು ಎಂದರು.

**ಜನಸಾಮಾನ್ಯರಿಗೂ ಗೋಲ್ಡನ್ ಚಾರಿಯೆಟ್ ಎಟಕುವಂತಾಗಲಿ:** ಐಷಾರಾಮಿ ರೈಲು ಪ್ರಯಾಣವೆಂದರೆ ಶ್ರೀಮಂತರಿಗೆ ಮಾತ್ರ ಸೀಮಿತವಾಗಬಾರದು. ಕರ್ನಾಟಕದ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಪ್ರಾಕೃತಿಕ ಸೌಂದರ್ಯವನ್ನು ಸವಿಯಲು ರಾಜ್ಯದ ಸಾಮಾನ್ಯ ಪ್ರವಾಸಿಗರಿಗೂ ಗೋಲ್ಡನ್ ಚಾರಿಯೆಟ್ ರೈಲಿನಲ್ಲಿ ಪ್ರಯಾಣಿಸುವ ಅವಕಾಶ ಸಿಗಬೇಕು. ಈ ಉದ್ದೇಶದಿಂದ ಆಫ್ ಸೀಸನ್‌ನಲ್ಲಿ ಕಡಿಮೆ ದರದಲ್ಲಿ ಪ್ರವಾಸಕ್ಕೆ ಅವಕಾಶ ಕಲ್ಪಿಸುವ ಕುರಿತು ಸರ್ಕಾರ ಚಿಂತನೆ ನಡೆಸುತ್ತಿದೆ. ಗೋಲ್ಡನ್ ಚಾರಿಯೆಟ್ ರೈಲಿನಲ್ಲಿ ಎರಡು ರೆಸ್ಟೋರೆಂಟ್‌ಗಳಿವೆ. 80 ಪ್ರಯಾಣಿಕರಿಗೆ ವ್ಯವಸ್ಥೆಯಿದ್ದು, ಅವರ ಸೇವೆಗಾಗಿ ಸುಮಾರು 60 ಸಿಬ್ಬಂದಿ ಕಾರ್ಯನಿರ್ವಹಿಸುತ್ತಾರೆ. ಸ್ಪಾ, ಜಿಮ್, ಸಸ್ಯಾಹಾರ ಮತ್ತು ಮಾಂಸಾಹಾರ ವ್ಯವಸ್ಥೆ ಸೇರಿ ಹಲವು ಸೌಲಭ್ಯಗಳಿವೆ. ರಾತ್ರಿ ಆರಾಮವಾಗಿ ತಂಗಲು ಕೂಡ ಉತ್ತಮ ವ್ಯವಸ್ಥೆ ಮಾಡಲಾಗಿದೆ. ಎಲ್ಲವನ್ನೂ ನೋಡಿ ಬಹಳ ಸಂತೋಷ ವಾಯಿತು. ನಾನೂ ಈ ರೈಲಿನಲ್ಲಿ ಪ್ರವಾಸ ಮಾಡುವ ಅವಕಾಶಕ್ಕಾಗಿ ಕಾಯುತ್ತಿದ್ದೇನೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.



### ಗೋಲ್ಡನ್ ಚಾರಿಯಟ್ ಕರ್ನಾಟಕದ ಹೆಮ್ಮೆ

ಪ್ರವಾಸೋದ್ಯಮ ಇಲಾಖೆಯ ಕರ್ನಾಟಕ ದರ್ಶನ ಯೋಜನೆ ಈ ಮಧ್ಯೆ ನಿಂತು ಹೋಗಿತ್ತು. ನಮ್ಮ ಸರ್ಕಾರ ಬಂದ ಮೇಲೆ ಅದಕ್ಕೆ ಹೊಸ ರೂಪ ಕೊಟ್ಟು ಪ್ರತಿಷ್ಠಿತ'ಗೋಲ್ಡನ್ ಚಾರಿಯಟ್ ಆರಂಭಿಸಿದ್ದಾರೆ. ಹೊಸ ಪ್ರವಾಸಿ ಮಾರ್ಗಗಳನ್ನು ನಿಗದಿ ಮಾಡಿ, ಐಷಾರಾಮಿ ಸೌಲಭ್ಯಗಳನ್ನು ನೀಡಿದೆ. ಈಗಾಗಲೇ 75 ಮಂದಿ ಪ್ರಯಾಣ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಕರ್ನಾಟಕವನ್ನು ಯಾರೂ ಸಂಪೂರ್ಣವಾಗಿ ನೋಡಿಲ್ಲವೋ ಅವರಿಗೆ ಪ್ರವಾಸ ಮಾಡಲು ಉತ್ತೇಜನ ಕೊಡಬೇಕು. ಅದಕ್ಕಾಗಿ ರಾಜ್ಯ ಸರ್ಕಾರ ವಿಶೇಷ ರೈಲ್ವೇ ಬೋಗಿಗಳನ್ನು ನಿರ್ಮಿಸಿ, ರೈಲ್ವೇ ಇಲಾಖೆಯ ರೂಟ್ ಅನ್ನು ಬಳಸಿಕೊಂಡು ಯೋಜನೆಗೆ ಮರುಚಾಲನೆ ನೀಡಲಾಗಿದೆ. ಇಷ್ಟೇ ಅಲ್ಲದೇ, ದಕ್ಷಿಣ ಭಾರತದ ತಾಣಗಳನ್ನು ಪರಿಚಯಿಸುವ ಉದ್ದೇಶದಿಂದ 'ಜ್ಯೂಯಲ್ಸ್ ಆಫ್ ಸೌತ್' ಎನ್ನುವ ಮತ್ತೊಂದು ಪ್ರವಾಸಿ ಯೋಜನೆಯನ್ನು ರೂಪಿಸಿದ್ದೇವೆ. ಹಂಪಿ, ಮಹಾಬಲಿಪುರ, ಮೈಸೂರು ಬೆಂಗಳೂರು, ಕೊಚ್ಚಿನ್, ಚಿಟ್ಟಿನಾಡು ಮುಂತಾದ ಉತ್ತಮ ಪ್ರವಾಸಿ ಕೇಂದ್ರಗಳನ್ನು ಸಂಪರ್ಕಿಸುವ ರೂಟ್ ಅನ್ನು ತಯಾರು ಮಾಡಿದ್ದೇವೆ. ನಾಲ್ಕು ದಿನ ಪ್ರವಾಸ ಮಾಡುವ 'ಡ್ರೀಮ್ಸ್ ಆಫ್ ಕರ್ನಾಟಕ' ಪ್ರವಾಸಿ ಯೋಜನೆ ಕೂಡ ಸಿದ್ಧವಾಗಿದೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಮಾಹಿತಿಯನ್ನು ನೀಡುತ್ತೇವೆ ಎಂದರು.

## ದೆಹಲಿಯಲ್ಲಿ ಇಂದು ಕೆಂಪೇಗೌಡರ ದಶಮಾನೋತ್ಸವ ವಂದೇಮಾತರಂ ಸಂಭ್ರಮಾಚರಣೆ



■ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತ ಅವರಿಂದ ಉದ್ಘಾಟನೆ

**ನವದೆಹಲಿ, ಅ.24:** ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಫೌಂಡೇಷನ್ ವತಿಯಿಂದ ನವದೆಹಲಿಯ ಭಾರತ ಮಂಟಪ ಕನ್ವೆನ್ಷನ್ ಸೆಂಟರ್‌ನಲ್ಲಿ ನಾಡಪ್ರಭು ಕೆಂಪೇಗೌಡರ ದಶಮಾನೋತ್ಸವ ಮತ್ತು ಒಂದೂವರೆ ಶತಮಾನದ ವಂದೇ ಮಾತರಂ ರಾಷ್ಟ್ರೀಯ ಗೀತೆಯ ಸಂಭ್ರಮಾಚರಣೆ ಹಮಿಕೊಳ್ಳಲಾಗಿದೆ. ಈ ಐತಿಹಾಸಿಕ ಕಾರ್ಯಕ್ರಮವನ್ನು ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯ ಹಾಗೂ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಅ.25ರ ಮಧ್ಯಾಹ್ನ 2 ಗಂಟೆಯಿಂದ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಮತ್ತು ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ಕಾರ್ಯಕ್ರಮ ಹಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಸಾವಿರಾರು ದೆಹಲಿ ಕನ್ನಡಿಗರು ಒಟ್ಟಾಗಿ ಸೇರಿ 150 ವರ್ಷಗಳ ಇತಿಹಾಸವಿರುವ ವಂದೇ ಮಾತರಂ ರಾಷ್ಟ್ರೀಯ ಗೀತೆಯನ್ನು ಹಾಡುವ ಮೂಲಕ ರಾಷ್ಟ್ರಭಕ್ತಿಯನ್ನು ಮೆರೆಯಲಿದ್ದಾರೆ ಎಂದು ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಸಿ.ಎಂ. ನಾಗರಾಜ್ ಹಾಗೂ ಪ್ರಧಾನ ಕಾರ್ಯದರ್ಶಿ ಡಾ.ಚಿದಾನಂದಮೂರ್ತಿ ಅವರು ತಿಳಿಸಿದ್ದಾರೆ.

ಕಾರ್ಯಕ್ರಮದ ಉದ್ಘಾಟನೆಯನ್ನು ದೆಹಲಿ ಮುಖ್ಯಮಂತ್ರಿ ರೇಖಾಗುಪ್ತಾ ಅವರು ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಗಜೇಂದ್ರ ಸಿಂಗ್ ಶೇಖಾವತ್, ಎಚ್.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಸಂಸದರಾದ ಡಾ.ಸಿ.ಎನ್. ಮಂಜುನಾಥ್, ಮಲ್ಲೇಶ್‌ಬಾಬು ಹಾಗೂ ಮಾಜಿ ಸಚಿವ ಮುರುಗೇಶ್ ನಿರಾಣಿ ಅವರು ಭಾಗವಹಿಸಲಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.ಈ ಐತಿಹಾಸಿಕ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯ ಹಾಗೂ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಭಾನುವಾರ ಮಧ್ಯಾಹ್ನ 2 ಗಂಟೆಯಿಂದ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಮತ್ತು ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

### ಮತ್ತೆ ಚೀನಾ ಆಕ್ಷೇಪ: ಐಟಿಬಿಪಿ ಮಹಾನಿರ್ದೇಶಕರ ಹೇಳಿಕೆ ಆತಂಕಕಾರಿ

## ರಾಷ್ಟ್ರೀಯ ಹಿತಾಸಕ್ತಿಗಳ ಬಗ್ಗೆ ಪ್ರಧಾನಿ ಮೋದಿ ಉತ್ತರಿಸಲಿ: ಮಲ್ಲಿಕಾರ್ಜುನ ಖರ್ಗೆ ಆಗ್ರಹ

**ನವದೆಹಲಿ, ಅ.24:** ಅರುಣಾಚಲ ಪ್ರದೇಶದಲ್ಲಿ ಭಾರತೀಯ ಮತ್ತು ಚೀನಾ ಸೇನೆಗಳ ನಡುವೆ ನಿರಂತರ ಮುಖಾಮುಖಿ ನಡೆಯುತ್ತಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಶುಕ್ರವಾರ ವಾಗ್ದಾಳಿ ನಡೆಸಿದ್ದು, ಗಡಿ ಭದ್ರತೆ, ಚೀನಾದೊಂದಿಗಿನ ರಾಜತಾಂತ್ರಿಕ ಸಂಬಂಧ ಹಾಗೂ ರಾಷ್ಟ್ರೀಯ ಹಿತಾಸಕ್ತಿಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಉತ್ತರ ನೀಡಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ (ಪಿಎಲ್‌ಎ) ಜೊತೆಗಿನ ಇತ್ತೀಚಿನ ಮುಖಾಮುಖಿಗಳ ಕುರಿತು ಇಂಡೋ–ಟಿಬೆಟಿಯನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ಮಹಾನಿರ್ದೇಶಕ ಶತ್ರುಜೀತ್ ಕಪೂರ್ ಅವರ ಹೇಳಿಕೆಗೆ ತಮ್ಮ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಚೀನಾಕ್ಕೆ ಈಗಾಗಲೇ ಹಲವು ಬಾರಿ ಕ್ಲೀನ್‌ಚಿಟ್ ನೀಡಲಾಗಿದೆ. ಗಡಿ ಪರಿಸ್ಥಿತಿಯ ಕುರಿತು ಸರ್ಕಾರ ಹೊಣೆಗಾರಿಕೆ ವಹಿಸಬೇಕು ಎಂದು ಆಗ್ರಹಿಸಿದ್ದಾರೆ. ಹಾಗೂ ರಾಷ್ಟ್ರೀಯ ಭದ್ರತೆ, ಚೀನಾದ ಮೇಲಿನ ಭಾರತದ ಆರ್ಥಿಕ ಅವಲಂಬನೆ ಹಾಗೂ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಮಾತುಕತೆಗಳಿಂದ ಆಗಿರುವ ಪ್ರಯೋಜನಗಳ ಕುರಿತು ಪ್ರಶ್ನಿಸಿದ್ದಾರೆ.



ಅರುಣಾಚಲ ಪ್ರದೇಶದಲ್ಲಿ ಪಿಎಲ್‌ಎ ಜೊತೆ ನಿರಂತರ ಮುಖಾಮುಖಿಗಳು ನಡೆಯುತ್ತಿವೆ ಎಂಬ ಐಟಿಬಿಪಿ ಮಹಾನಿರ್ದೇಶಕರ ಹೇಳಿಕೆ ತೀವ್ರ ಆತಂಕಕಾರಿ. ಡೋಕ್ಲಾಂ ಮತ್ತು ಗಲ್ವಾನ್ ಬಳಿಕ ಮತ್ತೊಂದು ಗಂಭೀರ ಸಂಘರ್ಷ ನಡೆಯುತ್ತಿದೆಯೇ ಆಗಸ್ಟ್‌ನಲ್ಲಿ ತಕ್ಸಿಂಗ್ ಸಮೀಪ ಚೀನಾ ಅತಿಕ್ರಮಣ ನಡೆಸಿದ ವರದಿಗಳು ಬಂದಿದ್ದವು. ಆದರೆ, ಇದರಿಂದ ಸುಮಾರು 180 ಕಿ.ಮೀ. ದೂರದಲ್ಲಿರುವ ವಾಚಾ–ದಮೈನಲ್ಲಿ ನಡೆದ ಕಾರ್ಪ್ಸ್ ಕಮಾಂಡರ್ ಮಟ್ಟದ ಮಾತುಕತೆ ನಡೆದು 47 ದಿನ ಕಳೆದಿದ್ದರೂ ಮುಖಾಮುಖಿಗಳು ಮುಂದುವರಿದಿವೆ ಎಂದು ವರದಿಯಾಗಿದೆ. ಭಾರತದ ಗಸ್ತು ಹಕ್ಕುಗಳಿಗೆ ಧಕ್ಕೆಯಾಗಿದೆಯೇ ಎಂದು ಖರ್ಗೆ ಪ್ರಶ್ನಿಸಿದ್ದಾರೆ. ರಾಷ್ಟ್ರೀಯ ಭದ್ರತೆಯ ವಿಷಯದಲ್ಲಿ ಕೇವಲ ರಾಜತಾಂತ್ರಿಕ ಫೋಟೋ ಸೆಷನ್‌ಗಳು ಮತ್ತು ಅಪ್ಪುಗೆಯ ರಾಜತಾಂತ್ರಿಕತೆಯ ಬದಲಿಗೆ ಹೊಣೆಗಾರಿಕೆ ಇರಬೇಕು ಎಂದು ಹೇಳಿದ್ದಾರೆ.

### ಚೀನಾದಿಂದ ಆಮದು ಹೆಚ್ಚಳ; ವ್ಯಾಪಾರ ಕೊರತೆಯೂ ಏರಿಕೆ

ಚೀನಾದಿಂದ ಭಾರತಕ್ಕೆ ಆಗುತ್ತಿರುವ ಆಮದು ಪ್ರಮಾಣ ಹೆಚ್ಚುತ್ತಿರುವುದು ಹಾಗೂ ಉಭಯ ದೇಶಗಳ ನಡುವಿನ ವ್ಯಾಪಾರ ಕೊರತೆ ವಿಸ್ತರಿಸುತ್ತಿರುವುದಕ್ಕೂ ಖರ್ಗೆ ಆಕ್ಷೇಪ ವ್ಯಕ್ತಪಡಿಸಿದ್ದು, "2020–21ರ ಹಣಕಾಸು ವರ್ಷದಲ್ಲಿ ಗಲ್ವಾನ್‌ನಲ್ಲಿ 20 ಭಾರತೀಯ ಯೋಧರು ಪ್ರಾಣತ್ಯಾಗ ಮಾಡಿದ ಬಳಿಕ ಚೀನಾದಿಂದ ಭಾರತದ ಆಮದು ಶೇ.102ರಷ್ಟು ಹೆಚ್ಚಾಗಿದೆ. ಅದೇ ವೇಳೆ, ಚೀನಾದೊಂದಿಗಿನ ಭಾರತದ ವ್ಯಾಪಾರ ಕೊರತೆ ಶೇ.155ರಷ್ಟು ಏರಿಕೆಯಾಗಿ 112.16 ಶತಕೋಟಿ ಡಾಲರ್‌ಗೆ ತಲುಪಿದೆ. ಹಾಗಾದರೆ, 'ಮೇಕ್ ಇನ್ ಇಂಡಿಯಾ' ಈಗ ಇಂಪೋರ್ಟ್ ಫ್ರಂ ಚೀನಾ ಆಗಿದೆಯೇ ಎಂದು ಖರ್ಗೆ ಪ್ರಶ್ನಿಸಿದ್ದಾರೆ.

## ಗಡಿ ಗಸ್ತು ನಿಯಮ ಬದಲಿಸಿದ ಚೀನಾ: ಎಲ್‌ಎಸಿಯಲ್ಲಿ ಮತ್ತೆ ಉದ್ವಿಗ್ನತೆ

ನವದೆಹಲಿ, ಅ.24: ವಾಸ್ತವಿಕ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಗಡಿ ಪರಿಸ್ಥಿತಿಯಲ್ಲಿ ಉಂಟಾಗುವ ಅಶಾಂತಿಗೆ ಚೀನಾ ಪಡೆಗಳು ನಿಗದಿತ ಗಸ್ತು ಮಾದರಿಯಿಂದ ವಿಚಲಿತವಾಗುವುದೇ ಕಾರಣ ಎಂದು ಭಾರತ ಆಕ್ರೋಶ ವ್ಯಕ್ತಪಡಿಸಿದೆ.



ಗಡಿ ವಿವಾದಗಳಿಗೆ ಪರಿಹಾರ ಕಂಡುಕೊಳ್ಳಲು ಹಾಗೂ ತಪ್ಪು ತಿಳಿವಳಿಕೆಗಳನ್ನು ತಡೆಯಲು ಭಾರತ ಮತ್ತು ಚೀನಾ ಈಗಲೂ ಅಸ್ತಿತ್ವದಲ್ಲಿರುವ ರಾಜತಾಂತ್ರಿಕ ಮತ್ತು ಸೇನಾ ಮಟ್ಟದ ವ್ಯವಸ್ಥೆಗಳ ಮೂಲಕ ಮಾತುಕತೆ ಮುಂದುವರಿಸಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ತಿಳಿಸಿದೆ. ಅರುಣಾಚಲ ಪ್ರದೇಶದಲ್ಲಿ ನಡೆಯುತ್ತಿರುವ ಎನ್ನಲಾದ ಮುಖಾಮುಖಿ ಕುರಿತು ಇಂಡೋ–ಟಿಬೆಟಿಯನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ಮುಖ್ಯಸ್ಥ ಶತ್ರುಜೀತ್ ಕಪೂರ್ ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ರಾಜಕೀಯ ವಿವಾದ ಉಂಟಾದ ಬೆನ್ನಲ್ಲೇ ಭಾರತ ಈ ಪ್ರತಿಕ್ರಿಯೆ ನೀಡಿದೆ.

ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಮಾತನಾಡಿ, ಚೀನಾ ಪಡೆಗಳು ಈ ಹಿಂದೆ ಅನುಸರಿಸುತ್ತಿದ್ದ ಗಸ್ತು ಮಾದರಿಯಿಂದ ಭಿನ್ನವಾಗಿ ನಡೆದುಕೊಂಡಾಗ ಭಾರತ–ಚೀನಾ ಗಡಿ ಪ್ರದೇಶಗಳಲ್ಲಿ ಆಗಾಗ ಪರಿಸ್ಥಿತಿ ಹದಗೆಡುತ್ತದೆ. ಆದರೆ, ಅರುಣಾಚಲ ಪ್ರದೇಶದ ಮುಖಾಮುಖಿ ನಡೆದ ಸ್ಥಳಗಳು ಅಥವಾ ಅದರ ಸ್ವರೂಪದ ಬಗ್ಗೆ ಅವರು ನಿರ್ದಿಷ್ಟ ಮಾಹಿತಿ ನೀಡಲಿಲ್ಲ. ಕಾರ್ಯಾಚರಣೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ರಕ್ಷಣಾ ಸಚಿವಾಲಯಕ್ಕೆ ಕೇಳುವಂತೆ ಸೂಚಿಸಿದರು.

ಈ ಹಿಂದೆಯೂ ಈ ರೀತಿ ಘಟನೆಗಳನ್ನು ಗಮನಿಸಿದ್ದೇವೆ. ಎಲ್‌ಎಸಿಯಲ್ಲಿ ಬಾಕಿ ಉಳಿದಿರುವ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ತಪ್ಪು ತಿಳಿವಳಿಕೆ ಮತ್ತು ತಪ್ಪು ಲೆಕ್ಕಾಚಾರಗಳನ್ನು ತಡೆಯಲು ಎರಡೂ ದೇಶಗಳು ರಾಜತಾಂತ್ರಿಕ ಮತ್ತು ಸೇನಾ ವ್ಯವಸ್ಥೆಗಳನ್ನು ಬಳಸುತ್ತಿವೆ. ಗಡಿ ನಿರ್ವಹಣೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಎಲ್‌ಎಸಿಯ ಕೆಲವು ಪ್ರದೇಶಗಳ ಕುರಿತು ಪರಸ್ಪರ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳುವ ಮಾರ್ಗಗಳ ಬಗ್ಗೆ ಚರ್ಚಿಸಲು ಭಾರತ ಮತ್ತು ಚೀನಾ ಒಪ್ಪಿಕೊಂಡಿವೆ ಎಂದೂ ಜೈಸ್ವಾಲ್ ಹೇಳಿದರು.

## ಇರಾನ್‌ಗೆ ಔಷಧ ಸಾಗಿಸುವ ವಿಮಾನ ಹಾರಾಟಕ್ಕೆ ಭಾರತ ತಡೆ

**ನವದೆಹಲಿ, ಅ. 24:** ಅಮೆರಿಕ ವಿಧಿಸಬಹುದಾದ ಆರ್ಥಿಕ ನಿರ್ಬಂಧಗಳ ಭೀತಿಯಿಂದಾಗಿ, ಇರಾನ್ ಜತೆಗಿನ ನೇರ ವಿಮಾನಗಳ ಸಂಚಾರಕ್ಕೆ ಭಾರತ ಸರ್ಕಾರ ಅನುಮತಿ ನಿರಾಕರಿಸಿದೆ. ಪರಿಣಾಮವಾಗಿ, ಇರಾನ್ ದೇಶವು ಭಾರತದಲ್ಲಿ ಈಗಾಗಲೇ ಖರೀದಿಸಿ ಸಿದ್ಧವಾಗಿಟ್ಟುಕೊಂಡಿರುವ ಜೀವ ರಕ್ಷಕ ಔಷಧಗಳನ್ನು ತನ್ನ ದೇಶಕ್ಕೆ ಸಾಗಿಸಲು ಆಗಸ್ಟ್‌ನಿಂದಲೂ ಸಾಧ್ಯವಾಗಿಲ್ಲ. ಔಷಧ ಸಾಗಣೆಗೆ ನಿಗದಿತ ಸರಕು ಸಾಗಣೆ ವಿಮಾನಗಳಿಗೆ ಮಾತ್ರವಲ್ಲದೆ, ಸಾಮಾನ್ಯ ಪ್ರಯಾಣಿಕರ ವಿಮಾನಗಳ ಮೂಲಕವೂ ಔಷಧಗಳನ್ನು ಕೊಂಡೊಯ್ಯಲು ಇರಾನ್ ಸಿದ್ಧವಿದ್ದರೂ, ಭಾರತದ ನಾಗರಿಕ ವಿಮಾನಯಾನ ಸಚಿವಾಲಯ ಅನುಮತಿ ನೀಡಲು ಹಿಂಜರಿಯುತ್ತಿದೆ ಎಂದು ವರದಿಯಾಗಿದೆ.

ಇರಾನ್ ಏರ್ ವ್ಯವಸ್ಥಾಪಕ ನಿರ್ದೇಶಕ ತಾಹೆರ್ ಅಬ್ದುಲ್ಲಾಯ್ ಅವರು ಇತ್ತೀಚೆಗೆ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದು, ಭಾರತ ಮತ್ತು ಸಿಂಗಾಪುರದಿಂದ ಔಷಧಗಳನ್ನು ಸಾಗಿಸಲು ಅನುಮತಿ ಸಿಗುತ್ತಿಲ್ಲ. ಮುಂಬೈನಿಂದ ಹೊರಡುವ ಪ್ರಯಾಣಿಕರ ವಿಮಾನದಲ್ಲೇ ಔಷಧದ ಕಾರ್ಗೋವನ್ನು ತೆಗೆದುಕೊಂಡು ಹೋಗುವುದಾಗಿ ಪ್ರಸ್ತಾಪಿಸಿದರೂ ಅದಕ್ಕೆ ಭಾರತ ಒಪ್ಪಿಗೆ ನೀಡಲಿಲ್ಲ. ಅಲ್ಲದೆ, ಸಿಂಗಾಪುರದಿಂದ ಸುಮಾರು 60 ರಿಂದ 70 ಟನ್ ಸರಕುಗಳನ್ನು ಸಾಗಿಸಲು ಕೂಡ ಹಲವು ಬಾರಿ ಕೋರಿದ್ದರೂ ಅನುಮತಿ ದೊರೆತಿಲ್ಲ ಎಂದು ಹೇಳಿದ್ದಾರೆ.

ಈ ಕುರಿತು ಅ.23 ರಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಮಾತನಾಡಿ, ನಾವು ಇರಾನ್‌ಗೆ ಜೀವ ರಕ್ಷಕ ಔಷಧಗಳ ಸಾಗಣೆಗೆ ನೆರವಾಗುತ್ತಲೇ ಬಂದಿದ್ದೇವೆ. ಆದರೆ ಪ್ರಸ್ತುತ ನಡೆಯುತ್ತಿರುವ ಸಂಘರ್ಷದಿಂದಾಗಿ ಎರಡೂ ದೇಶಗಳ ನಡುವಿನ ವಿಮಾನ ಸಂಪರ್ಕಕ್ಕೆ ಹೊಸ ಸವಾಲುಗಳು ಎದುರಾಗಿವೆ. ಮಾನವೀಯ ಆಧಾರದ ಮೇಲೆ ಔಷಧಗಳನ್ನು ಕಳುಹಿಸಲು ಇರಾನ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ ಎಂದಿದ್ದಾರೆ. ಭಾರತವು ಇರಾನ್‌ಗೆ ಪರ್ಯಾಯ ಮಾರ್ಗವನ್ನು ಪ್ರಸ್ತಾಪಿಸಿದೆ. ಇರಾನೇತರ ವಿಮಾನ ಸಂಸ್ಥೆಯ ಮೂಲಕ ಔಷಧಗಳನ್ನು ಅರ್ಮೇನಿಯಾ ಅಥವಾ ಅಜರ್‌ಬೈಜಾನ್‌ಗೆ ವಿಮಾನದಲ್ಲಿ ಸಾಗಿಸಿ, ಅಲ್ಲಿಂದ ರಸ್ತೆ ಮಾರ್ಗವಾಗಿ (ಟ್ರಕ್‌ಗಳಲ್ಲಿ) ಇರಾನ್‌ಗೆ ಕೊಂಡೊಯ್ಯುವಂತೆ ಸೂಚಿಸಿದೆ. ರಸ್ತೆ ಮಾರ್ಗದ ಮೂಲಕ ಸಾಗಿಸಿದರೆ ಅಮೆರಿಕದ ನಿರ್ಬಂಧಗಳ ಭೀತಿ ಇರುವುದಿಲ್ಲ ಮತ್ತು ಈ ಹಿಂದೆ ಕೂಡ ಇದೇ ಮಾರ್ಗದಲ್ಲಿ ಕೆಲವು ಕಂತುಗಳ ಔಷಧಗಳನ್ನು ಯಶಸ್ವಿಯಾಗಿ ತಲುಪಿಸಲಾಗಿದೆ ಎಂದು ಭಾರತ ಹೇಳುತ್ತಿದೆ.

## ನೇಪಾಳದಲ್ಲಿ ಭಾರತ ವಿರೋಧಿ ಭಾವನೆಯ ಯುಗ ಸಮಾಪ್ತಿ

**ನವದೆಹಲಿ, ಅ.24:** ಭಾರತ ಮತ್ತು ನೇಪಾಳದ ನಡುವಿನ ಸಂಬಂಧ ಅತ್ಯಂತ ಆಳವಾಗಿದೆ. ಆಗಾಗ ಕೆಲವು ಸಮಸ್ಯೆಗಳು ಎದುರಾಗಬಹುದು, ಆದರೆ ನಾವು ದೃಢವಾಗಿ ಬೆಸೆದುಕೊಂಡಿದ್ದೇವೆ. ಭಾರತದೊಂದಿಗಿನ ಸಂಬಂಧವನ್ನು ನೇಪಾಳ ಬೇರೆ ಯಾವುದೇ ದೇಶದೊಂದಿಗೆ ಹೊಂದಿಲ್ಲ ಎಂದು ನೇಪಾಳ ಹಣಕಾಸು ಸಚಿವ ಸ್ವರ್ಣಿಮ್ ಹೇಳಿದ್ದಾರೆ. ದೆಹಲಿಯಲ್ಲಿ ಸುದ್ದಿವಾಹಿನಿಯೊಂದಿಗೆ ಮಾತನಾಡಿದ ಅವರು, ಒಂದು ಕಾಲದಲ್ಲಿ ನೇಪಾಳದಲ್ಲಿ ರಾಷ್ಟ್ರೀಯತೆಯನ್ನು ಭಾರತ ವಿರೋಧಿ ಭಾವನೆಯೊಂದಿಗೆ ಗುರುತಿಸಲಾಗುತ್ತಿತ್ತು. ಆದರೆ ಈಗ ಆ ಯುಗ ಮುಗಿದಿದೆ. 2026ರ ಅಂತ್ಯದೊಳಗೆ ನೇಪಾಳದ ಪ್ರಧಾನಿ ಬಾಲೇಂದ್ರ ಶಾ ಅವರು ಭಾರತಕ್ಕೆ ಭೇಟಿ ನೀಡಬಹುದು. ಈ ಭೇಟಿಯು ಎರಡೂ ದೇಶಗಳ ಸಂಬಂಧವನ್ನು ಹೊಸ ಹಂತಕ್ಕೆ ಕೊಂಡೊಯ್ಯಲು ನೆರವಾಗಲಿದೆ ಎಂದು ಹೇಳಿದ್ದಾರೆ. ಔಪಚಾರಿಕ ಮಾತುಕತೆಗಳು ಮತ್ತು ಅಧಿಕೃತ ಸಂವಹನಗಳಲ್ಲಿ ಭಾರತ ಸಹಾಯ ಮಾಡಲು ಸಿದ್ಧವಿರುವುದನ್ನು ನಿರಂತರವಾಗಿ ತೋರಿಸಿಕೊಟ್ಟಿದೆ. ನೇಪಾಳಕ್ಕೆ ಏನೇ ಅಗತ್ಯವಿದ್ದರೂ ಅದನ್ನು ಒದಗಿಸಲು ಸಿದ್ಧರಿರುವುದಾಗಿ ಭಾರತ ಸ್ಪಷ್ಟಪಡಿಸಿದೆ ಎಂದಿದ್ದಾರೆ.



■ ನೇಪಾಳದ ಹಣಕಾಸು ಸಚಿವ ಸ್ವರ್ಣಿಮ್ ವಾಗ್ಲೆ

## ಒಪ್ಪಂದಕ್ಕೆ ಬಾರದಿದ್ದರೆ ಇರಾನ್ ಮೇಲೆ ಮತ್ತೆ ದಾಳಿ: ಟ್ರಂಪ್

**ವಾಷಿಂಗ್ಟನ್, ಅ.24:** ಟೆಹ್ರಾನ್ ರಾಜತಾಂತ್ರಿಕ ಒಪ್ಪಂದಕ್ಕೆ ಬರಲು ವಿಫಲವಾದರೆ ಇರಾನ್ ಮೇಲೆ ಮತ್ತೊಂದು ಸೇನಾ ದಾಳಿ ನಡೆಸುವ ಸಾಧ್ಯತೆಯಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಇರಾನ್ ಒಪ್ಪಂದಕ್ಕೆ ಬರುವಂತೆ ಮಾಡಲು ವಾಷಿಂಗ್ಟನ್ ಮತ್ತೊಂದು ಸಣ್ಣ ಸೇನಾ ಕಾರ್ಯಾಚರಣೆ ನಡೆಸಬಹುದು ಎಂದು ಹೇಳಿದ್ದಾರೆ.



ಫ್ಲೋರಿಡಾದಲ್ಲಿ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದ ಟ್ರಂಪ್, ಆಕ್ರಮಣಕಾರಿ ವಿದೇಶಾಂಗ ನೀತಿಯ ನಿಲುವನ್ನು ವ್ಯಕ್ತಪಡಿಸಿದರು. ತಮ್ಮ ಹಿಂದಿನ ರಾಷ್ಟ್ರೀಯ ಭದ್ರತಾ ನಿರ್ಧಾರಗಳನ್ನು ಎತ್ತಿ ತೋರಿಸಿದ ಅವರು, ಇರಾನ್ ನಾಯಕತ್ವದ ವಿರುದ್ಧ ವಾಗ್ದಾಳಿ ನಡೆಸಿ ಮಾತುಕತೆಗಳು ವಿಫಲವಾದರೆ ಸೇನಾ ಕಾರ್ಯಾಚರಣೆ ನಡೆಸುವ ಸುಳಿವು ನೀಡಿದರು.

ನಾವು ಮತ್ತೊಂದು ದಾಳಿ ಮಾಡಬಹುದು, ಅಥವಾ ಅವರು ಒಪ್ಪಿಕೊಳ್ಳುತ್ತಾರೆ ಎಂದು ಟ್ರಂಪ್ ನೆರೆದಿದ್ದ ಜನಸ್ತೋಮಕ್ಕೆ ತಿಳಿಸಿದರು. ಇರಾನ್ನ ಕಾರ್ಯತಂತ್ರವನ್ನು ಪ್ರಶ್ನಿಸಿದ ಅವರು, ಅವರು ಬುದ್ಧಿವಂತರಾಗಿದ್ದರೆ, ಬನ್ನಿ ವ್ಯವಹಾರದ ಬಗ್ಗೆ ಮಾತನಾಡೋಣ ಎಂದು ಹೇಳುತ್ತಾರೆ. ಆದರೆ, ಅವರು ಹಾಗೆ ಮಾಡುತ್ತಾರೆ ಎಂಬ ಬಗ್ಗೆ ನನಗೆ ಅನುಮಾನವಿದೆ, ಏಕೆಂದರೆ ಬಹುಶಃ ಅವರು ಬುದ್ಧಿವಂತರಲ್ಲ ಎಂದು ವ್ಯಂಗ್ಯವಾಡಿದರು.

## ಕರ್ನಾಟಕ ಸೇರಿ 6 ರಾಜ್ಯದ ಮುಖ್ಯಕಾರ್ಯದರ್ಶಿಗಳ ವಿರುದ್ಧ ಹಕ್ಕುಚ್ಯುತಿ ಮಂಡನೆ

### ಪರಿಶಿಷ್ಟರ ವಿದ್ಯಾರ್ಥಿವೇತನ ಯೋಜನೆ ಅಕ್ರಮ ಪರಿಶೀಲನಾ ಸಮಿತಿಗೆ ಗೈರು ಕ್ರಮಕ್ಕೆ ಕೋರಿ ಓಂ ಬಿರ್ಲಾಗೆ ಪಿಎಸಿ ಅಧ್ಯಕ್ಷ ಕೆ.ಸಿ. ವೇಣುಗೋಪಾಲ್ ಪತ್ರ

**ನವದೆಹಲಿ, ಅ.24:** ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಯೋಜನೆಗಳಲ್ಲಿನ ಅಕ್ರಮಗಳನ್ನು ಪರಿಶೀಲಿಸುವ ಸಮಿತಿ ಮುಂದೆ ಹಾಜರಾಗದ ಹಿನ್ನೆಲೆಯಲ್ಲಿ ಕರ್ನಾಟಕ ಸೇರಿದಂತೆ ಆರು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ವಿರುದ್ಧ ಹಿರಿಯ ಕಾಂಗ್ರೆಸ್ ನಾಯಕ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಅಧ್ಯಕ್ಷ ಕೆ.ಸಿ. ವೇಣುಗೋಪಾಲ್ ಹಕ್ಕುಚ್ಯುತಿ ಮಂಡನೆಗೆ ಮುಂದಾಗಿದ್ದಾರೆ.



ಈ ಸಂಬಂಧ ಅಕ್ಟೋಬರ್ 22 ರಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ವೇಣುಗೋಪಾಲ್ ಪತ್ರ ಬರೆದಿದ್ದು, ಉತ್ತರ ಪ್ರದೇಶ, ಕರ್ನಾಟಕ, ಪಂಜಾಬ್, ಒಡಿಶಾ, ಬಿಹಾರ ಮತ್ತು ಮಧ್ಯಪ್ರದೇಶದ ಮುಖ್ಯ ಕಾರ್ಯದರ್ಶಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

ಸಮಿತಿಯು ಅವರ ಗೈರುಹಾಜರಿಯನ್ನು ಸಂಸದೀಯ ಹಕ್ಕು ಉಲ್ಲಂಘನೆ ಎಂದು ಸರ್ವಾನುಮತದಿಂದ ಪರಿಗಣಿಸಿದೆ.

ಸಂಸತ್ತಿಗೆ ತಮಗಿರುವ ಹೊಣೆಗಾರಿಕೆಯನ್ನು ಕಡೆಗಣಿಸಿದ್ದು, ಯಾವುದೇ ವಿನಾಯಿತಿ ನೀಡದಿದ್ದರೂ ಯಾವುದೇ ಮುಖ್ಯ ಕಾರ್ಯದರ್ಶಿಗಳು ಸಮಿತಿಯ ಮುಂದೆ ಹಾಜರಾಗಿಲ್ಲ. ಸಮಿತಿಯ ಮುಂದೆ ಹಾಜರಾಗಲು ವಿಫಲರಾದ ಉತ್ತರ ಪ್ರದೇಶ, ಬಿಹಾರ ಮತ್ತು ಒಡಿಶಾದ ಸಮಾಜಕಲ್ಯಾಣ ಇಲಾಖೆ ಕಾರ್ಯದರ್ಶಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕೆಂದು ವೇಣುಗೋಪಾಲ್ ಕೋರಿದ್ದಾರೆ.

### ಸಿಎಜಿ ವರದಿಯಲ್ಲಿ ಏನಿತ್ತು?

2025ರ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ವರದಿಯಲ್ಲಿನ ಸಂಶೋಧನೆಗಳ ಆಧಾರದ ಮೇಲೆ, ಎಸ್‌ಸಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಯೋಜನೆಗಳ ಅನುಷ್ಠಾನವನ್ನು ಸಮಿತಿ ಪರಿಶೀಲಿಸುತ್ತಿದೆ. ಇದರ ಪರಿಶೀಲನೆಯು ಯೋಜನೆಯ ಅನುಷ್ಠಾನ, ಫಲಾನುಭವಿ ಪರಿಶೀಲನೆ ಮತ್ತು ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿವೇತನ ವಿತರಣೆಯನ್ನು ಒಳಗೊಂಡಿದೆ. ಮುಖ್ಯ ಕಾರ್ಯದರ್ಶಿಗಳ ಗೈರು ಹಾಜರಿಯನ್ನು ಎಲ್ಲಾ ಸದಸ್ಯರು ಸರ್ವಾನುಮತದಿಂದ ಗಂಭೀರವಾಗಿ ಪರಿಗಣಿಸಿದ್ದಾರೆ ಮತ್ತು ಇದು ಸಂಸದೀಯ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಭಾವಿಸಿದ್ದಾರೆ ಎಂದು ವೇಣುಗೋಪಾಲ್ ಹೇಳಿದ್ದಾರೆ. ಸೆಪ್ಟೆಂಬರ್‌ನಲ್ಲಿ ಜೈಪುರಕ್ಕೆ ಸಮಿತಿಯ ಅಧ್ಯಯನ ಭೇಟಿ ಕೈಗೊಂಡಾಗ ಗುರುತಿಸಲಾದ ಕಳವಳಗಳನ್ನು ಅನುಸರಿಸಿ ಅಧಿಕಾರಿಗಳನ್ನು ಕರೆಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ರಾಜ್ಯಗಳನ್ನು ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್‌ಗೆ ತರುವಲ್ಲಿ ವಿಳಂಬ, ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಮನ್ವಯದಲ್ಲಿನ ಅಂತರ ಮತ್ತು ವಿದ್ಯಾರ್ಥಿವೇತನ ವಿತರಣೆಯಲ್ಲಿನ ಸಮಸ್ಯೆಗಳು ಇವುಗಳಲ್ಲಿ ಸೇರಿವೆ. ರಾಜ್ಯಗಳು ಈ ಯೋಜನೆಗಳನ್ನು ಅನುಷ್ಠಾನಗೊಳಿಸಿದಾಗಿನಿಂದಲೂ ಆಡಿಟ್ ಸಂಶೋಧನೆಗಳ ಕುರಿತು ಇತರ ರಾಜ್ಯಗಳು ಮತ್ತು ಅವುಗಳ ಕಲ್ಯಾಣ ಇಲಾಖೆಗಳನ್ನು ಪರಿಶೀಲಿಸುವುದು ಅತ್ಯಗತ್ಯ ಎಂದು ಸಮಿತಿ ಪರಿಗಣಿಸಿದೆ ಎಂದು ಹೇಳಿದ್ದಾರೆ.

## ನಿತ್ಯ ಪಂಚಾಂಗ 25.10.2026 ಭಾನುವಾರ



**ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ**

**ಆಶ್ವಯುಜ ಶುದ್ಧ, ಚತುರ್ದಶಿ, ರೇವತಿ ನಕ್ಷತ್ರ, ಕೋಜಾಗರಿ ಲಕ್ಷ್ಮೀ ಪೂಜೆ, ಹಂಪಿ ವಿರೂಪಾಕ್ಷ ವಿದ್ಯಾರಣ್ಯ ಕೌಮುದೀಜಾಗರ, ಬೆಪ್ಪಂಪದವು, ಮಚ್ಚಿಕೆರೆ ಜಾತ್ರೆ**

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಸ್ಟಿಂಗ್ ಆಪರೇಷನ್ ನನ್ನನ್ನು ಸಿಲುಕಿಸಲು ಷಡ್ಯಂತ್ರ

## ಸಿಎಂ, ಗೃಹ ಸಚಿವರ ವಿರುದ್ಧ ಎಚ್.ಡಿ. ಕುಮಾರಸ್ವಾಮಿ ಆರೋಪ



**ಹಾಸನ, ಅ.24:** ಸಿದ್ದರಾಮಯ್ಯ ವಿರುದ್ಧ ಸ್ಟಿಂಗ್ ಮಾಡಿದ್ದ ಆರೋಪಿ ನಾನೇ ಮಾಡಿದ್ದು ಎಂದು ಸತ್ಯ ಒಪ್ಪಿಕೊಂಡ ಮೇಲೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಬ್ಬರು ಇಡೀ ಪ್ರಕರಣವನ್ನು ನನ್ನ ಕಡೆಗೆ ತಿರುಗಿಸಿ ನನ್ನ ಬಗ್ಗೆ ಅನುಮಾನ ಹುಟ್ಟುವಂತೆ ಮಾಡಲು ವ್ಯವಸ್ಥಿತ ಷಡ್ಯಂತ್ರ ರೂಪಿಸಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಹೊಳೆನರಸೀಪುರ ತಾಲೂಕಿನ ಮಾವಿನಕೆರೆ ಬೆಟ್ಟದಲ್ಲಿ ಶನಿವಾರ ರಂಗನಾಥಸ್ವಾಮಿ ದೇವರ ದರ್ಶನ ಪಡೆದ ನಂತರ ಸಚಿವರು ಮಾಧ್ಯಮಗಳ ಜತೆ ಮಾತನಾಡಿ, ಓರ್ವ ಪತ್ರಕರ್ತ ಹಾಗೂ ಕಾಂಗ್ರೆಸ್ ನಾಯಕಿ ಹಾಗೂ ಅವರ ಸಹಚರರು ಸ್ಟಿಂಗ್ ನಡೆಸಿದ್ದಾರೆ ಎಂಬುದು ಎಲ್ಲರೂ ತಿಳಿದ ವಿಷಯ. ಅಲ್ಲದೆ, ಇವರ ಬಗ್ಗೆ ಸ್ವತಃ ಸಿದ್ದರಾಮಯ್ಯ ಅವರು, ಅವರ ಪುತ್ರ ಯತೀಂದ್ರ ಸಹ ಹೇಳಿದ್ದಾರೆ. ಹೀಗಿದ್ದರೂ ಮುಖ್ಯಮಂತ್ರಿ, ಗೃಹ ಮಂತ್ರಿ ಇಬ್ಬರೂ ಸೇರಿ ಇಡೀ ವಿಷಯವನ್ನು ನಮ್ಮತ್ತ ತಿರುಗಿಸಲು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆಲ್ಲ ಹೆದರಲ್ಲ, ಎಲ್ಲವನ್ನು ಎದುರಿಸುವ ಶಕ್ತಿಯಿದೆ ಎಂದು ಹೇಳಿದ್ದಾರೆ.

ಸ್ಟಿಂಗ್ ವಿಷಯದ ಮಾಹಿತಿ ಹೊರಬರುತ್ತಿದ್ದಂತೆ ಗೃಹ ಸಚಿವರು, ಮುಖ್ಯಮಂತ್ರಿ ಇಬ್ಬರೂ ಸೇರಿ ಜೆಡಿಎಸ್ ತಲೆಗೆ ಕಟ್ಟಲು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ಆರೋಪಿಸಿದರು. ಮಾಜಿ ಸಚಿವ ಎಚ್.ಡಿ. ರೇವಣ್ಣ, ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡರು ಜತೆಯಲ್ಲಿದ್ದರು.

### ಯಾವ ಬಂಟನೂ ಓಡಿಹೋಗಿಲ್ಲ

ಕುಮಾರಸ್ವಾಮಿ ಅವರ ಬಲಗೈ ಬಂಟ, ಎಡಗೈ ಬಂಟ ಓಡಿಹೋಗಿದ್ದಾರೆ ಎಂದು ಗೃಹ ಸಚಿವ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿದ ಎಚ್‌ಡಿಕೆ, ಯಾರು ಓಡಿಹೋಗಿದ್ದಾರೆ, ಯಾರು ಓಡಿಹೋಗಲು ಸಾಧ್ಯ, ಅವರ ಮೇಲೆ ಏನಿದೆ ಓಡಿ ಹೋಗಲು ಪ್ರಿಯಾಂಕ್ ಖರ್ಗೆ ಇದನ್ನೆಲ್ಲಾ ಏಕೆ ಸೃಷ್ಟಿ ಮಾಡುತ್ತಿದ್ದಾರೆ ಎಂದು ಗೊತ್ತಿದೆ. ಕೆಪಿಎಸ್‌ಸಿ ಹಗರಣ ಮುಚ್ಚಿ ಹಾಕಿಕೊಳ್ಳಲು ಸ್ಟಿಂಗ್ ವಿಷಯವನ್ನು ಜೆಡಿಎಸ್ ಕಡೆಗೆ ತಿರುಗಿಸಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರಿದರು.

# ಸ್ಟಿಂಗ್ ಆಪರೇಷನ್: ನಾಪತ್ತೆಯಾಗಿರುವವರು ಎಚ್‌ಡಿಕೆ ಬಂಟರೇ- ಸಚಿವ ಪ್ರಿಯಾಂಕ್ ಖರ್ಗೆ



ಬೆಂಗಳೂರು, ಅ.24: ಸ್ಟಿಂಗ್ ಆಪರೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಪತ್ತೆಯಾಗಿರುವವರು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಎಡಗೈ-ಬಲಗೈ ಬಂಟರೇ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ಸ್ಟಿಂಗ್ ಪ್ರಕರಣದಲ್ಲಿ ಕ್ರಿಮಿನಲ್ ಪಿತೂರಿ ಇರುವುದು ಸ್ಪಷ್ಟ. ಸತ್ಯ ಹೊರಬರಲಿ ಅಂತಾನೆ ದೂರು ಕೊಟ್ಟಿದ್ದಾರೆ. ತನಿಖೆ ನಡೆಯುತ್ತಿದೆ. ಇಂದಲ್ಲ, ನಾಳೆ ಸತ್ಯ ಬಹಿರಂಗವಾಗಲಿದೆ. ಇದರಲ್ಲಿ ಗೊಂದಲ, ಅನುಮಾನ ಪಡುವಂತಹದ್ದು ಏನೂ ಇಲ್ಲ. ಸ್ವಲ್ಪ ಸಮಯ ಬೇಕು ಎಂದಿದ್ದಾರೆ.

ಸ್ಟಿಂಗ್ ಯಾರು ಮಾಡಿದ್ದು, ಯಾಕೆ ಮಾಡಿದ್ದು, ಅವರ ಹಿಂದೆ ಯಾರಿದ್ದಾರೆ, ಇಷ್ಟು ವರ್ಷ ಆದಮೇಲೆ ಯಾರ ಕೈಗೆ ಸಿಕ್ತು, ಇದ್ದಕ್ಕಿದ್ದಂತೆ ಯಾಕೆ ಅಪ್ಲೋಡ್ ಆಯ್ತು ಈ ಎಲ್ಲವೂ ಶೀಘ್ರದಲ್ಲೇ ಬಯಲಾಗಲಿದೆ. ಅದರ ಮೂಲದಿಂದ ಹಿಡಿದು ಇಲ್ಲಿ ತನಕ ಏನೇನಾಗಿದೆ ಎಲ್ಲವನ್ನು ಬಟಾಬಯಲು ಮಾಡುತ್ತೇವೆ. ಯಾವುದೇ ರಾಜಕೀಯ ಒತ್ತಡ ಇಲ್ಲದೆ ನಿಷ್ಪಕ್ಷಪಾತ ತನಿಖೆಯಾಗಲಿದೆ. ಸಮಯ ಬಂದಾಗ ನಿಮ್ಮ ಮುಂದೆ ಇಡ್ತೀವಿ. ಇದರಲ್ಲಿ ತಪ್ಪಿಸಿಕೊಳ್ಳುವುದು ಇಲ್ಲ. ಚಾರ್ಜ್‌ಶೀಟ್ ಆಗಲೇಬೇಕು, ಕೋರ್ಟ್‌ಗೆ ಸಲ್ಲಿಸಲೇಬೇಕು. ಆರ್‌ಟಿಐನಲ್ಲಿ ಬರಲೇಬೇಕು ಎಂದರು.

**ದೂರು ಕೊಟ್ಟರೆ ತನಿಖೆ**

ಇನ್ನು ವಿಕ್ಕಿ ಅನ್ನೋ ವ್ಯಕ್ತಿಯ ಹತ್ಯೆ ಮಾಡಲಾಗಿದೆ ಎಂಬ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ ಅವರು, ಕುಮಾರಸ್ವಾಮಿ ಅವರು ಅದ್ಯಾವುದೋ ಹಳೇ ಪ್ರಕರಣ ತಗೊಂಡು ಈಗ ಬಂದಿದ್ದಾರೆ. ಅದರ ಬಗ್ಗೆಯೂ ಕಂಪ್ಲೆಂಟ್ ಕೊಟ್ಟರೆ ತನಿಖೆ ಮಾಡ್ತೀವಿ. ಇಲ್ಲಿವರೆಗೆ ಕಂಪ್ಲೆಂಟ್ ಬಂದಿಲ್ಲ. ಕುಮಾರಸ್ವಾಮಿಯವರೇ ಕಂಪ್ಲೆಂಟ್ ಕೊಡಲಿ ತನಿಖೆ ಮಾಡಿಸ್ತೀವಿ. ನಿಮ್ಮ ವೈಯಕ್ತಿಕ ದ್ವೇಷಗಳನ್ನು ನಮ್ಮ ಮುಖಾಂತರ ತೀರಿಸಿಕೊಳ್ಳೋದು ಬೇಡ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

# ಜಿಎಸ್‌ಟಿ ಇಲ್ಲದ ಕಂಪನಿಗೆ 133 ಕೋಟಿ ರೂ. ಟೆಂಡರ್

## ಸರ್ಕಾರದ ವಿರುದ್ಧ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆರೋಪ

**ಬೆಂಗಳೂರು, ಅ.24:** ಕಸದಿಂದ ಕಾಸು ಮಾಡುತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರ ನಿಯಮಗಳನ್ನು ಉಲ್ಲಂಘನೆ ಮಾಡಿ ಜಿಎಸ್‌ಟಿಯೇ ಇಲ್ಲದ ಮುನಿಯಪ್ಪ ಎಂಟರ್‌ಪ್ರೈಸಸ್ ಎಂಬ ಬೇನಾಮಿ ಕಂಪನಿಗೆ ರೂ.133 ಕೋಟಿ ಟೆಂಡರ್ ನೀಡಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ. ಮಲ್ಲೇಶ್ವರದ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳೊಂದಿಗೆ ಇಂದು ಮಾತನಾಡಿದ ಅವರು, 2018 ರಲ್ಲಿ ರಾಜ್ಯ ಸರ್ಕಾರ ಟೆಂಡರ್ ಸಂಬಂಧ ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿದೆ. ಹೆಚ್ಚುವರಿ ಭದ್ರತಾ ಠೇವಣಿ ಪಡೆಯದೇ ಕಮಿಷನ್ ಪಡೆಯಲು ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ದೂರಿದರು.

ಕಂಪನಿ ಟೆಂಡರ್ ಪಡೆಯಲು ಕನಿಷ್ಠ ಹತ್ತು ಕೋಟಿ ವಹಿವಾಟು ಸಾಮರ್ಥ್ಯ ಇರಬೇಕು ಎಂಬ ಮಾರ್ಗಸೂಚಿ ಇದ್ದರೂ ಉಲ್ಲಂಘಿಸಿದ್ದಾರೆ. ಈ ನಿಯಮ ಮೀರಿದರೆ ಜೈಲಿಗೆ ಹಾಕಬಹುದು ಎಂಬ ಕಾನೂನು ಇದೆ. ಆದರೆ ಕಾಂಗ್ರೆಸ್ ಸರ್ಕಾರ ಎಲ್ಲವನ್ನೂ ಮೀರಿ ಟೆಂಡರ್ ನೀಡಿದೆ ಎಂದರು.

ಭದ್ರತಾ ಠೇವಣಿ ಇಲ್ಲದೆ ಇದ್ದರೆ ಟೆಂಡರ್ ತಿರಸ್ಕರಿಸಬೇಕು ಎಂಬ ನಿಯಮ ಇದೆ. ಆದರೂ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣೆ ಲಿಮಿಟೆಡ್‌ಗೆ ಕಾರ್ಯಾದೇಶ ನೀಡಲಾಗಿದೆ. ಹೆಚ್ಚುವರಿ ಭದ್ರತಾ ಠೇವಣಿಯನ್ನು ಯಾಕೆ ಮನ್ನಾ ಮಾಡಲಾಗಿದೆ. ಮುನಿಯಪ್ಪ ಕಂಪನಿಗೆ ಅನುಕೂಲ ಮಾಡಿಕೊಡಲು ಕಿಕ್ ಬ್ಯಾಕ್ ಪಡೆದು ಟೆಂಡರ್ ಕೊಟ್ಟಿದ್ದಾರೆ ಎಂದು ಹೇಳಿವರು.

**ಶೇ.40 ಕಮಿಷನ್ ಶಂಕೆ...**

ಟೆಂಟರ್ ಅರ್ಹತಾ ಷರತ್ತುಗಳನ್ನು ಸ್ಪಷ್ಟವಾಗಿ ಉಲ್ಲಂಘನೆ ಮಾಡಲಾಗಿದೆ. ಇದರಲ್ಲಿ ಶೇ 40 ಕಮಿಷನ್ ಪಡೆದಿರುವ ಶಂಕೆ ಇದೆ. ಟೆಂಡರ್ ನಿಯಮ ಉಲ್ಲಂಘನೆ ಆಗಿದ್ದರೂ ಪಾಲಿಕೆ ಆಯುಕ್ತರು ಹಾಗೂ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಯಾಕೆ ಎಚ್ಚರಿಕೆ ವಹಿಸಿಲ್ಲ ಎಂದು ಪ್ರಶ್ನಿಸಿದರು. ಈ ಸರ್ಕಾರದಲ್ಲಿ ಲೂಟಿ ಮಾಡುವುದೇ ಪಾರದರ್ಶಕ ಎನ್ನುವಂತಾಗಿದೆ. ಆದ್ದರಿಂದ ತ್ಯಾಜ್ಯ ವರ್ಗಾವಣೆ ಎಲ್ಲಾ ಸ್ಟೇಷನ್‌ಗಳ ಪ್ಯಾಕೇಜ್‌ಗಳನ್ನು ಸರ್ಕಾರ ಉನ್ನತ ಮಟ್ಟದ ತನಿಖೆಗೆ ಒಳಪಡಿಸಬೇಕು. ಲೋಕಾಯುಕ್ತದಿಂದ ತನಿಖೆ ಆಗಬೇಕು, ಕಡತಗಳನ್ನು ವಶಕ್ಕೆ ಪಡೆಯಬೇಕು ಎಂದು ಆಗ್ರಹಿಸಿದರು.

# ತಮಿಳುನಾಡಿಗೆ ನೀರು: ಸಿಡಬ್ಲ್ಯುಆರ್‌ಸಿ ಸೂಚನೆಗೆ ಅಶೋಕ್ ಖಂಡನೆ



**ಬೆಂಗಳೂರು, ಅ.24:** ತಮಿಳುನಾಡಿಗೆ ಪ್ರತಿದಿನ 3 ಸಾವಿರ ಕ್ಯೂಸೆಕ್‌ನಂತೆ ಮುಂದಿನ 15 ದಿನ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು ಮಾಡಿರುವುದನ್ನು ರಾಜ್ಯ ಬಿಜೆಪಿ ಖಂಡಿಸಿದೆ. ಈ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ರಾಜ್ಯದಲ್ಲಿ ಬರದ ಪರಿಸ್ಥಿತಿ ಎದುರಾಗಿದ್ದು, ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿಯುತ್ತಿದೆ. ಇಂತಹ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಹರಿಸುವ ಮೂಲಕ ಕನ್ನಡಿಗರು ಮತ್ತು ರೈತರ ಹಿತಾಸಕ್ತಿಯನ್ನು ಬಲಿ ಕೊಡುತ್ತಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ.

ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಪ್ರಾಧಿಕಾರದ ಸಭೆಗಳಲ್ಲಿ ಸಮರ್ಥವಾಗಿ ವಾದ ಮಂಡಿಸಿ, ರಾಜ್ಯದ ವಾಸ್ತವ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುವಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಸಂಕಷ್ಟದಲ್ಲೂ ನೀರು ಹರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ಸರ್ಕಾರದ ವೈಫಲ್ಯವೇ ಕಾರಣ ಎಂದು ದೂರಿದ್ದಾರೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕನ್ನಡಿಗರ ಹಿತಾಸಕ್ತಿಯನ್ನು ರಕ್ಷಿಸುವ ಕಾಳಜಿ ಇಲ್ಲ. ಅಧಿಕಾರ ಉಳಿಸಿಕೊಳ್ಳುವ ಉದ್ದೇಶದಿಂದ ಹೈಕಮಾಂಡ್‌ಗೆ ಮತ್ತು ತಮಿಳುನಾಡಿನ ಮೈತ್ರಿ ರಾಜಕಾರಣಕ್ಕೆ ಸರ್ಕಾರ ಶರಣಾಗಿದೆ. ರಾಜ್ಯದ ಆಕ್ಷೇಪಣೆಗಳನ್ನು ಗಂಭೀರವಾಗಿ ಪರಿಗಣಿಸುವಲ್ಲಿ ಸರ್ಕಾರ ವಿಫಲವಾಗಿದ್ದು, ಕಾವೇರಿ ಕೊಳ್ಳದ ರೈತರ ಬದುಕು ಸಂಕಷ್ಟಕ್ಕೆ ಸಿಲುಕಿದೆ ಎಂದು ಹೇಳಿದ್ದಾರೆ.

# ಹೊರನಾಡ ಕನ್ನಡಿಗರಿಗೆ ಶಿಕ್ಷಣ ಹಾಗೂ ಸಾಂಸ್ಕೃತಿಕ ಯೋಜನೆಗಳಿಗೆ ವಿಶೇಷ ಪ್ಯಾಕೇಜ್ ಘೋಷಿಸಲು ಸರ್ಕಾರಕ್ಕೆ ಬರಗೂರು ರಾಮಚಂದ್ರಪ್ಪ ಒತ್ತಾಯ




ಬೆಂಗಳೂರು, ಅ.24: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಪುವೆಂಪು ಪ್ರತಿಷ್ಠಾನ, ಮಂಜೇಶ್ವರ, ತುಳು ಭವನ, ಬದಿಯಡ್ಕ, ಕಾಸರಗೋಡು ಇಲ್ಲಿ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಟ್ರಸ್ಟ್, ಮಂಜೇಶ್ವರದ ಸಂಯುಕ್ತ ಆಶ್ರಯದಲ್ಲಿ ಶನಿವಾರ ತುಳುರತ್ನ ಬಹುಭಾಷಾ ವಿದ್ವಾಂಸ ಡಾ. ಪಿ. ವೆಂಕಟರಾಜ ಪುಣಿಚಿತ್ತಾಯರ ಜನ್ಮ ದಿನಾಚರಣೆಯ ಅಂಗವಾಗಿ ಪುವೆಂಪು ನೆನಪು 2026 ಎಂಬ ಕಾರ್ಯಕ್ರಮವನ್ನು ಪಾರ್ತಿಸುಬ್ಬ ವೇದಿಕೆ, ಗಿಳಿವಿಂಡು ಮಂಜೇಶ್ವರ ಇಲ್ಲಿ ಎ.ಕೆ.ಎಂ. ಆಶ್ರಫ್, ಶಾಸಕರು, ಮಂಜೇಶ್ವರ ಇವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು, ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಸಲೀಂ ಅಹಮ್ಮದ್ ಅವರು ನೆರವೇರಿಸಿದರು.

ಮಾಜಿ ಕೇಂದ್ರ ಸಚಿವ ಮತ್ತು ಗಿಳಿವಿಂಡು ಪ್ರತಿಷ್ಠಾನದ ಅಧ್ಯಕ್ಷ ಡಾ ವೀರಪ್ಪ ಮೊಯ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ, ಹಿರಿಯ ಸಾಹಿತಿ ರಮಾನಂದ ಬನಾರಿ, ಗಡಿ ಪ್ರಾಧಿಕಾರ ಸದಸ್ಯ ಅಶೋಕ್ ಚಂದರಗಿ, ಕಾಸರಗೋಡು ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷ ಎನ್. ಚನಿಯಪ್ಪ ನಾಯ್ಕ, ರಾಜ್ಯ ಕಾರ್ಮಿಕ ಇಲಾಖೆ ಕನಿಷ್ಠ ವೇತನ ಆಯೋಗದ ಅಧ್ಯಕ್ಷ ರವಿ ನಾಯ್ಕಾಪು, ರವೀಶ ತಂತ್ರಿ ರವಿನಾರಾಯಣ ಭಟ್ ಹಾಗೂ ಇನ್ನೂ ಮುಂತಾದ ಕನ್ನಡಪರ ಸಂಘ ಸಂಸ್ಥೆಗಳ ಮುಖ್ಯಸ್ಥರು, ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಗೀತೆಗಳನ್ನು ಆಯೋಜಿಸಲಾಗಿತ್ತು. ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಅವರಿಗೆ ಪುವೆಂಪು ಪ್ರಶಸ್ತಿ ನೀಡಿ ಗೌರವಿಸಲಾಯಿತು.ಹಾಗೂ ಸೋಮಣ್ಣ ಬೇವಿನಮರದ ಪ್ರಶಸ್ತಿ ಪುರಸ್ಕೃತರಾದ ಹಲವಾರು ಮಹನೀಯರಿಗೆ ಬಹುಮಾನ ವಿತರಣೆಯನ್ನು ಮಾಡಿದರು.

# ರೈತರ ಸಂಕಷ್ಟಕ್ಕೆ ಸ್ಪಂದಿಸಲು ಸರ್ಕಾರ ವಿಫಲ: ಬಿ.ವೈ.ವಿಜಯೇಂದ್ರ ಆರೋಪ

## ಅಲ್ಪ ಪರಿಹಾರ ಘೋಷಿಸಿ ಕೈತೊಳೆದುಕೊಳ್ಳುವ ಯತ್ನ ಎಂದು ಆಕ್ಷೇಪ

**ದೊಡ್ಡಬಳ್ಳಾಪುರ, ಅ.24:** ರಾಜ್ಯದ ರೈತರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ನಗರದಲ್ಲಿ ರೈತಸ್ಪಂದನ ಕಾರ್ಯಕ್ರಮದಲ್ಲಿ ಮಾತನಾಡಿ, ಭೀಕರ ಬರಗಾಲದಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರೂ ಸರ್ಕಾರ ಸಮರ್ಪಕವಾಗಿ ನೆರವಿಗೆ ಧಾವಿಸಿಲ್ಲ. ರೈತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಬದಲು ಅಲ್ಪ ಮೊತ್ತದ ಪರಿಹಾರ ಘೋಷಿಸಿ ಕೈತೊಳೆದುಕೊಳ್ಳುವ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದು ಆಕ್ಷೇಪಿಸಿದರು.

ಮೊದಲ ಬಾರಿಗೆ ಶಾಸಕರಾಗಿರುವ ಧೀರಜ್ ಮುನಿರಾಜು ಅವರು ಬರಗಾಲದ ಸಂಕಷ್ಟದ ನಡುವೆಯೂ ರೈತರ ನೆರವಿಗೆ ಧಾವಿಸಿ, ಸಣ್ಣ ಅಡಿಕೆ ಬೆಳೆಗಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಬೆಳೆ ವಿಮೆಯ ಪ್ರೀಮಿಯಂ ಪಾವತಿಸುವ ಯೋಜನೆಗೆ ಮುಂದಾಗಿರುವುದು ಶ್ಲಾಘನೀಯ ಎಂದು ವಿಜಯೇಂದ್ರ ಮೆಚ್ಚುಗೆ ವ್ಯಕ್ತಪಡಿಸಿದರು.

**ಬರ ಪರಿಹಾರ ಮತ್ತು ಕೃಷಿಸಾಲ ಮನ್ನಾಕ್ಕೆ ಆಗ್ರಹ**

ರಾಜ್ಯದಲ್ಲಿ ಬರಗಾಲದಿಂದ ರಾಗಿ, ಜೋಳ ಹಾಗೂ ಮೆಕ್ಕೆಜೋಳ ಬೆಳೆಗಾರರು ಸೇರಿದಂತೆ ಹಲವು ಕೃಷಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಸಂದರ್ಭದಲ್ಲಿ ಪ್ರತಿ ಹೆಕ್ಟೇರ್‌ಗೆ 50,000 ರೂ. ಪರಿಹಾರ ನೀಡಬೇಕು, ಕೃಷಿ ಸಾಲ ಮನ್ನಾ ಮಾಡಬೇಕು ಹಾಗೂ ಕೃಷಿ ಚಟುವಟಿಕೆಗಳಿಗೆ ಸಮರ್ಪಕವಾಗಿ ಮೂರು ಫೇಸ್ ವಿದ್ಯುತ್ ಪೂರೈಸಬೇಕು ಎಂಬ ಬೇಡಿಕೆಗಳನ್ನು ವಿಜಯೇಂದ್ರ ಮುಂದಿಟ್ಟರು.

**ರೈತರ ಜಮೀನು ರಕ್ಷಣೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು**

ರಾಜ್ಯದಲ್ಲಿ ಕೈಗಾರಿಕೆ ಮತ್ತು ಇತರ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ರೈತರ ಜಮೀನುಗಳನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ರೈತರ ಜಮೀನುಗಳ ವಿಚಾರವಾಗಿ ಆತಂಕಗಳು ವ್ಯಕ್ತವಾಗುತ್ತಿವೆ. ರೈತರ ಜಮೀನು ಮತ್ತು ಬದುಕಿನ ವಿಚಾರದಲ್ಲಿ ಸರ್ಕಾರ ಸೂಕ್ಷ್ಮತೆ ಹಾಗೂ ಜವಾಬ್ದಾರಿಯಿಂದ ವರ್ತಿಸಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು. ಬರಗಾಲದ ಸಂದರ್ಭದಲ್ಲಿ ರೈತರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ಬಿಜೆಪಿ ಹೋರಾಟ ನಡೆಸಿದೆ. ರೈತರಿಗೆ ನ್ಯಾಯಯುತ ಪರಿಹಾರ, ಕೃಷಿಸಾಲ ಮನ್ನಾ ಮತ್ತು ಸಮರ್ಪಕ ವಿದ್ಯುತ್ ಪೂರೈಕೆ ಸೇರಿದಂತೆ ಪ್ರಮುಖ ಬೇಡಿಕೆಗಳನ್ನು ಈಡೇರಿಸುವವರೆಗೆ ರೈತರ ಪರವಾಗಿ ಧ್ವನಿ ಎತ್ತುವುದಾಗಿ ವಿಜಯೇಂದ್ರ ಭರವಸೆ ನೀಡಿದರು.

# ಗರ್ಭಿಣಿಯರಿಗೆ ಪೋಷಣೆ–ಮಾನಸಿಕ ಆರೋಗ್ಯ ಅತ್ಯಗತ್ಯ: ಡಾ.ಸಿ.ಎನ್.ಮಂಜುನಾಥ್

**ಬೆಂಗಳೂರು, ಅ.24: ಪೋಷಕತ್ವವನ್ನು ಸಂಭ್ರಮಿಸಲು, ನೈಸರ್ಗಿಕ ಹೆರಿಗೆಯ ಕುರಿತು ಜಾಗೃತಿ ಮೂಡಿಸಲು ಹಾಗೂ ಸಕಾರಾತ್ಮಕ ಹೆರಿಗೆ ಅನುಭವಕ್ಕಾಗಿ ನಿರೀಕ್ಷಿತ ಪೋಷಕರಿಗೆ ಅಗತ್ಯ ಜ್ಞಾನ ಮತ್ತು ಆತ್ಮವಿಶ್ವಾಸವನ್ನು ಒದಗಿಸುವ ಉದ್ದೇಶದಿಂದ, ಸಾಗರ್ ಚಂದ್ರಮ್ಮ ಆಸ್ಪತ್ರೆಗಳು ಬೆಂಗಳೂರಿನ ಅಶೋಕ ಸ್ತಂಭದ ಸಮೀಪವಿರುವ ದಯಾನಂದ ಸಾಗರ್ ಮೆಮೋರಿಯಲ್ ಹಾಲ್‌ನಲ್ಲಿ "ಮರು ವ್ಯಾಖ್ಯಾನಿಸಲ್ಪಡುತ್ತಿರುವ ಹೆರಿಗೆ ಅನುಭವ – ಪೋಷಕತ್ವದ ಸಂಭ್ರಮ, ನೈಸರ್ಗಿಕ ಹೆರಿಗೆಯ ಸ್ವಾಗತ" ಎಂಬ ಕಾರ್ಯಕ್ರಮವನ್ನು ಆಯೋಜಿಸಿದ್ದವು.**

**ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸದಸ್ಯ ಡಾ. ಸಿ. ಎನ್. ಮಂಜುನಾಥ್ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ತಾಯಿಯ ಆರೋಗ್ಯ ರಕ್ಷಣೆ, ಗರ್ಭಾವಸ್ಥೆಯ ಆರೈಕೆ, ಸುರಕ್ಷಿತ ಹೆರಿಗೆ ಮತ್ತು ನವಜಾತ ಶಿಶುವಿನ ಆರೋಗ್ಯದ ಮಹತ್ವವನ್ನು ಒತ್ತಿ ಹೇಳಿದರು.**




**ಸ್ವಾತಂತ್ರ್ಯಾನಂತರ ಭಾರತದಲ್ಲಿ ತಾಯಿ ಮತ್ತು ಮಕ್ಕಳ ಆರೋಗ್ಯ ರಕ್ಷಣಾ ಕ್ಷೇತ್ರದಲ್ಲಿ ಆಗಿರುವ ಪ್ರಗತಿಯ ಬಗ್ಗೆ ಮಾತನಾಡಿದ ಡಾ. ಮಂಜುನಾಥ್ ಅವರು, ಗರ್ಭಾವಸ್ಥೆಯ ಆರೈಕೆ ಮತ್ತು ಆಸ್ಪತ್ರೆಗಳಲ್ಲಿ ಹೆರಿಗೆಯಾಗುವ ಪ್ರಮಾಣವನ್ನು ಸುಧಾರಿಸುವಲ್ಲಿ ಪ್ರಸೂತಿ ತಜ್ಞರು, ಮಕ್ಕಳ ತಜ್ಞರು, ಅರಿವಳಿಕೆ ತಜ್ಞರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸರ್ಕಾರದ ವಿವಿಧ ಉಪಕ್ರಮಗಳ ಕೊಡುಗೆಯನ್ನು ಶ್ಲಾಘಿಸಿದರು. ದಂಪತಿಗಳ ಜೀವನದಲ್ಲಿ ಮಗುವಿನ ಆಗಮನವು ಅತ್ಯಂತ ಅಮೂಲ್ಯವಾದ ಘಟ್ಟಗಳಲ್ಲಿ ಒಂದಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಆದರೆ, ಬದಲಾಗುತ್ತಿರುವ ಜೀವನಶೈಲಿ, ಏಕಪೋಷಕ ಕುಟುಂಬಗಳ ಹೆಚ್ಚಳ ಮತ್ತು ಮಾನಸಿಕ ಒತ್ತಡದ ಕಾರಣದಿಂದಾಗಿ, ನಿರೀಕ್ಷಿತ ಪೋಷಕರಿಗೆ ಸೂಕ್ತ ಮಾರ್ಗದರ್ಶನ, ಭಾವನಾತ್ಮಕ ಭರವಸೆ ಮತ್ತು ಕುಟುಂಬದ ಬೆಂಬಲವನ್ನು ಒದಗಿಸುವುದು ಇಂದಿನ ದಿನಗಳಲ್ಲಿ ಅತ್ಯಗತ್ಯವಾಗಿದೆ.**

**ಹಿಂದಿನ ತಲೆಮಾರುಗಳಲ್ಲಿ, ಮಹಿಳೆಯರನ್ನು ಗರ್ಭಾವಸ್ಥೆ ಮತ್ತು ಹೆರಿಗೆಗೆ ಭಾವನಾತ್ಮಕವಾಗಿ ಹಾಗೂ ಮಾನಸಿಕವಾಗಿ ಸಿದ್ಧಪಡಿಸುವಲ್ಲಿ ಅವಿಭಕ್ತ ಕುಟುಂಬಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ಈಗಿನ ಬದಲಾದ ಕುಟುಂಬ ರಚನೆಗಳ ಹಿನ್ನೆಲೆಯಲ್ಲಿ, ನಿರೀಕ್ಷಿತ ತಾಯಂದಿರಿಗೆ ಅಗತ್ಯವಿರುವ ಆರೈಕೆ, ಪ್ರೋತ್ಸಾಹ ಮತ್ತು ಬೆಂಬಲ ಸಿಗುವಂತೆ ನೋಡಿಕೊಳ್ಳಲು ಕುಟುಂಬಗಳು ಮತ್ತು ಆರೋಗ್ಯ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡಬೇಕಿದೆ.**

**"ಪ್ರತಿಯೊಬ್ಬ ತಾಯಿಯೂ ಆರೋಗ್ಯವಂತ ಮಗುವನ್ನು ಪಡೆಯಬೇಕೆಂದು ಕನಸು ಕಾಣುತ್ತಾಳೆ. ಗರ್ಭಾವಸ್ಥೆಯು ಜೀವನದ ಒಂದು ಅಮೂಲ್ಯವಾದ ಹಂತವಾಗಿದ್ದು, ಇದಕ್ಕೆ ವಿಶೇಷ ಆರೈಕೆ ಮತ್ತು ಗಮನದ ಅಗತ್ಯವಿರುತ್ತದೆ. ತಾಯಿ ಮತ್ತು ಮಗು ಇಬ್ಬರ ಆರೋಗ್ಯ, ಸುರಕ್ಷತೆ ಮತ್ತು ಭಾವನಾತ್ಮಕ ಯೋಗಕ್ಷೇಮ ನಮ್ಮ ಆದ್ಯತೆಯಾಗಿರಬೇಕು. ವೈದ್ಯಕೀಯವಾಗಿ ಸೂಕ್ತವೆನಿಸಿದ ಕಡೆಗಳಲ್ಲಿ ನೈಸರ್ಗಿಕ ಹೆರಿಗೆಯನ್ನು ಪ್ರೋತ್ಸಾಹಿಸಬೇಕು, ಅದೇ ಸಮಯದಲ್ಲಿ ಅಗತ್ಯವಿದ್ದಾಗ ತಕ್ಷಣವೇ ವೈದ್ಯಕೀಯ ನೆರವು ಲಭ್ಯವಾಗುವಂತೆ ನೋಡಿಕೊಳ್ಳಬೇಕು" ಎಂದು ಡಾ. ಮಂಜುನಾಥ್ ಒತ್ತಿ ಹೇಳಿದರು.**

**ಆರೋಗ್ಯ ಕ್ಷೇತ್ರದಲ್ಲಿ ಸಾಗರ್ ಕುಟುಂಬದ ಕೊಡುಗೆಯನ್ನು ಹಾಗೂ ಡಾ. ಚಂದ್ರಮ್ಮ ಸಾಗರ್ ಅವರ ವೈದ್ಯಕೀಯ ಪರಂಪರೆಯನ್ನು ಮುಂದುವರಿಸಲು ಅವರು ನಡೆಸುತ್ತಿರುವ ಪ್ರಯತ್ನಗಳನ್ನು ಡಾ. ಮಂಜುನಾಥ್ ಶ್ಲಾಘಿಸಿದರು. ಅಲ್ಲದೆ, ದಾವಣಗೆರೆಯಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಮೂಲಕ ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿರುವ ಕೊಡುಗೆಯನ್ನೂ ಅವರು ಗುರುತಿಸಿದರು. ಹೆರಿಗೆಗೆ ಶಾಂತ, ಸುರಕ್ಷಿತ ಮತ್ತು ಬೆಂಬಲ ನೀಡುವ ವಾತಾವರಣವನ್ನು ಒದಗಿಸಲು ವಿನ್ಯಾಸ ಗೊಳಿಸಲಾದ ನೈಸರ್ಗಿಕ ಹೆರಿಗೆ ಕೇಂದ್ರದ ಉದ್ಘಾಟನೆಯು ಈ ಕಾರ್ಯಕ್ರಮದ ಪ್ರಮುಖ ಅಂಶವಾಗಿತ್ತು. ಈ ಕೇಂದ್ರವು ವೈಯಕ್ತಿಕಗೊಳಿಸಿದ, ಸೂಲಗಿತ್ತಿ ನೇತೃತ್ವದ ಆರೈಕೆಯನ್ನು ಉತ್ತೇಜಿಸುವುದು ಮತ್ತು ವೈದ್ಯಕೀಯವಾಗಿ ಸೂಕ್ತವಾದಲ್ಲೆಲ್ಲಾ ಅನಗತ್ಯ ವೈದ್ಯಕೀಯ ಹಸ್ತಕ್ಷೇಪವನ್ನು ಕಡಿಮೆ ಮಾಡುವುದು, ತಾಯಿ ಮತ್ತು ಮಗುವಿನ ಸುರಕ್ಷತೆ ಮತ್ತು ಯೋಗಕ್ಷೇಮಕ್ಕೆ ಆದ್ಯತೆ ನೀಡುವುದು ಇದರ ಉದ್ದೇಶವಾಗಿದೆ.**

**100 ಕ್ಕೂ ಹೆಚ್ಚು ನಿರೀಕ್ಷಿತ ದಂಪತಿಗಳನ್ನು ಒಟ್ಟುಗೂಡಿಸಿದ ಈ ಕಾರ್ಯಕ್ರಮವು ಅಡುಗೆ, ನೆಡುವುದು, ದಂಪತಿಗಳ ಪ್ರಯಾಣವನ್ನು ಆಚರಿಸುವುದು ಮತ್ತು ಅವರ ಮಗುವನ್ನು ಸ್ವಾಗತಿಸುವುದು ಸೇರಿದಂತೆ ಸಂವಾದಾತ್ಮಕ ಚಟುವಟಿಕೆಗಳನ್ನು ಒಳಗೊಂಡಿತ್ತು. ಕಾರ್ಯಕ್ರಮದಲ್ಲಿ ಗರ್ಭಧಾರಣೆಯ ಯೋಗ, ಗರ್ಭಧಾರಣೆಯ ಭೌತಚಿಕಿತ್ಸೆ, ಹೆರಿಗೆ ಮತ್ತು ನವಜಾತ ಶಿಶು ಆರೈಕೆಯ ಕುರಿತು ತಜ್ಞರ ಅವಧಿಗಳು, ಬಳ್ಳಿಯ ರಕ್ತದ ಅರಿವು, ಧ್ವನಿ ಚಿಕಿತ್ಸೆ, ಕ್ರೋಶಾ ಕಾರ್ಯಾಗಾರ, ದಂತ ಆರೋಗ್ಯ ಜಾಗೃತಿ ಮತ್ತು ಸಾಂಸ್ಕೃತಿಕ ಪ್ರದರ್ಶನಗಳು ಸೇರಿವೆ. ಈ ಸಂದರ್ಭವು ಹಾಲು ಹಲ್ಲುಗಳ ಮಕ್ಕಳ ಮತ್ತು ಹೆರಿಗೆ ದಂತ ಚಿಕಿತ್ಸಾಲಯದ ಉದ್ಘಾಟನೆಯನ್ನು ಸಹ ಗುರುತಿಸಿತು, ಇದು ಸಮಗ್ರ ತಾಯಿ ಮತ್ತು ಮಕ್ಕಳ ಆರೋಗ್ಯ ರಕ್ಷಣೆಯ ಮಹತ್ವವನ್ನು ಮತ್ತಷ್ಟು ಎತ್ತಿ ತೋರಿಸುತ್ತದೆ.**

**ಈ ಕಾರ್ಯಕ್ರಮವು ಮಾಹಿತಿಯುಕ್ತ ಗರ್ಭಧಾರಣೆಯ ಆರೈಕೆ, ಭಾವನಾತ್ಮಕ ಬೆಂಬಲ ಮತ್ತು ಸಕಾರಾತ್ಮಕ ಹೆರಿಗೆ ಅನುಭವದ ಮಹತ್ವವನ್ನು ಪುನರುಚ್ಚರಿಸಿತು, ಅದೇ ಸಮಯದಲ್ಲಿ ನಿರೀಕ್ಷಿತ ಪೋಷಕರ ಜೀವನದಲ್ಲಿ ಹೊಸ ಅಧ್ಯಾಯದ ಆರಂಭವನ್ನು ಆಚರಿಸಿತು.**

**ಕಾರ್ಯಕ್ರಮದಲ್ಲಿ ಶಾಸಕ ಉದಯ್ ಗರುಡಾಚಾರ್, ದಯಾನಂದ ಸಾಗರ್ ಸಂಸ್ಥೆಗಳ ಜಂಟಿ ಕಾರ್ಯದರ್ಶಿ ನಿಶಾನ್, ಗೀತಾ ಹೇಮಚಂದ್ರ ಸಾಗರ್, ಮಕ್ಕಳ ವೈದ್ಯರು, ಆಸ್ಪತ್ರೆಯ ಅಧ್ಯಾಪಕ ಸದಸ್ಯರು, ಮತ್ತು ಹಲವಾರು ಇತರ ಗಣ್ಯ ಅತಿಥಿಗಳು ಭಾಗವಹಿಸಿದ್ದರು.**

# ಕರ್ನಾಟಕ ಬಿಜೆಪಿಯಲ್ಲೂ ಸಿ.ಡಿ. ಫ್ಯಾಕ್ಟರಿ ಇದೆ: ಯತ್ನಾಳ್ ಆರೋಪ



**ನವದೆಹಲಿ, ಅ.24:** ಕರ್ನಾಟಕ ರಾಜಕೀಯದಲ್ಲಿ ಸಿ.ಡಿ. ಮತ್ತು ಸ್ಟಿಂಗ್ ಆಪರೇಷನ್ ಚರ್ಚೆ ಜೋರಾಗಿರುವ ನಡುವೆ ಬಿಜೆಪಿಯಲ್ಲೂ ಸಿ.ಡಿ. ಫ್ಯಾಕ್ಟರಿ ಇದೆ. ಅಲ್ಲಿಯೂ ಕೆಲವು ಸ್ಟಿಂಗ್ ಆಪರೇಷನ್‌ಗಳು ನಡೆದಿವೆ. ಆ ಸಿ.ಡಿ.ಗಳು ಯಾವಾಗ ಹೊರಬರುತ್ತವೆ ಎಂಬುದನ್ನು ನೋಡಬೇಕು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ನವದೆಹಲಿಯಲ್ಲಿ ಮಾತನಾಡಿದ ಯತ್ನಾಳ್, ಕರ್ನಾಟಕದಲ್ಲಿ ಎರಡು ಸಿ.ಡಿ. ಫ್ಯಾಕ್ಟರಿಗಳಿವೆ ಎಂದು ತಾವು ಬಹಳ ಹಿಂದೆಯೇ ಹೇಳಿದ್ದೆ. ಒಂದು ಫ್ಯಾಕ್ಟರಿ ಯಾವುದೆಂದು ಗೊತ್ತಾಗಿದೆ. ಮತ್ತೊಂದು ಫ್ಯಾಕ್ಟರಿ ಬಿಜೆಪಿಯಲ್ಲೂ ಇದೆ. ಅದು ಕೂಡ ರಾಜಕೀಯ ಎದುರಾಳಿಗಳು ಹಾಗೂ ಭವಿಷ್ಯದಲ್ಲಿ ತಮಗೆ ಅಡ್ಡಿಯಾಗಬಹುದು ಎಂದು ಭಾವಿಸುವವರನ್ನು ಬ್ಲ್ಯಾಕ್‌ಮೇಲ್ ಮಾಡಲು ಬಳಸಲಾಗುತ್ತಿದೆ ಎಂಬ ಆರೋಪ ಮಾಡಿದರು.

ಸ್ಟಿಂಗ್ ಆಪರೇಷನ್ ಪ್ರಕರಣದ ವಿಚಾರವಾಗಿ ಬಿಜೆಪಿ ರಾಜ್ಯಾಧ್ಯಕ್ಷರು ಮಾತನಾಡುತ್ತಿಲ್ಲ ಯಾಕೆ ಎಂದು ಪ್ರಶ್ನಿಸಿದ ಯತ್ನಾಳ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಈ ವಿಚಾರವಾಗಿ ನಿರುತರುವಾಗಿ ವಾಗ್ದಾಳಿ ನಡೆಸುತ್ತಿದ್ದಾರೆ. ಕೆಪಿಸಿಸಿ ಮಾಜಿ ಅಧ್ಯಕ್ಷ ಹಾಗೂ ಹಾಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೆಸರನ್ನೂ ಈ ವಿಚಾರದಲ್ಲಿ ನೇರವಾಗಿ ಪ್ರಸ್ತಾಪಿಸಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಕೆಲವರು ನೇರವಾಗಿ ಆರೋಪಗಳನ್ನು ಮಾಡುತ್ತಿದ್ದರೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ. ದೇಶದಲ್ಲೇ ಇಂತಹ ರಾಜಕೀಯ ಬೆಳವಣಿಗೆ ಕೆಟ್ಟ ಬೆಳವಣಿಗೆಯಾಗಿದೆ ಎಂದು ಯತ್ನಾಳ್ ಅಭಿಪ್ರಾಯಪಟ್ಟರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒಳಗೊಂಡಿದೆ ಎನ್ನಲಾದ ಸ್ಟಿಂಗ್ ಆಪರೇಷನ್ ಪ್ರಕರಣದ ಬಗ್ಗೆಯೂ ಮಾತನಾಡಿದ ಯತ್ನಾಳ್, ರಾಜಕೀಯ ಎದುರಾಳಿಗಳನ್ನು ಬ್ಲ್ಯಾಕ್‌ಮೇಲ್ ಮಾಡುವ ಪ್ರವೃತ್ತಿ ಬೆಳೆದಿದೆ. ಈ ಪ್ರಕರಣದಲ್ಲಿ ತಮ್ಮ ಪಕ್ಷದ ಬಿ.ವೈ. ವಿಜಯೇಂದ್ರ ಅಥವಾ ಆರ್. ಅಶೋಕ್ ಸೇರಿದಂತೆ ಹಲವರ ಪಾತ್ರವಿಲ್ಲ, ಬೇರೆ ಪಕ್ಷದವರು ಅಥವಾ ಎಚ್.ಡಿ. ಕುಮಾರಸ್ವಾಮಿ ಈ ಕೃತ್ಯ ಎಸಗಿದ್ದಾರೆ ಎಂದೂ ಹೇಳುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

## ಕಲಾವಿದರ ಸೇವೆಗೆ ಪ್ರಿಂಟ್ ಬಿನಾಲೆ ಇಂಡಿಯಾ ಗೌರವ ಬಸವರಾಜಾಚಾರ್‌ಗೆ ಪ್ರಶಸ್ತಿ ಪ್ರದಾನ ಮಾಡಿದ ರಾಷ್ಟ್ರಪತಿ



**ಬೆಂಗಳೂರು:** ದೆಹಲಿಯಲ್ಲಿ ನಡೆದ ಪ್ರಿಂಟ್ ಬಿನಾಲೆ ಇಂಡಿಯಾ 2026 ಪ್ರಶಸ್ತಿ ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕು ಕಬ್ಬೂರು ಗ್ರಾಮದ ಕಲಾವಿದ ಕೆ.ಆರ್. ಬಸವರಾಜಾಚಾರ್ ಅವರಿಗೆ ಲಭಿಸಿದೆ.

ದೆಹಲಿಯ ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕಲಾವಿದ ಕೆ.ಆರ್. ಬಸವರಾಜಾಚಾರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಕೇಂದ್ರ ಸಂಸ್ಕೃತಿ ಸಚಿವ ಗಜೇಂದ್ರಸಿಂಗ್ ಶೇಖಾವತ್, ಸಚಿವಾಲಯದ ಕಾರ್ಯದರ್ಶಿ ವಿವೇಕ್ ಅಗರ್ವಾಲ್ ಉಪಸ್ಥಿತರಿದ್ದರು. ಪ್ರಿಂಟ್ ಮೇಕಿಂಗ್ ಮಾಧ್ಯಮದ 3ನೇ ಹಾಗೂ 5ನೇ ಅಂತರರಾಷ್ಟ್ರೀಯ ಲೈಫ್ಟೈಮ್ ಸ್ಕಿಲ್ಸ್ ವಿಭಾಗದಲ್ಲಿ ಕರ್ನಾಟಕದ ಕಲಾಕೃತಿಗಳನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಸಂಸ್ಕೃತಿ ಸಚಿವಾಲಯ ಹಾಗೂ ಕೇಂದ್ರ ಲಲಿತಕಲಾ ಅಕಾಡೆಮಿ ಈ ಪ್ರದರ್ಶನ ಆಯೋಜನೆಯನ್ನು ಮಾಡಿದ್ದವು. ಈ ಕಲಾಪ್ರದರ್ಶನದಲ್ಲಿ 34 ದೇಶಗಳ 1,449 ಕಲಾಕೃತಿಗಳು ಭಾಗವಹಿಸಿದ್ದವು. ಇದರಲ್ಲಿ ತೀರ್ಪುಗಾರರ ತಂಡವು 204 ಕಲಾಕೃತಿಗಳನ್ನು ಪ್ರದರ್ಶನಕ್ಕೆ ಆಯ್ಕೆ ಮಾಡಿತ್ತು.

ಪ್ರದರ್ಶನದಲ್ಲಿ ಅತ್ಯುತ್ತಮ ಕಲಾಕೃತಿ ಪ್ರದರ್ಶನ ಮಾಡಿದ ಫ್ರಾನ್ಸ್, ಪೋಲೆಂಡ್, ಕೊರಿಯಾ ಹಾಗೂ ಭಾರತದ ಇಬ್ಬರು ಕಲಾವಿದರು ಸೇರಿ ಐವರು ಆಯ್ಕೆಯಾದರು. ಪ್ರಶಸ್ತಿಯು 2 ಲಕ್ಷ ರೂ. ನಗದು ಬಹುಮಾನ ಒಳಗೊಂಡಿದೆ.

ಕರ್ನಾಟಕದ ಕಲಾವಿದ ಕೆ.ಆರ್. ಬಸವರಾಜಾಚಾರ್ ಅವರಿಗೆ ಪ್ರಿಂಟ್ ಬಿನಾಲೆ ಪ್ರಶಸ್ತಿ ಲಭಿಸಿರುವುದು ನಾಡಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ಕಲಾವಿದರ ಬಳಗ ಅಭಿನಂದಿಸಿದೆ.

## ಆಯುಕ್ತರ ದೂರಿಗೆ ತಡೆ: ಸಿಇಸಿಗೆ ಕೇಂದ್ರ ಪತ್ರ

**ನವದೆಹಲಿ, ಅ.24:** ಈಗಾಗಲೇ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಇನ್ನಿಬ್ಬರು ಆಯುಕ್ತರ ಅಭಿಪ್ರಾಯವನ್ನು ಪರಿಗಣಿಸದೆ ಏಕಪಕ್ಷೀಯ ನಿರ್ಧಾರವನ್ನು ಕೈಗೊಂಡಿದ್ದಾರೆ ಎಂಬುದು ತನಿಖಾ ವರದಿಯ ಮೂಲಕ ಬಹಿರಂಗವಾಗಿದೆ. ಇದೀಗ ಕೇಂದ್ರ ಚುನಾವಣಾ ಆಯೋಗದ (ಇಸಿಐ) ಆಂತರಿಕ ಆಡಳಿತ ಮತ್ತು ಕಾರ್ಯವೈಖರಿಯ ಕುರಿತು ಉನ್ನತ ಮಟ್ಟದಲ್ಲಿ ನಡೆಯುತ್ತಿರುವ ಶೀತಲ ಸಮರಕ್ಕೆ ಸಂಬಂಧಿಸಿದಂತೆ ಮಹತ್ವದ ಮಾಹಿತಿ ಹೊರಬಿದ್ದಿದೆ.

ಆಯೋಗದ ಇಬ್ಬರು ಹಿರಿಯ ಚುನಾವಣಾ ಆಯುಕ್ತರು ಅಂದಿನ ಆಡಳಿತಾತ್ಮಕ ಬದಲಾವಣೆಗಳ ವಿರುದ್ಧ ಕೇಂದ್ರದ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಸಂಸತ್ತು ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಆದರೆ ದೂರು ಪತ್ರಗಳ ಮೇಲೆ ಸರ್ಕಾರ ಯಾವುದೇ ನೇರ ಕ್ರಮ ಜರುಗಿಸದೆ, ಆ ಪತ್ರಗಳನ್ನು ಮುಖ್ಯ ಚುನಾವಣಾ ಆಯುಕ್ತರ (ಸಿಇಸಿ) ಕಚೇರಿಗೆ ರವಾನಿಸಿದೆ ಎಂಬ ಅಂಶವು ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯಡಿ ಲಭ್ಯವಾದ ದಾಖಲೆಗಳಿಂದ ಅಧಿಕೃತವಾಗಿ ಬಹಿರಂಗಗೊಂಡಿದೆ.

ದೇಶದ ಹಿರಿಯ ಆರ್‌ಟಿಐ ಕಾರ್ಯಕರ್ತ ಮತ್ತು ನಿವೃತ್ತ ಕಮೊಡೋರ್ ಲೋಕೇಶ್ ಬಾತ್ರಾ ಅವರು ಸಲ್ಲಿಸಿದ್ದ ಮಾಹಿತಿ ಹಕ್ಕು ಅರ್ಜಿಗೆ ಸಚಿವಾಲಯ ಪ್ರತಿಕ್ರಿಯಿಸಿದೆ. ಚುನಾವಣಾ ಆಯುಕ್ತರಾದ ವಿವೇಕ್ ಜೋಶಿ ಮತ್ತು ಸುಖಬೀರ್ ಸಿಂಗ್ ಸಂಧು ಅವರು ಕಳೆದ ವರ್ಷದ ಜುಲೈ 29ರಂದು ಸಂಸತ್ತು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಅವರಿಗೆ ಪ್ರತ್ಯೇಕವಾಗಿ ಗಂಭೀರ ವಿಚಾರಗಳ ಬಗ್ಗೆ ಪತ್ರಗಳನ್ನು ಬರೆದಿದ್ದರು. ಹಿರಿಯ ಉಪ ಚುನಾವಣಾ ಆಯುಕ್ತರಾದ (ಹಿರಿಯ ಡಿಇಸಿ) ಮನೀಶ್ ಗಾರ್ಗ್ ಅವರು ಜುಲೈ 28ರಂದು ಹೊರಡಿಸಿದ್ದ ಆಡಳಿತಾತ್ಮಕ ಕೆಲಸದ ಮರುಹಂಚಿಕೆ ಆದೇಶದ ಕುರಿತು ಆಯುಕ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು.

ಆಯೋಗದ ಇತರೆ ಸದಸ್ಯರ ಅಥವಾ ಚುನಾವಣಾ ಆಯುಕ್ತರ ಮುಂಚಿತ ಒಪ್ಪಿಗೆಯಿಲ್ಲದೆ ಅಥವಾ ಯಾವುದೇ ಚರ್ಚೆ ನಡೆಸದೆ ಹಿರಿಯ ಅಧಿಕಾರಿ ಮನೀಶ್ ಗಾರ್ಗ್ ಅವರು ತಮ್ಮ ಜವಾಬ್ದಾರಿಯ ಮಿತಿಯನ್ನು ಮೀರಿ ಕೆಲಸದ ಹಂಚಿಕೆ ಮಾಡಿಕೊಂಡಿದ್ದಾರೆ ಎಂಬುದು ಇಬ್ಬರ ಪ್ರಮುಖ ಆರೋಪವಾಗಿತ್ತು.

ಇದು 2023ರ ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರೆ ಚುನಾವಣಾ ಆಯುಕ್ತರ (ನಿಯುಕ್ತಿ, ಸೇವಾ ಷರತ್ತುಗಳು ಮತ್ತು ಅಧಿಕಾರಾವಧಿ) ಕಾಯ್ದೆಯ ಸೆಕ್ಷನ್ 18(1) ಮತ್ತು 18(2) ರ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಆಯುಕ್ತರು ತಮ್ಮ ಪತ್ರದಲ್ಲಿ ಬಲವಾಗಿ ಪ್ರತಿಪಾದಿಸಿದ್ದರು. ಅಲ್ಲದೆ, ಆಡಳಿತ ವಿಭಾಗದಿಂದ ತಮಗೆ ಅಗತ್ಯವಿರುವ ಅಧಿಕೃತ ಕಡತಗಳನ್ನು ಕೇಳಿದರೂ ನೀಡದೆ ತಡೆಯಲಾಗಿದೆ ಎಂದು ವಿವೇಕ್ ಜೋಶಿ ದೂರಿದ್ದರು.ಈ ದೂರುಗಳನ್ನು ಸ್ವೀಕರಿಸಿ ಕಡತದಲ್ಲಿ ಕೆಲವು ಸಂಸತ್ತಿನ ಸಚಿವಾಲಯವು ಅಭಿಪ್ರಾಯಗಳನ್ನು ದಾಖಲಿಸಿದೆ. ಚುನಾವಣಾ ಆಯುಕ್ತರು ಬರೆದಿರುವ ಈ ಪತ್ರಗಳು ಇಡೀ ಆಯೋಗದ ಅಧಿಕೃತ ನಿರ್ಣಯವಾಗಿರದೆ, ಅವರ ವೈಯಕ್ತಿಕ ಸಾಮರ್ಥ್ಯದಲ್ಲಿ ಬರೆದ ಪತ್ರಗಳಾಗಿವೆ ಎಂದು ಸಚಿವಾಲಯ ಅಭಿಪ್ರಾಯಪಟ್ಟಿದೆ.

ಭಾರತೀಯ ಚುನಾವಣಾ ಆಯೋಗವು ಒಂದು ಸ್ವಾಯತ್ತ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಇದರ ಆಂತರಿಕ ವಿಷಯಗಳಲ್ಲಿ ಅಥವಾ ಅಧಿಕಾರಿಗಳ ಮೇಲಿನ ಆಡಳಿತಾತ್ಮಕ ದೂರುಗಳಲ್ಲಿ ಕಾರ್ಯಾಂಗವು (ಸರ್ಕಾರ) ನೇರವಾಗಿ ಹಸ್ತಕ್ಷೇಪ ಮಾಡುವುದು ಸರಿಯಲ್ಲ. ಇದು ಸಂಸ್ಥೆಯ ಸ್ವಾಯತ್ತತೆಗೆ ಧಕ್ಕೆ ತಂದಂತೆ ಬಿಂಬಿತವಾಗಬಹುದು ಎಂದೂ ಹೇಳಿಕೊಂಡಿದೆ. ಆದರೆ ಚುನಾವಣಾ ಆಯೋಗವೇ ಕೇಂದ್ರ ಸರ್ಕಾರದ ಕೈಗೊಂಬೆಯಾಗಿರುವಾಗ ಅಧಿಕಾರಿಗಳು ಮಾಡುವುದೇನು ಎಂಬ ಪ್ರಶ್ನೆ ಈಗ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯಾಗುತ್ತಿವೆ.

ಕಾನೂನಿನ ಪ್ರಕಾರ ಸಿಇಸಿ ಮತ್ತು ಚುನಾವಣಾ ಆಯುಕ್ತರು ಸಮಾನರಾಗಿದ್ದು, ಯಾವುದೇ ನಿರ್ಧಾರಗಳನ್ನು ಕಾಯ್ದೆಯ ನಿಯಮಾನುಸಾರ ಬಹುಮತ ಅಥವಾ ಸರ್ವಸಮ್ಮತಿಯಿಂದ ಕೈಗೊಳ್ಳಬೇಕೇ ಹೊರತು ನೇರ ಸರ್ಕಾರಿ ಮಧ್ಯಸ್ಥಿಕೆಯಿಂದಲ್ಲ ಎಂದೂ ಹೇಳಿದೆ.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಕ್ಯಾಬಿನೆಟ್ ಕಾರ್ಯದರ್ಶಿಯವರು ಆ ಪತ್ರಗಳ ಮೇಲೆ ನೇರ ಶಿಸ್ತು ಕ್ರಮ ಜರುಗಿಸುವುದನ್ನು ತಪ್ಪಿಸಿದರು. ಬದಲಾಗಿ, ಆ ಪತ್ರಗಳ ಪ್ರತಿಗಳನ್ನು ಮುಖ್ಯ ಚುನಾವಣಾ ಆಯುಕ್ತರ (ಸಿಇಸಿ) ಕಚೇರಿಯ ಮಾಹಿತಿಗಾಗಿ ರವಾನಿಸಲಾಗಿದೆ. ಇದರೊಂದಿಗೆ, ಹಿರಿಯ ಅಧಿಕಾರಿ ಮನೀಶ್ ಗಾರ್ಗ್ ಅವರು ಐಎಎಸ್ ಅಧಿಕಾರಿಯಾಗಿರುವುದರಿಂದ ಅವರ ಸೇವಾ ದಾಖಲೆ ಮತ್ತು ಮುಂದಿನ ಆಡಳಿತಾತ್ಮಕ ನಿರ್ಧಾರಗಳ ದೃಷ್ಟಿಯಿಂದ ಈ ಪತ್ರಗಳ ಒಂದು ಪ್ರತಿಯನ್ನು ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ದಾಖಲೆಗಾಗಿ ಕಳುಹಿಸಿಕೊಡಲಾಯಿತು.ಈ ಆರ್‌ಟಿಐ ಬಹಿರಂಗಪಡಿಸುವಿಕೆಯು ಚುನಾವಣಾ ಆಯೋಗದ ಉನ್ನತ ವಲಯದಲ್ಲಿ ನಡೆಯುತ್ತಿರುವ ಆಡಳಿತಾತ್ಮಕ ಸಂಘರ್ಷಗಳನ್ನು ಹೊರಹಾಕಿದೆ. ಚುನಾವಣಾ ಪ್ರಕ್ರಿಯೆ ಮತ್ತು ಸಾಂವಿಧಾನಿಕ ಸಂಸ್ಥೆಗಳ ಒಳಗಿನ ಪಾರದರ್ಶಕತೆ, ಜವಾಬ್ದಾರಿ, ಮೇಲ್ವಿಚಾರಣೆಯ ಕುರಿತು ಈ ಬೆಳವಣಿಗೆಯು ರಾಜಕೀಯ ಹಾಗೂ ಕಾನೂನು ವಲಯದಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

## ಮೆಟಾ ಕನ್ನಡಕ ಧರಿಸಿ ನನ್ನ ವಿರುದ್ಧ ಸ್ಟಿಂಗ್ ಆಪರೇಷನ್‌ಗೆ ಯತ್ನ: ಸಿಎಂ

**ಬೆಂಗಳೂರು, ಅ. 24:** ಸ್ಟಿಂಗ್ ಆಪರೇಷನ್ ವಿವಾದ ತೀವ್ರಗೊಂಡಿರುವ ಬೆನ್ನಲ್ಲೇ, ಮೆಟಾ ಎಐ ಕನ್ನಡಕ ಧರಿಸಿದ್ದ ಉದ್ಯಮಿಯೊಬ್ಬರು ಇತ್ತೀಚೆಗೆ ತಮ್ಮನ್ನು ಭೇಟಿಯಾಗಿದ್ದರು. ಈ ವೇಳೆ ಅವರು ತಮ್ಮ ಮೇಲೆ ಕಣ್ಣಿಡುವ ಉದ್ದೇಶದಿಂದ ಬಂದಿರಬಹುದು ಎಂಬ ಅನುಮಾನ ಮೂಡಿತ್ತು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ದೇವರು ನನಗೆ ಒಂದು ಶಕ್ತಿಯನ್ನು ಕೊಟ್ಟಿದ್ದಾನೆ. ಅದೇನೆಂದರೆ, ಮುಖಭಾವಗಳನ್ನು ಓದುವ ಶಕ್ತಿ. ನನ್ನ ಅನುಭವದ ಆಧಾರದ ಮೇಲೆ ಯಾರೊಬ್ಬರು ನನ್ನ ಬಳಿಗೆ ಏಕೆ ಬಂದಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಲ್ಲೆ. ಪ್ರತಿದಿನ ಸಾವಿರಾರು ಜನರು ನನ್ನನ್ನು ಭೇಟಿಯಾಗುತ್ತಾರೆ. ಅವರ ಮುಖಭಾವಗಳನ್ನು ನಾನು ಓದಬಲ್ಲೆ ಎಂದು ಡಿ.ಕೆ ಶಿವಕುಮಾರ್ ಹೇಳಿದ್ದಾರೆ.

ಉದ್ಯಮಿಯೊಬ್ಬರು ನನ್ನನ್ನು ಭೇಟಿಯಾಗಿ ವ್ಯವಹಾರದ ಬಗ್ಗೆ ಚರ್ಚಿಸಲು ಬಂದಿದ್ದರು. ಅಧಿಕಾರಿಗಳು ಅವರ ಭೇಟಿಗೆ ಸಮಯ ನಿಗದಿಪಡಿಸಿದ್ದರು. ಅವರು ನನ್ನನ್ನು ಆಂಟೆ ಚೇಂಬರ್‌ಗೆ ಕರೆದೊಯ್ದು ತಮ್ಮ ಲ್ಯಾಪ್‌ಟಾಪ್ ತೆರೆದರು. ತಮ್ಮ ಕಂಪನಿ ಅಥವಾ ವ್ಯವಹಾರದ ಬಗ್ಗೆ ಮಾತನಾಡುವ ಬದಲು, ಅವರು ರಾಜಕೀಯ ಮತ್ತು ಚುನಾವಣಾ ವಿಶ್ಲೇಷಣೆಯ ಬಗ್ಗೆ ಚರ್ಚಿಸಲು ಆರಂಭಿಸಿದರು. ಚುನಾವಣಾ ವಿಶ್ಲೇಷಕರಂತೆ ಯಾವ ಮತಗಟ್ಟೆಯಲ್ಲಿ ಏನು ಮಾಡಬಹುದು ಎಂಬುದನ್ನು ವಿವರಿಸಲಾರಂಭಿಸಿದರು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಇದರಿಂದ ನನಗೆ ಅನುಮಾನ ಮೂಡಿತು. ಹೀಗಾಗಿ, ಅವರ ಬಗ್ಗೆ ಹಾಗೂ ಅವರ ಹಿನ್ನೆಲೆಯ ಕುರಿತು ತನಿಖೆ ನಡೆಸುವಂತೆ ಸೂಚಿಸಿದೆ ಎಂದು ತಿಳಿಸಿದ್ದಾರೆ.

ಸ್ಟಿಂಗ್ ಆಪರೇಷನ್ ಮಾಡಲು ಬಂದ ವ್ಯಕ್ತಿ ನನ್ನನ್ನು ಮತ್ತು ಕೇರಳ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರನ್ನು ಭೇಟಿ ಮಾಡಿದ್ದಾರೆ. ಆಗ ಮೆಟಾ ಕನ್ನಡಕ ಧರಿಸಿದ್ದರು ಎಂದು ಹೇಳಿದ್ದಾರೆ. ಆದರೆ ಆ ವ್ಯಕ್ತಿ ಯಾರು, ಅವರ ಹೆಸರೇನು, ಹಿನ್ನಲೆಯೇನು ಎಂದು ಸಿಎಂ ಬಹಿರಂಗಪಡಿಸಿಲ್ಲ.

## ಮೊದಲ ಬಜೆಟ್ ಮಂಡನೆಗೆ ಮುಖ್ಯಮಂತ್ರಿ ಡಿಕೆಶಿ ಸಿದ್ಧತೆ

**ಬೆಂಗಳೂರು, ಅ.24:** 2027–28ನೇ ಸಾಲಿನ ಬಜೆಟ್ ಅಂದಾಜುಗಳನ್ನು ಸಿದ್ಧಪಡಿಸುವಂತೆ ಹಣಕಾಸು ಇಲಾಖೆಯು ಎಲ್ಲಾ ಇಲಾಖೆಗಳಿಗೆ ಸುತ್ತೋಲೆಯನ್ನು ಹೊರಡಿಸಿದೆ.

ನಿಗದಿತ ವೇಳಾಪಟ್ಟಿಯನ್ನು ಅನುಸರಿಸುವಂತೆ ಇಲಾಖೆಗಳಿಗೆ ಸೂಚಿಸಲಾಗಿದೆ. ವಾಸ್ತವಿಕ ಪ್ರಸ್ತಾವನೆಗಳನ್ನು ಸಲ್ಲಿಸುವಂತೆಯೂ ಮತ್ತು ಹೆಚ್ಚುವರಿ ಅನುದಾನಕ್ಕಾಗಿ ಬೇಡಿಕೆ ಇಡುವುದನ್ನು ತಪ್ಪಿಸುವಂತೆಯೂ ಅವರಿಗೆ ತಿಳಿಸಲಾಗಿದೆ. ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಮಂಡಿಸಲಿರುವ ಮೊದಲ ಬಜೆಟ್ ಇದಾಗಲಿದೆ.



ಅಂದಾಜುಗಳನ್ನು ಸಿದ್ಧಪಡಿಸುವ ಅಧಿಕಾರಿಗಳು, ತಮ್ಮ ಇಲಾಖಾ ಮುಖ್ಯಸ್ಥರಿಗೆ ಮತ್ತು ಆಂತರಿಕ ಹಣಕಾಸು ಸಲಹೆಗಾರರಿಗೆ ಅಂದಾಜುಗಳನ್ನು ಸಲ್ಲಿಸಬೇಕೆಂದು ಹಣಕಾಸು ಇಲಾಖೆ ನಿರ್ದೇಶಿಸಿದೆ. ಪರಿಶೀಲನೆಯ ನಂತರ, ಈ ಅಂದಾಜುಗಳನ್ನು ನಿಗದಿತ ಗಡುವಿಗೂ ಮುನ್ನವೇ ಹಣಕಾಸು ಇಲಾಖೆಗೆ ಕಳುಹಿಸಿಕೊಡಲಾಗುತ್ತದೆ. ಮೂಲ ಬಜೆಟ್ ಸಿದ್ಧಪಡಿಸುವಾಗಲೇ ಊಹಿಸಬಹುದಾಗಿದ್ದ ವಿಷಯಗಳಿಗಾಗಿ, ಆರ್ಥಿಕ ವರ್ಷದ ಮೊದಲ ಮೂರು ತಿಂಗಳ ಒಳಗಾಗಿಯೇ ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ಕೋರಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಆದ್ದರಿಂದ, ಪದೇ ಪದೇ ಹೆಚ್ಚುವರಿ ಅನುದಾನಕ್ಕಾಗಿ ಮನವಿ ಮಾಡುವುದನ್ನು ತಪ್ಪಿಸಲು, ತಮ್ಮ ಇಲಾಖೆಗಳ ಆರ್ಥಿಕ ಅಗತ್ಯಗಳನ್ನು ನಿಖರವಾಗಿ ಮೌಲ್ಯಮಾಪನ ಮಾಡಿ, ವಾಸ್ತವಿಕ ಅಂದಾಜುಗಳನ್ನು ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಸರ್ಕಾರದ 'ಗ್ಯಾರಂಟಿ ಯೋಜನೆ'ಗಳಿಗೆ ಬಜೆಟ್‌ನ ಬಹುದೊಡ್ಡ ಪಾಲು ಹಣ ವಿನಿಯೋಗವಾಗುತ್ತಿದೆ ಎಂದು ಹಣಕಾಸು ಇಲಾಖೆಯ ಮೂಲಗಳು ತಿಳಿಸಿವೆ. ಇದು ರಾಜ್ಯದ ಮೇಲೆ ಹೊರೆಯಾಗಿದೆ. ಫಲಾನುಭವಿಗಳ ಪರಿಶೀಲನೆ ನಡೆಯುತ್ತಿರುವುದರಿಂದ, 2027–28ನೇ ಸಾಲಿನಲ್ಲಿ ಗ್ಯಾರಂಟಿ ಯೋಜನೆಗಳಿಗೆ ಮೀಸಲಿಡುವ ಅನುದಾನದ ಮೊತ್ತ ಕಡಿಮೆಯಾಗುವ ನಿರೀಕ್ಷೆಯಿದೆ.

ಹಿಂದಿನ ವರ್ಷಗಳ ನೈಜ ವೆಚ್ಚ ಮತ್ತು 2026–27ನೇ ಸಾಲಿನ ಪರಿಷ್ಕೃತ ಅಂದಾಜುಗಳನ್ನು ಪರಿಶೀಲಿಸಿದ ನಂತರವೇ ಹೊಸ ಅಂದಾಜುಗಳನ್ನು ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅತಿಯಾದ ಅನುದಾನವನ್ನು ಕೋರಿ, ಆರ್ಥಿಕ ವರ್ಷ ಪ್ರಾರಂಭವಾದ ತಕ್ಷಣವೇ ಮತ್ತೆ ಹೆಚ್ಚುವರಿ ಅನುದಾನಕ್ಕಾಗಿ ಸರ್ಕಾರವನ್ನು ಸಂಪರ್ಕಿಸದಂತೆ ಇಲಾಖೆಗಳಿಗೆ ಎಚ್ಚರಿಕೆ ನೀಡಲಾಗಿದೆ.

ಈ ಸುತ್ತೋಲೆಯನ್ನು ಎಲ್ಲಾ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಆಂತರಿಕ ಹಣಕಾಸು ಸಲಹೆಗಾರರು ಮತ್ತು ಇತರ ಅಧಿಕಾರಿಗಳಿಗೆ ಕಳುಹಿಸಲಾಗಿದೆ.

ಅಂದಾಜುಗಳನ್ನು ಸಲ್ಲಿಸಲು ನವೆಂಬರ್ 21 ಅನ್ನು ಗಡುವಾಗಿ ಹಣಕಾಸು ಇಲಾಖೆ ನಿಗದಿಪಡಿಸಿದೆ. ಈ ಮಾರ್ಗಸೂಚಿಗಳು ವೇತನ ಮತ್ತು ವೇತನೇತರ ವೆಚ್ಚಗಳು, ಅನುದಾನಗಳು , ಸಾಲಗಳು ಮತ್ತು ಮುಂಗಡಗಳು, ನಿರ್ದಿಷ್ಟ ಮಾನದಂಡಗಳನ್ನು ಆಧರಿಸಿದ ಯೋಜನೆಗಳು ಹಾಗೂ ಇತರ ಬಜೆಟ್ ನಿಬಂಧನೆಗಳನ್ನು ಒಳಗೊಂಡಿವೆ. ವೇತನಕ್ಕೆ ಸಂಬಂಧಿಸಿದ ಅಂದಾಜುಗಳನ್ನು ಸಿದ್ಧಪಡಿಸುವಾಗ ಸಿಬ್ಬಂದಿ ಅಗತ್ಯ, ಖಾಲಿ ಹುದ್ದೆಗಳು ಮತ್ತು ಕಡ್ಡಾಯವಾಗಿ ಭರಿಸಬೇಕಾದ ವೆಚ್ಚಗಳನ್ನು ಪರಿಗಣಿಸುವಂತೆ ಇಲಾಖೆಗಳಿಗೆ ತಿಳಿಸಲಾಗಿದೆ. ಅಲ್ಲದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನಿತ ಯೋಜನೆಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಸಲ್ಲಿಸುವಂತೆಯೂ ಸೂಚಿಸಲಾಗಿದೆ.

## ಕೆಪಿಎಸ್‌ಸಿ ಹಗರಣ:ಜ್ಞಾನೇಂದ್ರ ಕುಮಾರ್ ವಿರುದ್ಧ ಕ್ರಮಕ್ಕೆ ಸಿಎಂ ಅಸ್ತು

**ಬೆಂಗಳೂರು, ಅ.24:** ಕೆಪಿಎಸ್‌ಸಿ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಅಮಾನತುಗೊಂಡ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ವಿರುದ್ಧ ಕಾನೂನು ಕ್ರಮ ಜರುಗಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅನುಮತಿ ನೀಡಿದ್ದಾರೆ. ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಹಣಕಾಸಿನ ಅಕ್ರಮಗಳು ನಡೆದಿವೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಈ ಬೆಳವಣಿಗೆ ಪ್ರಕರಣದ ತನಿಖೆಗೆ ಮತ್ತಷ್ಟು ಮಹತ್ವ ನೀಡಿದೆ. ಜಾರಿ ನಿರ್ದೇಶನಾಲಯದ ತನಿಖೆಯಲ್ಲಿ ಹೊರಬಂದಿರುವ ಅಂಶಗಳ ಪ್ರಕಾರ, ಪ್ರಕರಣದ ಪ್ರಮುಖ ಶಂಕಿತರಲ್ಲಿ ಒಬ್ಬರಾದ ಬಸವರಾಜ ಕನ್ನಾಳೆ ಅವರು ಗಂಗ್ವಾರ್ ಅವರಿಗೆ 1.3 ಕೋಟಿ ರೂಪಾಯಿ ನಗದು ನೀಡಿರುವ ಆರೋಪವಿದೆ.ತನಿಖಾ ಮಾಹಿತಿಯ ಪ್ರಕಾರ, ಪರೀಕ್ಷೆ ನಡೆಯುವುದಕ್ಕೆ ಎರಡು ದಿನಗಳ ಮೊದಲು, ಜನವರಿ 7ರಂದು, ಗಂಗ್ವಾರ್ ಅವರು ಎಚ್‌ಪಿ ಪೆನ್‌ಡ್ರೈವ್‌ನಲ್ಲಿ ಪ್ರಶ್ನೆಪತ್ರಿಕೆಗಳು ಮತ್ತು ಉತ್ತರಗಳನ್ನು ಬಸವರಾಜ ಕನ್ನಾಳೆ ಅವರಿಗೆ ನೀಡಿದ್ದರು ಎಂಬ ಆರೋಪ ಕೇಳಿಬಂದಿದೆ. ಈ ಮಾಹಿತಿಯು ಪರೀಕ್ಷೆಯ ಗೌಪ್ಯತೆ ಮತ್ತು ನೇಮಕಾತಿ ಪ್ರಕ್ರಿಯೆಯ ಪಾರದರ್ಶಕತೆಯ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧ ತನಿಖಾ ಇಲಾಖೆ ನಡೆಸಿದ ಪ್ರತ್ಯೇಕ ತನಿಖೆಯಲ್ಲಿ ಸುಮಾರು 60ರಿಂದ 80 ಪ್ರಶ್ನೆಗಳು ಅಭ್ಯರ್ಥಿಗಳಿಗೆ ಸೋರಿಕೆಯಾಗಿರುವುದು ಪತ್ತೆಯಾಗಿದೆ ಎಂದು ವರದಿಯಾಗಿದೆ. ಅಲ್ಲದೆ, ಸುಮಾರು ಐವರು ಅಭ್ಯರ್ಥಿಗಳಿಗೆ ಸೋರಿಕೆಯಾದ ಪ್ರಶ್ನೆಗಳಿಗೆ ಉತ್ತರಿಸುವ ಕುರಿತು ತರಬೇತಿ ನೀಡಲಾಗಿತ್ತು ಎಂಬ ಅಂಶವೂ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

### ಭ್ರಷ್ಟಾಚಾರಕ್ಕೆ ಅವಕಾಶವಿಲ್ಲ, ತಪ್ಪಿತಸ್ಥರಿಗೆ ರಕ್ಷಣೆ ಇಲ್ಲ

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಾಗಿದೆ. ಯುವಜನತೆಯ ಭವಿಷ್ಯದ ಜೊತೆ ಆಟವಾಡುವ ಯಾವುದೇ ಕೃತ್ಯಗಳನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸಾರ್ವಜನಿಕ ನೇಮಕಾತಿ ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ತರುವ ಭ್ರಷ್ಟಾಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಆಡಳಿತದಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಗೆ ಆದ್ಯತೆ ನೀಡುವುದು ನಮ್ಮ ಬದ್ಧತೆ. ನಮ್ಮ ಸರ್ಕಾರದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿಲ್ಲ, ಆಡಳಿತಕ್ಕೆ ಕಪ್ಪುಚುಕ್ಕೆ ತರುವ ಕೃತ್ಯಗಳಿಗೆ ಮನ್ನಣೆಯಿಲ್ಲ ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಟ್ವೀಟ್ ಮಾಡಿದ್ದಾರೆ.

**ತನಿಖೆ ಮತ್ತು ಬಂಧನದ ವಿವರ:**

ಗಂಗ್ವಾರ್ ಅವರನ್ನು ಕರ್ನಾಟಕ ಸಿಐಡಿ ಆಗಸ್ಟ್ 29ರಂದು ಬಂಧಿಸಿತ್ತು. ಬಳಿಕ ರಾಜ್ಯ ಸರ್ಕಾರ ಸೆಪ್ಟೆಂಬರ್ ಆರಂಭದಲ್ಲಿ ಅವರನ್ನು ಅಮಾನತುಗೊಳಿಸಿತು. ಅಕ್ರಮ ಹಣದ ವಹಿವಾಟಿನ ಆಯಾಮದಲ್ಲಿ ಇ.ಡಿ ಕೂಡ ಅವರನ್ನು ಬಂಧಿಸಿ ವಿಚಾರಣೆ ನಡೆಸಿದೆ. ಈ ಪ್ರಕರಣದಲ್ಲಿ ಮಧ್ಯವರ್ತಿ ಬಸವರಾಜ ಕನ್ನಾಳೆಯ ಪಾತ್ರವೂ ತನಿಖೆಯಲ್ಲಿದೆ.ನೇಮಕಾತಿ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಲು ಕರ್ನಾಟಕ ಹೈಕೋರ್ಟ್ ವಿಶೇಷ ತನಿಖಾ ತಂಡದ ರಚನೆಗೂ ಆದೇಶಿಸಿತ್ತು.ಪ್ರಸ್ತುತ ಜ್ಞಾನೇಂದ್ರ ಗಂಗ್ವಾರ್ ವಿರುದ್ಧ ಕಾನೂನು ಕ್ರಮಕ್ಕೆ ಅನುಮತಿ ನೀಡಿರುವುದರಿಂದ, ತನಿಖಾ ಸಂಸ್ಥೆಗಳು ತಮ್ಮ ಕಾನೂನು ಹಿಡಿತ ಬಿಗಿಗೊಳಿಸಿದ್ದು, ಹಗರಣದಲ್ಲಿ ಭಾಗಿಯಾಗಿರುವ ಇತರ ಪ್ರಭಾವಿಗಳಿಗೂ ಬಂಧನದ ಭೀತಿ ಎದುರಾಗಿದೆ.

## ರಾಜ್ಯದಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆಗೆ 400 ಎಕರೆ ಭೂಮಿ: ಸಚಿವ ಎಂ.ಬಿ. ಪಾಟೀಲ್

ಬೆಂಗಳೂರು, ಅ.24: ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಸುಮಾರು 400 ಎಕರೆ ಭೂಮಿ ಒದಗಿಸಲು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಸ್ವಾಮ್ಯದ ಸಂಸ್ಥೆ ಆಟೋಮೋಟಿವ್ ರೀಸರ್ಚ್ ಅಸೋಷಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ವತಿಯಿಂದ ನಿರ್ಮಾಣ ಮತ್ತು ಮೂಲ ಸೌಕರ್ಯಗಳ ಉಪಕರಣ ಪರೀಕ್ಷಾ ಕೇಂದ್ರ ಸ್ಥಾಪನೆಗೆ 100 ಎಕರೆ ಭೂಮಿಯನ್ನು ಕೇಳಲಾಗಿತ್ತು. ಈ ಉದ್ಯಮದಿಂದ ಹೆಚ್ಚಿನ ಉದ್ಯೋಗವಕಾಶಗಳು ಸೃಷ್ಟಿಯಾಗುವುದಿಲ್ಲ ಎಂಬ ಕಾರಣಕ್ಕೆ ಈ ಸಲಹೆ ನೀಡಿದ್ದು, 400ರಿಂದ 500 ಎಕರೆ ಜಾಗವನ್ನು ಮೀಸಲಿಟ್ಟರೆ, ಬೇರೆ ಬೇರೆ ಕೈಗಾರಿಕೆಗಳು ಅಲ್ಲಿ ಸ್ಥಾಪನೆಯಾಗಲು ಸಾಧ್ಯ ಎಂಬ ಚರ್ಚೆಗಳಿವೆ. ಅದಕ್ಕಾಗಿ ಬೇರೆ ಸ್ಥಳಗಳ ಪರಿಶೀಲನೆ ನಡೆಯುತ್ತಿದೆ ಎಂದರು.

ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾರೋಹಳ್ಳಿ ಜಾಗವನ್ನು ಸಲಹೆ ಮಾಡಿದ್ದರು. ಅದರ ಪರಿಶೀಲನಾ ವರದಿ ಬಂದಿದೆ. ಉಳಿದಂತೆ ನೆಲಮಂಗಲ ಸೇರಿ ಮೂರು ಸ್ಥಳಗಳು ಪರಿಶೀಲನಾ ಹಂತದಲ್ಲಿವೆ ಎಂದು ಹೇಳಿದರು. ಶಿವಮೊಗ್ಗ ವಿಮಾನ ನಿಲ್ದಾಣದ ಸುತ್ತಾಮುತ್ತಾ ಗ್ರಾಮೀಣ ಭಾಗದ ಜಾಗವನ್ನು ಕೈಬಿಡುವ ಕುರಿತು ಚರ್ಚೆ ನಡೆಯುತ್ತಿದೆ. ಈ ಮೊದಲು 362 ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಅದರಲ್ಲಿ ಸುಮಾರು 4 ಎಕರೆ ಗ್ರಾಮೀಣ ಭಾಗಕ್ಕೆ ಸೇರಿದೆ. ಅದನ್ನು ಹೊರತು ಪಡಿಸಿದರೆ, ಉಳಿದ ಯಾವ ಜಾಗವನ್ನು ಡಿನೋಟಿಫೈ ಮಾಡಲು ನಮ ಸರ್ಕಾರ ಸಿದ್ಧ ಇಲ್ಲ. ಮುಖ್ಯಮಂತ್ರಿಯವರು ಡಿನೋಟಿಫಿಕೇಷನ್ ಬಗ್ಗೆ ಸ್ಪಷ್ಟ ನಿಲುವು ಹೊಂದಿದ್ದಾರೆ ಎಂದು ಹೇಳಿದರು.

### ಕೊಲ್ಕತ್ತದಲ್ಲಿ ಮಾತ್ರ ರೋಡ್‌ಶೋ ಬಾಕಿ

ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆ 2027ರಲ್ಲಿ ನಡೆಯಲಿದೆ. ಈಗಾಗಲೇ ಜಪಾನ್, ಕೊರಿಯಾಗೆ ತೆರಳಿ ಅಲ್ಲಿನ ಉದ್ಯಮಿಗಳನ್ನು ಆಹ್ವಾನಿಸಲಾಗಿದೆ. ಅಮೆರಿಕಾ ಪ್ರವಾಸ ಮಾಡಬೇಕಿತ್ತು. ಆಡಳಿತಾತಕ ಕೆಲಸಗಳು ಬಾಕಿ ಉಳಿಯುತ್ತವೆ ಎಂಬ ಕಾರಣಕ್ಕಾಗಿ ಪ್ರವಾಸವನ್ನು ಮುಂದೂಡಿದ್ದೇನೆ. ದೇಶದಲ್ಲಿ ಮುಂಬೈ–ದೆಹಲಿಯಲ್ಲಿ ಈಗಾಗಲೇ ರೋಡ್ ಶೋ ನಡೆಸಲಾಗಿದೆ. ಗುಜರಾತ್ ಮತ್ತು ಪಶ್ಚಿಮ ಬಂಗಾಲದಲ್ಲಿ ರೋಡ್‌ಶೋ ಬಾಕಿ ಇದೆ. ನವೆಂಬರ್ 1ರಂದು ದೆಹಲಿಯಲ್ಲಿ ಎಸ್‌ಐಆರ್ ವಿರುದ್ಧ ನಡೆಯುವ ಪ್ರತಿಭಟನೆಯಲ್ಲಿ ಭಾಗವಹಿಸಲು ತಮಗೆ ಸಾಧ್ಯವಾಗುತ್ತಿಲ್ಲ. ಅಂದು ಕನ್ನಡ ರಾಜ್ಯೋತ್ಸವ, ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ ಎಂದು ಎಂ.ಬಿ. ಪಾಟೀಲ್ ತಿಳಿಸಿದರು.

**2 ದಿನದಲ್ಲಿ ವಿಮಾನ ಸಂಚಾರ ಆರಂಭಿಸದಿದ್ದರೆ ಹಜ್ ಸಮಿತಿಯಿಂದ ಸುಪ್ರೀಂಗೆ ಅರ್ಜಿ**

## ಮೆಕ್ಕಾದಲ್ಲಿ ಸಿಲುಕಿರುವ ಯಾತ್ರಿಗಳನ್ನು ಕರೆತರುವ ಜವಾಬ್ದಾರಿ ವಿಮಾನಯಾನ ಸಂಸ್ಥೆಗಳದ್ದು: ಸಚಿವ ಖಾದರ್

**ಚಿಕ್ಕಮಗಳೂರು, ಅ.24:** ಮೆಕ್ಕಾದಲ್ಲಿ ಸಿಲುಕಿರುವ ಕನ್ನಡಿಗರನ್ನು ಕರೆತರುವ ಜವಾಬ್ದಾರಿ ಮೂರು ಏವಿಯೇಷನ್ ಕಂಪನಿಗಳ ಮೇಲಿದೆ. ಎರಡು ದಿನಗಳಲ್ಲಿ ವಿಮಾನ ಯಾನ ಆರಂಭಿಸದಿದ್ದರೆ ಹಜ್ ಸಮಿತಿಯಿಂದ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು ಎಂದು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವ ಯು.ಟಿ.ಖಾದರ್ ತಿಳಿಸಿದರು.



ಮೆಕ್ಕಾದಲ್ಲಿ 600ರಿಂದ 800 ಜನ ಕನ್ನಡಿಗ ಯಾತ್ರಾರ್ಥಿಗಳಿದ್ದಾರೆ. ಇಂಡಿಗೊ, ಆಕಾಶ್ ಏರ್ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನಲ್ಲಿ ಹೋಗಿದ್ದಾರೆ. ವಾಪಸ್ ಬರುವ ಟಿಕೆಟ್ ಕೂಡ ಬುಕ್ ಮಾಡಿಕೊಂಡಿದ್ದಾರೆ. ಕರೆದುಕೊಂಡು ಹೋದವರಿಗೆ ವಾಪಸ್ ಕರೆ ತರುವ ಜವಾಬ್ದಾರಿ ಇದೆ ಎಂದು ಸುದ್ದಿಗೋಷ್ಠಿಯಲ್ಲಿ ಶನಿವಾರ ಹೇಳಿದರು.

ಬೇರೆ ದೇಶದ ವಿಮಾನಗಳು ಹೋಗಿ ಬರುತ್ತಿವೆ. ಈ ಮೂರು ಸಂಸ್ಥೆಗಳ ಸಮಸ್ಯೆಯಿಂದ ವಿಮಾನ ಯಾನ ಆರಂಭವಾಗಿಲ್ಲ. ಅ.24ಕ್ಕೆ ಆರಂಭಿಸುವುದಾಗಿ ಹೇಳಿದ್ದರು, ನಂತರ ಅ.27 ಎಂದು ಹೇಳಿದ್ದಾರೆ. ಎರಡು ದಿನಗಳಲ್ಲಿ ವಿಮಾನಯಾನ ಆರಂಭವಾಗದಿದ್ದರೆ ಹಜ್ ಸಮಿತಿ ಮೂಲಕ ನ್ಯಾಯಾಲಯದ ಮೊರೆ ಹೋಗುತ್ತೇವೆ' ಎಂದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ವಿಮಾನಯಾನ ಸಚಿವರಿಗೆ ಪತ್ರ ಬರೆದರೂ ಏನೂ ಪ್ರತಿಕ್ರಿಯೆ ಬಂದಿಲ್ಲ. ಮೆಕ್ಕಾದಲ್ಲಿ ಸಿಲುಕಿರುವ ಜನರಿಗೆ ಆಗಿರುವ ನಷ್ಟವನ್ನೂ ಏವಿಯೇಷನ್ ಕಂಪನಿಗಳು ಭರಿಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಮನವಿ ಮಾಡಲಾಗುವುದು' ಎಂದು ತಿಳಿಸಿದರು.

## ದೀಪಾವಳಿ ವೇಳೆ ಪಟಾಕಿ ಸಿಡಿಸಲು ಮಾರ್ಗಸೂಚಿ ಸಚಿವ ಪ್ರಿಯಾಂಕ್ ಖರ್ಗೆ

**ಬೆಂಗಳೂರು, ಅ.24:** ದೀಪಾವಳಿ ವೇಳೆ ಪಟಾಕಿ ಸಿಡಿಸುವ ಸಂಬಂಧ ಎಲ್ಲರ ಜೊತೆ ಚರ್ಚೆ ಮಾಡಿ ಮಾರ್ಗಸೂಚಿ ರೂಪಿಸಲಾಗುವುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.



ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಹೇಳಿದೆಯಲ್ಲ. ಒಂದು ಕಡೆ ಪರಿಸರ ಉಳಿಸಬೇಕು ಅಂತೀರಾ, ಪಟಾಕಿಯೂ ಹಚ್ಚಬೇಕು ಅಂತೀರಾ. ಆ ಗಾಳಿ ಯಾರು ಸೇವನೆ ಮಾಡುತ್ತಾರೆ, ನಾವೇ ಅಲ್ವಾ. ನಮ್ಮ ಸಂಸ್ಕೃತಿ ಆಚರಣೆಯ ಜೊತೆಗೆ ಪರಿಸರ ಉಳಿಸುವುದು ನಮ್ಮ ಸಂಸ್ಕೃತಿ ಅಲ್ವಾ. ಎಲ್ಲರ ಜೊತೆ ಚರ್ಚೆ ಮಾಡಿ ಮಾರ್ಗಸೂಚಿ ಮಾಡುತ್ತೇವೆ. ಜನ ಪಾಲನೆ ಮಾಡಲೇಬೇಕಲ್ಲವೇ ಎಂದರು.

ದಸರಾ ಮೆರವಣಿಗೆಯಲ್ಲಿ ಪಟಾಕಿ ಹೊಡೆದ ವಿವಾದ ವಿಚಾರವಾಗಿ ಪ್ರತಿಕ್ರಿಯಿಸುತ್ತ, ಅದು ಪ್ರತಿವರ್ಷ ಮಾಡುತ್ತಾರೆ. ದೂರು ಏನಿತ್ತು ಅಂದರೆ, ಬೆಳಗಿನ ಜಾವದವರೆಗೆ ಪಟಾಕಿ ಹೊಡೆದರು ಅಂತಾ. ದಸರಾ ಮೆರವಣಿಗೆಯಲ್ಲಿ ಮಾಡಿದ್ದಾರೆ, ಯಾರಿಗೂ ತೊಂದರೆ ಆಗದಂತೆ ಮಾಡಿಕೊಂಡರೆ ಒಳ್ಳೆಯದು. ಅದಕ್ಕೆ ಪರ್ಮಿಷನ್ ತೆಗೆದುಕೊಂಡಿದ್ದಾರೆ. ಮಧ್ಯರಾತ್ರಿ ಪಟಾಕಿ ಹೊಡೆದರೆ ಜನರಿಗೆ ತೊಂದರೆ ಆಗಲ್ವಾ, ನಾವು ಆಚರಣೆ ಮಾಡಬೇಕಾದರೆ ಬೇರೆಯವರ ಬಗ್ಗೆ ಕಾಳಜಿ ವಹಿಸಿ ಮಾಡಿದರೆ ಒಳ್ಳೆಯದು ಎಂದು ಹೇಳಿದರು.

## ಛತ್ ಘಾಟ್‌ಗಳ ನಿರ್ಮಾಣ, ಶುಚಿತ್ವ ಪರಿಶೀಲಿಸಿದ ಮುಖ್ಯಮಂತ್ರಿ ರೇಖಾಗುಪ್ತಾ



**ನವದೆಹಲಿ,ಅ.24:** ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಶನಿವಾರ ಸಿಂಗಲ್ಪುರದ ಪ್ರೇಮ್ ಬಾರಿ ಸೇತುವೆ ಬಳಿಯ ಮುನಕ್ ಕಾಲುವೆಗೆ ಭೇಟಿ ನೀಡಿ ಛತ್ ಘಾಟ್‌ಗಳ ನಿರ್ಮಾಣ ಮತ್ತು ಶುಚಿತ್ವವನ್ನು ಪರಿಶೀಲಿಸಿದರು.

ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಪ್ರಾರ್ಥನೆ ಸಲ್ಲಿಸಲು ಅನುಕೂಲವಾಗುವಂತೆ ಉತ್ಸವದ ಮೊದಲು ಕೆಲಸವನ್ನು ಪೂರ್ಣಗೊಳಿಸುವಂತೆ ಸಿಎಂ ಗುಪ್ತಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪರಿಶೀಲನೆಯ ಸಮಯದಲ್ಲಿ, ಮುಖ್ಯಮಂತ್ರಿಗಳು ಕೆಲಸದ ಗುಣಮಟ್ಟದ ಬಗ್ಗೆ ಗಮನಹರಿಸಲು ಮತ್ತು ಪ್ರದೇಶವು ಸ್ವಚ್ಛ, ಸುಲಭವಾಗಿ ತಲುಪಬಹುದಾದ ಮತ್ತು ಉತ್ತಮವಾಗಿ ನಿರ್ವಹಿಸಲ್ಪಟ್ಟಿದೆಯೆ ಎಂದು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

# ರ್ಯಾಪಿಡೋ ಚಾಲಕನ ಸೋಗಿನಲ್ಲಿ ಜೈಶ್ ಸಂಘಟನೆ ನಂಟು: ಮುಂಬೈನಲ್ಲಿ ಶಂಕಿತ ಉಗ್ರನ ಬಂಧನ

**ಮುಂಬೈ,ಅ. 24:** ನಿಷೇಧಿತ ಜೈಶ್–ಎ–ಮೊಹಮ್ಮದ್ ಭಯೋತ್ಪಾದಕ ಸಂಘಟನೆಯೊಂದಿಗೆ ಸಂಪರ್ಕ ಹೊಂದಿರುವ ಶಂಕೆ ಹಾಗೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ 33 ವರ್ಷದ ವ್ಯಕ್ತಿಯನ್ನು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ ಬಂಧಿಸಿದೆ. ಬಂಧಿತನನ್ನು ಮೊಹಮ್ಮದ್ ಹಸನ್ ಅಬು ಸರ್ಮದ್ ಅನ್ಸಾರಿ ಎಂದು ಗುರುತಿಸಲಾಗಿದೆ. ಮುಂಬೈನ ಮಾಹಿಮ್ ಮೆಟ್ರೋ ನಿಲ್ದಾಣದ ಬಳಿ ಖಚಿತ ಮಾಹಿತಿ ಆಧರಿಸಿ ಎಟಿಎಸ್‌ನ ಕಾಲಾಚೌಕಿ ಘಟಕದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಆತನನ್ನು ವಶಕ್ಕೆ ಪಡೆದಿದ್ದಾರೆ. ಪ್ರಧಾನಿ ಮೋದಿ ಮುಂಬೈ ಭೇಟಿಯ ಸಂದರ್ಭದಲ್ಲಿ ಭದ್ರತಾ ಲೋಪದ ಕುರಿತು ಇನ್ಸ್ಟಾಗ್ರಾಮ್‌ನಲ್ಲಿ ಪ್ರಕಟವಾಗಿದ್ದ ಸುದ್ದಿಯೊಂದರ ಅಡಿಯಲ್ಲಿ ಆರೋಪಿ ಸೆಪ್ಟೆಂಬರ್ 8ರಂದು ಪ್ರತಿಕ್ರಿಯೆ ನೀಡಿದ್ದ. ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಅವರ ಹತ್ಯೆಯನ್ನು ಉಲ್ಲೇಖಿಸಿ, ಪ್ರಧಾನಿ ಮೋದಿ ಅವರ ವಿರುದ್ಧ ಹಿಂಸೆಗೆ ಪ್ರಚೋದನೆ ನೀಡುವ ರೀತಿಯಲ್ಲಿ ಆತ ಹೇಳಿಕೆ ನೀಡಿದ್ದಾನೆ ಎಂದು ತನಿಖಾಧಿಕಾರಿಗಳು ಆರೋಪಿಸಿದ್ದಾರೆ.




**ಟೆಲಿಗ್ರಾಂನಲ್ಲಿ ಪ್ರಚೋದನಕಾರಿ ಆಡಿಯೊ ಹಂಚಿಕೆ**

ಆರೋಪಿ ರ್ಯಾಪಿಡೋ ಬೈಕ್ ಚಾಲಕನಾಗಿ ಕೆಲಸ ಮಾಡುವುದರ ಜತೆಗೆ ಸುಗಂಧ ದ್ರವ್ಯಗಳ ಮಾರಾಟದಲ್ಲೂ ತೊಡಗಿದ್ದ ಎನ್ನಲಾಗಿದೆ. ಈ ಕೆಲಸಗಳ ನಡುವೆ ಆತ ತೀವ್ರಗಾಮಿ ವಿಚಾರಗಳನ್ನು ಪ್ರಚಾರ ಮಾಡುತ್ತಿದ್ದ ಹಾಗೂ ಪಾಕಿಸ್ತಾನದ ಗುಪ್ತಚರ ಜಾಲದೊಂದಿಗೆ ಸಂಪರ್ಕ ಹೊಂದಿದ್ದ ಎಂಬ ಶಂಕೆಯನ್ನು ತನಿಖಾ ಸಂಸ್ಥೆಗಳು ವ್ಯಕ್ತಪಡಿಸಿವೆ. ಜೈಶ್–ಎ–ಮೊಹಮ್ಮದ್ ಸಂಘಟನೆಯ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಭಾಷಣಗಳ ಆಡಿಯೊ ತುಣುಕುಗಳನ್ನು ಟೆಲಿಗ್ರಾಂ ಗುಂಪುಗಳಲ್ಲಿ ಹಂಚಿಕೊಂಡಿದ್ದಾನೆ ಎಂಬ ಆರೋಪವೂ ಆತನ ಮೇಲಿದೆ. 'ಇಂಡಿಯನ್ ಮುಸ್ಲಿಂ' ಎಂಬ ಟೆಲಿಗ್ರಾಂ ಗುಂಪಿನಲ್ಲಿ ಬಾಬರಿ ಮಸೀದಿಗೆ ಸಂಬಂಧಿಸಿದ ಪ್ರಚೋದನಕಾರಿ ಆಡಿಯೊಗಳನ್ನು ಹಂಚಿಕೊಂಡಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಮೊಬೈಲ್ ವಶಕ್ಕೆ, ತನಿಖೆ ಮುಂದುವರಿಕೆ**

ತನಿಖೆಯ ಭಾಗವಾಗಿ ಆರೋಪಿಯ ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದ್ದು, ಆಕ್ಷೇಪಾರ್ಹ ಸಾಮಾಜಿಕ ಜಾಲತಾಣ ಚಟುವಟಿಕೆಗಳಿಗೆ ಸಂಬಂಧಿಸಿದ 39 ಸ್ಕ್ರೀನ್‌ಶಾಟ್‌ಗಳನ್ನು ಅಧಿಕಾರಿಗಳು ಸಂಗ್ರಹಿಸಿದ್ದಾರೆ ಎಂದು ವರದಿಯಾಗಿದೆ. ಧಾರ್ಮಿಕ ಗುಂಪುಗಳ ನಡುವೆ ದ್ವೇಷ ಹರಡುವ ಆರೋಪದಡಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 196(1)ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಜೈಶ್–ಎ–ಮೊಹಮ್ಮದ್ ಸಂಘಟನೆಯೊಂದಿಗಿನ ಸಂಪರ್ಕ, ಪಾಕಿಸ್ತಾನದ ಗುಪ್ತಚರ ಜಾಲದೊಂದಿಗಿನ ಸಂಭಾವ್ಯ ನಂಟು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ನಡೆಸಿದ ಚಟುವಟಿಕೆಗಳ ಕುರಿತು ತನಿಖೆ ಮುಂದುವರಿದಿದೆ. ಆರೋಪಗಳು ತನಿಖೆಯ ಹಂತದಲ್ಲಿದ್ದು, ಅವು ನ್ಯಾಯಾಲಯದಲ್ಲಿ ಸಾಬೀತಾಗಬೇಕಿದೆ.

# ಷೇರುಪೇಟೆ: ವಾರದ ನಷ್ಟ 20 ಲಕ್ಷ ಕೋಟಿ



**ನವದೆಹಲಿ, ಅ.24:** ಹಬ್ಬದ ಸಂಭ್ರಮದ ಸಮಯದಲ್ಲಿ ಷೇರುಪೇಟೆಯಲ್ಲಿ ಬಂಡವಾಳ ಹೂಡಿಕೆ ಮಾಡಿದವರು ತೀವ್ರ ನಿರಾಸೆಯನ್ನು ಎದುರಿಸಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಭೌಗೋಳಿಕ ಉದ್ವಿಗ್ನತೆಯಿಂದಾಗಿ ಕಚ್ಚಾ ತೈಲದ ಬೆಲೆಗಳು ವಿಪರೀತವಾಗಿ ಏರಿಕೆಯಾಗಿವೆ. ಇದರ ನೇರ ಹೊಡೆತ ಭಾರತೀಯ ಷೇರು ಮಾರುಕಟ್ಟೆಯ ಮೇಲೆ ಬಿದ್ದಿದ್ದು, ಕೇವಲ ಈ ಒಂದು ವಾರದಲ್ಲಿ ಹೂಡಿಕೆದಾರರು ಬರೋಬ್ಬರಿ 20 ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಭಾರಿ ನಷ್ಟವನ್ನು ಅನುಭವಿಸಿದ್ದಾರೆ. ಇದರಿಂದಾಗಿ ಮಾರುಕಟ್ಟೆಯ ಒಟ್ಟು ಬಂಡವಾಳ ಮೌಲ್ಯವು 473.46 ಲಕ್ಷ ಕೋಟಿಯಿಂದ 452.40 ಲಕ್ಷ ಕೋಟಿಗೆ ತೀವ್ರವಾಗಿ ಕುಸಿದಿದೆ.

ಷೇರುಪೇಟೆಯ ಪ್ರಮುಖ ಸೂಚ್ಯಂಕಗಳಾದ ಬಿಎಸ್‌ಇ ಸೆನ್ಸೆಕ್ಸ್ ಮತ್ತು ಎನ್‌ಎಸ್‌ಇ ನಿಫ್ಟಿ 50 ಈ ವಾರದ ಎಲ್ಲಾ ನಾಲ್ಕು ದಿನಗಳ ವಹಿವಾಟಿನಲ್ಲಿಯೂ ನಷ್ಟದೊಂದಿಗೆ (ಕೆಂಪು ಬಣ್ಣದಲ್ಲಿ) ಅಂತ್ಯಗೊಂಡಿವೆ. ಶುಕ್ರವಾರದ ವಹಿವಾಟು ಏರಿಕೆಯೊಂದಿಗೆ ಆರಂಭವಾದರೂ, ಮಧ್ಯಾಹ್ನದ ವೇಳೆಗೆ ಸೆನ್ಸೆಕ್ಸ್ 797.02 ಅಂಕಗಳಷ್ಟು ಕುಸಿದಿತ್ತು. ಅಂತಿಮವಾಗಿ 125.56 ಅಂಕಗಳ ಕುಸಿತದೊಂದಿಗೆ 73,123.83 ರಲ್ಲಿ ಮತ್ತು ನಿಫ್ಟಿ 87.65 ಅಂಕಗಳ ನಷ್ಟದೊಂದಿಗೆ 22,372 ಕ್ಕೆ ತಲುಪಿ ವಹಿವಾಟು ಮುಗಿಸಿದೆ. ಪ್ರಮುಖ ಕಂಪನಿಗಳಿಗಿಂತ ಹೆಚ್ಚಾಗಿ ಸಣ್ಣ ಹಾಗೂ ಮಧ್ಯಮ ಗಾತ್ರದ ಕಂಪನಿಗಳಾದ ಸ್ಮಾಲ್‌ಕ್ಯಾಪ್ ಶೇ.2.94 ರಷ್ಟು ಮತ್ತು ಮಧ್ಯಮ ಷೇರುಗಳು ಶೇ.2.21 ರಷ್ಟು ಅತಿ ಹೆಚ್ಚು ಕುಸಿತವನ್ನು ದಾಖಲಿಸಿವೆ. ಈ ಬೃಹತ್ ಮಾರುಕಟ್ಟೆ ಕುಸಿತಕ್ಕೆ ಪ್ರಮುಖ ಕಾರಣವೆಂದರೆ ಬ್ರೆಂಟ್ ಕಚ್ಚಾತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 116 ಡಾಲರ್ (ಅಂದಾಜು 9,744 ರೂ.) ತಲುಪಿರುವುದು. ಇದು ಕಳೆದ ಆರು ತಿಂಗಳಿನಲ್ಲಿಯೇ ಅತಿ ಗರಿಷ್ಠ ಮಟ್ಟವಾಗಿದೆ. ತೈಲ ಬೆಲೆಗಳು ಇದೇ ರೀತಿ ನಿರಂತರವಾಗಿ ಹೆಚ್ಚಾಗುತ್ತಲೇ ಹೋದರೆ ನಮ್ಮ ದೇಶದಲ್ಲಿ ಹಣದುಬ್ಬರ ಗಣನೀಯವಾಗಿ ಹೆಚ್ಚಾಗುವ ಅಪಾಯವಿದೆ. ಅಲ್ಲದೆ, ಕಾರ್ಪೊರೇಟ್ ಕಂಪನಿಗಳ ಲಾಭಾಂಶ ಕಡಿಮೆಯಾಗಿ, ಕರೆನ್ಸಿ ಮೌಲ್ಯ ಕುಸಿದು ವಿದೇಶಿ ಹೂಡಿಕೆದಾರರು ತಮ್ಮ ಹಣವನ್ನು ಹಿಂಪಡೆಯುವ ಸಾಧ್ಯತೆಗಳಿರುವುದರಿಂದ ಷೇರುಪೇಟೆಗೆ ಮತ್ತಷ್ಟು ಹೊಡೆತ ಬೀಳಲಿದೆ ಎಂದು ಅಂದಾಜಿಸಲಾಗಿದೆ.

ಆರ್ಥಿಕ ತಜ್ಞರ ಪ್ರಕಾರ, ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು, ಬಾಂಡ್ ಇಳುವರಿಯಲ್ಲಿನ ಏರಿಕೆ ಮತ್ತು ತೈಲಬೆಲೆ ಏರಿಕೆಯಿಂದಾಗಿ ಮಾರುಕಟ್ಟೆಯಲ್ಲಿ ಶೇರುಗಳನ್ನು ಮಾರಾಟ ಮಾಡುವ ತೀವ್ರ ಒತ್ತಡ ಕಂಡುಬರುತ್ತಿದೆ. ಐತಿಹಾಸಿಕವಾಗಿ ನೋಡುವುದಾದರೆ, ಪ್ರತಿ ವರ್ಷ ನವರಾತ್ರಿಯಿಂದ ದೀಪಾವಳಿವರೆಗಿನ ಹಬ್ಬದ ಸಮಯವು ಷೇರುಪೇಟೆಗೆ ತುಂಬಾ ಲಾಭದಾಯಕವಾಗಿರುತ್ತದೆ. ಆದರೆ ಈ ಬಾರಿ ಜಾಗತಿಕ ಮಟ್ಟದ ಆರ್ಥಿಕ ಬಿಗಿತ ಮತ್ತು ವಿಶ್ವಾದ್ಯಂತ ಇರುವ ಯುದ್ಧದ ವಾತಾವರಣದಿಂದಾಗಿ ಪರಿಸ್ಥಿತಿಯು ಸಂಪೂರ್ಣವಾಗಿ ಬದಲಾಗಿದ್ದು, ಹೂಡಿಕೆದಾರರನ್ನು ತೀವ್ರ ಸಂಕಷ್ಟಕ್ಕೆ ಸಿಲುಕಿಸಿದೆ.

# ಉ.ಪ್ರ.ಚುನಾವಣೆ: 200 ಕ್ಷೇತ್ರಗಳಿಗೆ ಕಾಂಗ್ರೆಸ್ ಬೇಡಿಕೆ, 70 ಸ್ಥಾನಗಳಿಗಷ್ಟೇ ಎಸ್‌ಪಿ ಒಲವು

**ಲಖನೌ,ಅ.24:** 2027ರಲ್ಲಿ ನಡೆಯಲಿರುವ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ನಡುವೆ ಕ್ಷೇತ್ರ ಹಂಚಿಕೆ ವಿಚಾರವಾಗಿ ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡಿವೆ. ಕಾಂಗ್ರೆಸ್ 175ರಿಂದ 200 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಆಸಕ್ತಿ ವ್ಯಕ್ತಪಡಿಸಿದ್ದು, ಸಮಾಜವಾದಿ ಪಕ್ಷವು ಕಾಂಗ್ರೆಸ್‌ಗೆ 60ರಿಂದ 70 ಕ್ಷೇತ್ರಗಳನ್ನು ನೀಡುವ ಬಗ್ಗೆ ಚಿಂತನೆ ನಡೆಸಿದೆ. ಉತ್ತರ ಪ್ರದೇಶ ಕಾಂಗ್ರೆಸ್ ಉಸ್ತುವಾರಿ ರಾಜೇಂದ್ರ ಪಾಲ್ ಗೌತಮ್, 175ರಿಂದ 200 ಕ್ಷೇತ್ರಗಳ ಪಟ್ಟಿಯನ್ನು ಸಮಾಜವಾದಿ ಪಕ್ಷದ ನಾಯಕರೊಂದಿಗೆ ಹಂಚಿಕೊಂಡಿರುವುದಾಗಿ ತಿಳಿಸಿದ್ದಾರೆ. ಎರಡೂ ಪಕ್ಷಗಳ ನಾಯಕರು ಶೀಘ್ರದಲ್ಲೇ ಸಭೆ ಸೇರಿ ಕ್ಷೇತ್ರ ಹಂಚಿಕೆಯ ಕುರಿತು ವಿವರವಾಗಿ ಚರ್ಚಿಸಲಿದ್ದಾರೆ ಎಂದು ಅವರು ಹೇಳಿದ್ದಾರೆ.



**ಗೆಲ್ಲುವ ಸಾಮರ್ಥ್ಯವೇ ಮಾನದಂಡ**

ಕಾಂಗ್ರೆಸ್ನ ಹೆಚ್ಚಿನ ಕ್ಷೇತ್ರಗಳ ಬೇಡಿಕೆಗೆ ಸಮಾಜವಾದಿ ಪಕ್ಷದ ಕೆಲ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್‌ನ ಪ್ರಸ್ತುತ ರಾಜಕೀಯ ಬಲಕ್ಕೆ ಹೋಲಿಸಿದರೆ ಇಷ್ಟೊಂದು ಕ್ಷೇತ್ರಗಳನ್ನು ಕೇಳುವುದು ಸೂಕ್ತವೇ ಎಂಬ ಪ್ರಶ್ನೆಯೂ ಎಸ್ಪಿ ವಲಯದಲ್ಲಿ ಮೂಡಿದೆ. ಕ್ಷೇತ್ರ ಹಂಚಿಕೆಯಲ್ಲಿ ಅಭ್ಯರ್ಥಿಗಳ ಗೆಲ್ಲುವ ಸಾಮರ್ಥ್ಯವೇ ಪ್ರಮುಖ ಮಾನದಂಡವಾಗಿರಬೇಕು ಎಂಬುದು ಸಮಾಜವಾದಿ ಪಕ್ಷದ ನಿಲುವಾಗಿದೆ. ಈ ನಡುವೆ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಬಿಜೆಪಿ ಸೋಲಿಸುವುದೇ ಮೈತ್ರಿಕೂಟದ ಸಾಮೂಹಿಕ ಗುರಿ ಎಂದು ಹೇಳಿದ್ದಾರೆ. ಕಾಂಗ್ರೆಸ್, ಸಮಾಜವಾದಿ ಪಕ್ಷ ಹಾಗೂ ಇಂಡಿಯಾ ಮೈತ್ರಿಕೂಟವನ್ನು ಬಲಪಡಿಸುವ ಅಗತ್ಯವಿದೆ. ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲು ಎರಡೂ ಪಕ್ಷಗಳು ಒಟ್ಟಾಗಿ ಕಾರ್ಯನಿರ್ವಹಿಸಲಿವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಲೋಕಸಭೆ ಚುನಾವಣೆ ಫಲಿತಾಂಶದಿಂದ ಕಾಂಗ್ರೆಸ್‌ಗೆ ವಿಶ್ವಾಸ**

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ನ ಚುನಾವಣಾ ಸಾಧನೆ ಹಲವು ವರ್ಷಗಳಿಂದ ಕುಸಿತ ಕಂಡಿದೆ. 2022ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ ಎರಡು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. 2017ರಲ್ಲಿ ಪಕ್ಷ ಏಳು ಕ್ಷೇತ್ರಗಳಲ್ಲಿ ಗೆದ್ದಿತ್ತು. ಆದರೆ, 2024ರ ಲೋಕಸಭಾ ಚುನಾವಣೆಯಲ್ಲಿ ಸಮಾಜವಾದಿ ಪಕ್ಷ 37 ಕ್ಷೇತ್ರಗಳಲ್ಲಿ ಹಾಗೂ ಕಾಂಗ್ರೆಸ್ ಆರು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಈ ಫಲಿತಾಂಶವು ಎರಡೂ ಪಕ್ಷಗಳ ಮೈತ್ರಿಯ ಸಾಮರ್ಥ್ಯದ ಬಗ್ಗೆ ಕಾಂಗ್ರೆಸ್‌ನಲ್ಲಿ ವಿಶ್ವಾಸ ಹೆಚ್ಚಿಸಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿಯೂ ಇದೇ ರೀತಿಯ ಒಗ್ಗಟ್ಟಿನ ಮೂಲಕ ಬಿಜೆಪಿಗೆ ಸವಾಲೊಡ್ಡಲು ಕಾಂಗ್ರೆಸ್ ಬಯಸಿದೆ.

ಒಟ್ಟು 403 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ನಡುವಿನ ಕ್ಷೇತ್ರ ಹಂಚಿಕೆ ಮಾತುಕತೆ ಮುಂಬರುವ ಚುನಾವಣೆಯ ರಾಜಕೀಯ ಸಮೀಕರಣದಲ್ಲಿ ಮಹತ್ವ ಪಡೆದಿದೆ. ಉಭಯ ಪಕ್ಷಗಳು ಅಂತಿಮವಾಗಿ ಎಷ್ಟು ಕ್ಷೇತ್ರಗಳಲ್ಲಿ ಒಪ್ಪಂದ ಮಾಡಿಕೊಳ್ಳಲಿವೆ ಎಂಬುದು ಮುಂದಿನ ಮಾತುಕತೆಗಳ ಬಳಿಕ ಸ್ಪಷ್ಟವಾಗಲಿದೆ.

# ಶಾಂತಿ ಯಾರಿಗಾಗಿ? ಶಾಂತಿ ಬಾಂಡ್‌ಗೆ ಸಹಿಹಾಕಲು ನೇಹಾ ಬೋರಾ ನಿರಾಕರಣೆ

ನವದೆಹಲಿ: ಪ್ರಜಾಪ್ರಭುತ್ವದಲ್ಲಿ ಸರ್ಕಾರವನ್ನು ಪ್ರಶ್ನಿಸುವುದು ಮತ್ತು ಭಿನ್ನಮತ ವ್ಯಕ್ತಪಡಿಸುವುದು ನಾಗರಿಕರ ಹಕ್ಕು. ಹಾಗಿರುವಾಗ ಶಾಂತಿ ಕಾಪಾಡುವ ಹೆಸರಿನಲ್ಲಿ ತಮ್ಮಿಂದ ಬಾಂಡ್‌ಗೆ ಸಹಿ ಪಡೆಯುವ ಉದ್ದೇಶವೇನು ಎಂದು ಅಖಿಲ ಭಾರತ ವಿದ್ಯಾರ್ಥಿ ಸಂಘದ ರಾಷ್ಟ್ರೀಯ ಅಧ್ಯಕ್ಷೆ ನೇಹಾ ಬೋರಾ ಪ್ರಶ್ನಿಸಿದ್ದಾರೆ. ಶಾಂತಿ ಬಾಂಡ್‌ಗೆ ಸಹಿ ಹಾಕುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಅವರು, ಇಂತಹ ಕ್ರಮಗಳ ಮೂಲಕ ಪ್ರಜಾಸತ್ತಾತ್ಮಕ ಪ್ರತಿಭಟನೆಗಳನ್ನು ನಿಯಂತ್ರಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ.

ಶಾಂತಿ ಬಾಂಡ್‌ಗೆ ಸಂಬಂಧಿಸಿದ ಪೊಲೀಸ್ ನೋಟಿಸ್ ಪ್ರಶ್ನಿಸಿ ನೇಹಾ ಬೋರಾ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಅಕ್ಟೋಬರ್ 23ರಂದು ವಜಾಗೊಳಿಸಿತ್ತು. ಇದರ ಬೆನ್ನಲ್ಲೇ ಅಕ್ಟೋಬರ್ 24ರಂದು ದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, ತಮ್ಮ ನಿಲುವನ್ನು ಪುನರುಚ್ಚರಿಸಿದ್ದಾರೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 126ರ ಅಡಿಯಲ್ಲಿ ಅಕ್ಟೋಬರ್ 17ರಂದು ಪೊಲೀಸರು ನೋಟಿಸ್ ನೀಡಿದ್ದರು. ವಿಚಾರಣೆ ಅವಧಿಯಲ್ಲಿ ಶಾಂತಿ ಕಾಪಾಡುವ ಉದ್ದೇಶದಿಂದ 10,000 ವೈಯಕ್ತಿಕ ಬಾಂಡ್ ಹಾಗೂ ಒಬ್ಬ ಜಾಮೀನುದಾರನನ್ನು ಒದಗಿಸುವಂತೆ ಸೂಚಿಸಲಾಗಿತ್ತು.



**ಶಾಂತಿ ಬಾಂಡ್‌ಗಳ ದುರ್ಬಳಕೆ ಆರೋಪ**

ಸಂವಿಧಾನವು ಭಿನ್ನಮತ ವ್ಯಕ್ತಪಡಿಸುವ ಹಕ್ಕನ್ನು ನೀಡುತ್ತದೆ. ಆದರೆ ಶಾಂತಿ ಭಂಗವಾಗುವ ಸಾಧ್ಯತೆಯ ನೆಪದಲ್ಲಿ ಇಂತಹ ಬಾಂಡ್‌ಗಳನ್ನು ಬಳಸಿಕೊಂಡು ಪ್ರತಿಭಟನಾಕಾರರನ್ನು ನಿಯಂತ್ರಿಸಲಾಗುತ್ತಿದೆ ಎಂದು ಬೋರಾ ದೂರಿದ್ದಾರೆ. ಅಕ್ಟೋಬರ್ 16ರಂದು ಮಂಡಿ ಹೌಸ್‌ನಲ್ಲಿ ಪ್ರತಿಭಟನೆ ನಡೆಸಿದ ಕೆಲವೇ ನಿಮಿಷಗಳಲ್ಲಿ ತಮ್ಮನ್ನು ವಶಕ್ಕೆ ಪಡೆಯಲಾಗಿತ್ತು ಎಂದು ಅವರು ಹೇಳಿದ್ದಾರೆ. ಸರ್ಕಾರವನ್ನು ಪ್ರಶ್ನಿಸದಿರುವುದೇ ಶಾಂತಿಯೇ ಎಂಬ ಪ್ರಶ್ನೆ ಎತ್ತಿದ ಅವರು, ಮತದಾನದ ಹಕ್ಕು ಮತ್ತು ಶಾಂತಿಯುತ ಪ್ರತಿಭಟನೆಯ ಹಕ್ಕು ಪ್ರಜಾಪ್ರಭುತ್ವದ ಪ್ರಮುಖ ಆಧಾರಗಳಾಗಿವೆ ಎಂದು ಪ್ರತಿಪಾದಿಸಿದ್ದಾರೆ. ಅನ್ಯಾಯದ ವಿರುದ್ಧ ಧ್ವನಿ ಎತ್ತುವುದನ್ನು ಶಾಂತಿಭಂಗ ಎಂದು ಪರಿಗಣಿಸುವುದು ಸರಿಯಲ್ಲ ಎಂಬುದು ನೇಹಾ ವಾದವಾಗಿದೆ.

# ವಾರಾಣಸಿಯಲ್ಲಿ ಇಂದು ವಿಂಗ್ಸ್ ಓವರ್ ಗಂಗಾ ಏರ್‌ಶೋ: ಮೋದಿ ಭಾಗಿ

**ನವದೆಹಲಿ, ಅ.24:** ವಾರಾಣಸಿಯಲ್ಲಿ ಶನಿವಾರ ನಡೆಯಲಿರುವ ವಿಂಗ್ಸ್ ಓವರ್ ಗಂಗಾ' ಏರ್ ಶೋನಲ್ಲಿ ಪ್ರಧಾನಮಂತ್ರಿ ಭಾಗವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ನಾಳೆ ನಡೆಯಲಿರುವ ಈ ವಾಯು ಪ್ರದರ್ಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕೂಡ ಉಪಸ್ಥಿತರಿರುವರು. ಇದಕ್ಕೂ ಮುನ್ನ, ಪ್ರಧಾನಿಯವರು ವಾರಾಣಸಿಯಲ್ಲಿ ಹೊಸ ಉಡುಪು ತಯಾರಿಕಾ ಘಟಕವೊಂದನ್ನು ಉದ್ಘಾಟಿಸಲಿದ್ದಾರೆ. ಪ್ರಧಾನಿಯವರು ನಾಳೆ ವಾರಣಾಸಿಯ ನಮೋ ಘಾಟ್‌ನಲ್ಲಿ 'ಏರ್ ಫೋರ್ಸ್ ಡೇ ಏರಿಯಲ್ ಡಿಸ್‌ಪ್ಲೇ–2026' ಅನ್ನು ವೀಕ್ಷಿಸಲಿದ್ದಾರೆ. ಈ ಪ್ರದರ್ಶನದಲ್ಲಿ ತೇಜಸ್, ಲಘು ಯುದ್ಧ ಹೆಲಿಕಾಪ್ಟರ್ 'ಪ್ರಚಂಡ, ಸುಖೋಯ್–30 ಎಂಕೆಐ ಮತ್ತು ರಫೇಲ್ ಯುದ್ಧವಿಮಾನಗಳ ಜೊತೆಗೆ ಸಾರಿಗೆ ವಿಮಾನಗಳು ಕೂಡ ಪ್ರದರ್ಶನಗೊಳ್ಳಲಿವೆ. ಭಾರತೀಯ ನೌಕಾಪಡೆ ಮತ್ತು ಭಾರತೀಯ ಸೇನೆಯ ವಿಮಾನಗಳು ಕೂಡ ಇದರಲ್ಲಿ ಪಾಲ್ಗೊಳ್ಳಲಿದ್ದು, ಕಾರ್ಯಾಚರಣೆಗಳಲ್ಲಿನ ಸಮನ್ವಯವನ್ನು ಪ್ರದರ್ಶಿಸಲಿವೆ. ಭಾರತೀಯ ವಾಯುಪಡೆಯ ಪ್ರಮುಖ ಪ್ರದರ್ಶನ ತಂಡಗಳಾದ 'ಸೂರ್ಯ ಕಿರಣ್ ಏರೋಬ್ಯಾಟಿಕ್ ಟೀಮ್' ಮತ್ತು 'ಸಾರಂಗ್ ಹೆಲಿಕಾಪ್ಟರ್ ಡಿಸ್‌ಪ್ಲೇ ಟೀಮ್' ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿವೆ.

# ದೆಹಲಿ ಪೊಲೀಸ್ ಪ್ರಧಾನ ಕಚೇರಿಗೆ ಗೃಹಸಚಿವ ಶಾ ಭೇಟಿ



**ನವದೆಹಲಿ, ಅ.24:** ರಾಷ್ಟ್ರ ರಾಜಧಾನಿಯಲ್ಲಿ ಎಸ್‌ಐಆರ್ ವಿರುದ್ಧ ಸಿಜೆಪಿ ಪ್ರತಿಭಟನೆ ಹೆಚ್ಚಾಗುತ್ತಿರುವಂತೆಯೇ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ಪರಿಶೀಲಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದೆಹಲಿ ಪೊಲೀಸ್ ಪ್ರಧಾನ ಕಚೇರಿಗೆ ಶನಿವಾರ ಮಧ್ಯಾಹ್ನ ಭೇಟಿನೀಡಿ ಮಾಹಿತಿ ಕಲೆಹಾಕಿದ್ದಾರೆ.

ಇತ್ತೀಚಿಗೆ ಸಿಜೆಪಿ ನಡೆಸಿದ ಪ್ರತಿಭಟನೆ, ಮಾದಕ ವಸ್ತುಗಳ ವಿರುದ್ಧದ ಹೋರಾಟ, ವಿದೇಶದಿಂದ ಕಾರ್ಯಾಚರಣೆ ನಡೆಸುತ್ತಿರುವ ಗ್ಯಾಂಗ್‌ಸ್ಟರ್‌ಗಳ ವಿರುದ್ಧದ ಕ್ರಮಗಳು ಮತ್ತು ಮಹಿಳೆಯರ ಮೇಲಿನ ಅಪರಾಧಗಳ ಕುರಿತು ಅಮಿತ್ ಶಾ ಅವರು ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು ಎನ್ನಲಾಗಿದೆ. ಹಿರಿಯ ಅಧಿಕಾರಿಗಳು ಅವರಿಗೆ ಪೊಲೀಸ್ ಪಡೆಯ ಕಾರ್ಯಕ್ಷಮತೆ, ನಡೆಯುತ್ತಿರುವ ತನಿಖೆಗಳು ಮತ್ತು ಕಾನೂನು ಜಾರಿಗೊಳಿಸುವಲ್ಲಿ ಎದುರಾಗುತ್ತಿರುವ ಪ್ರಮುಖ ಸವಾಲುಗಳ ಕುರಿತು ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ. ಈ ಸಭೆಯು ಹಿರಿಯ ಅಧಿಕಾರಿಗಳಿಗೆ ಕಾರ್ಯಾಚರಣೆಗೆ ಸಂಬಂಧಿಸಿದ ಸವಾಲುಗಳನ್ನು ಚರ್ಚಿಸಲು ಮತ್ತು ರಾಜಧಾನಿಯಲ್ಲಿ ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡಲು ಕೈಗೊಂಡ ಕ್ರಮಗಳನ್ನು ವಿವರಿಸಲು ಒಂದು ಅವಕಾಶವನ್ನು ಒದಗಿಸಲಿದೆ ಎಂದು ಮೂಲಗಳು ಹೇಳಿವೆ.

# ಶಾಲೆಯಲ್ಲಿ ವಿದ್ಯಾರ್ಥಿನಿ ಆತ್ಮಹತ್ಯೆ ಸ್ಥಳದಲ್ಲಿ 3 ಡೆತ್‌ನೋಟ್ ಪತ್ತೆ

**ನವದೆಹಲಿ, ಅ. 24:** ರಾಷ್ಟ್ರ ರಾಜಧಾನಿ ದೆಹಲಿಯ ಕೃಷ್ಣ ನಗರ ಪ್ರದೇಶದಲ್ಲಿರುವ ಸರ್ವೋದಯ ಕನ್ಯಾ ವಿದ್ಯಾಲಯದ ಶಾಲಾ ಆವರಣದಲ್ಲಿ 12ನೇ ತರಗತಿ ವಿದ್ಯಾರ್ಥಿನಿಯೊಬ್ಬರು ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಅತ್ಯಂತ ದಾರುಣ ಘಟನೆ ಶನಿವಾರ ನಡೆದಿದೆ. ಶಾಲೆಯ ಆವರಣದಲ್ಲಿಯೇ ಈ ದುರ್ಘಟನೆ ಸಂಭವಿಸಿದ್ದು, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಆತಂಕಗೊಂಡಿದ್ದಾರೆ.

ಪೊಲೀಸ್ ಮೂಲಗಳು ನೀಡಿರುವ ಪ್ರಾಥಮಿಕ ಮಾಹಿತಿಯ ಪ್ರಕಾರ, ಮೃತ ವಿದ್ಯಾರ್ಥಿನಿಯು ಶನಿವಾರ ಮಧ್ಯಾಹ್ನದ ವೇಳೆ ಶಾಲೆಗೆ ಬಂದಿದ್ದು, ಶಾಲೆಯ ಗಾರ್ಡ್ ರೂಮ್ನ ಹಿಂಭಾಗದ ಪ್ರದೇಶಕ್ಕೆ ತೆರಳಿದ್ದಾಳೆ. ಅಲ್ಲಿ ತಾನು ತಂದಿದ್ದ ಪೆಟ್ರೋಲ್ ಅನ್ನು ಮೈಮೇಲೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾಳೆ. ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸುವಷ್ಟರಲ್ಲಿ ಆಕೆ ಕೊನೆಯುಸಿರೆಳೆದಿದ್ದಾಳೆ.



ನವದೆಹಲಿಯ ನ್ಯೂ ರಾಜೆಂದರ್ ನಗರದಲ್ಲಿರುವ ಐಐಟಿಎಂ ನಲ್ಲಿ 'ಅಡ್ವಾನ್ಸ್ಡ್ ಅಟ್ಮಾಸ್ಫಿಯರಿಕ್ ಕೆಮಿಸ್ಟ್ರಿ ಅಂಡ್ ಏರೋಸಾಲ್ ಟಾಕ್ಸಿಸಿಟಿ ಅನಾಲಿಸಿಸ್ ಲ್ಯಾಬೊರೇಟರಿ' ಉದ್ಘಾಟಿಸುವ ಸಂದರ್ಭದಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ, ಭೂ ವಿಜ್ಞಾನ, ಪ್ರಧಾನ ಮಂತ್ರಿ ಕಾರ್ಯಾಲಯ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿ ಸಚಿವಾಲಯ, ಹಾಗೂ ಪರಮಾಣು ಶಕ್ತಿ ಮತ್ತು ಬಾಹ್ಯಾಕಾಶ ಇಲಾಖೆಯ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಮಾಧ್ಯಮಗಳೊಂದಿಗೆ ಸಂವಾದ ನಡೆಸಿದರು.

# ಮಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈಗೆ ಪತ್ನಿ ವಿಯೋಗ

**ಮುಂಬಯಿ, ಅ.24:** ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಹಾಗೂ ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ, ವಿಜಯವಾಣಿ ವರದಿಗಾರ ಪಿ.ಬಿ.ಹರೀಶ್ ರೈ ಅವರ ಪತ್ನಿ ಉಷಾಕುಮಾರಿ (56.) ಶನಿವಾರ ಸಂಜೆ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಸೈಂಟ್ ಅಲೋಸಿಯಸ್ ಹೈಸ್ಕೂಲ್ ಮಂಗಳೂರಿನ ಇಲ್ಲಿ 28 ವರ್ಷಗಳ ಕಾಲ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ್ದ ಅವರು ಆ ಮೊದಲು ಚಿನ್ಮಯ ಹೈಸ್ಕೂಲ್ ಮಂಗಳೂರು ಮತ್ತು ಉಳ್ಳಾಲ ಅಲ್ಲಿನ ಭಾರತ್ ಹೈಸ್ಕೂಲ್‌ನಲ್ಲಿಯೂ ಕಾರ್ಯನಿರ್ವಹಿಸಿದ್ದರು. ಕೆಲಸಮಯದಿಂದ ಅನಾರೋಗ್ಯಕ್ಕೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಅವರು ಪತಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಂಗಳೂರಿನಲ್ಲಿ ನಡೆಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿದ್ದಾರೆ. ಉಷಾಕುಮಾರಿ ನಿಧನಕ್ಕೆ ಕರ್ನಾಟಕದ ಮಾಜಿ ವಿಧಾನಸಭಾಧ್ಯಕ್ಷ ಹಾಲಿ ಸಚಿವ ಯು.ಟಿ ಖಾದರ್, ಕನ್ನಡಿಗ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ಅಧ್ಯಕ್ಷ ಶಿವಾನಂದ ತಗಡೂರು, ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಮಹಾರಾಷ್ಟ್ರ ಘಟಕದ ನಿಕಟಪೂರ್ವ ಅಧ್ಯಕ್ಷ ರೋನ್ಸ್ ಬಂಟ್ವಾಳ್, ದ.ಕ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ಮಾಜಿ ಅಧ್ಯಕ್ಷ ಶ್ರೀನಿವಾಸ ನಾಯಕ್ ಇಂದಾಜೆ, ಕೆಯುಡಬ್ಲ್ಯೂಜೆ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಡಾ| ಶಿವ ಮೂಡಿಗೆರೆ ಸೇರಿದಂತೆ ನೂರಾರು ಗಣ್ಯರು ತೀವ್ರ ಸಂತಾಪ ವ್ಯಕ್ತ ಪಡಿಸಿ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

# ಫ್ರೆಂಚ್ ಓಪನ್ ಫೈನಲ್‌ಗೆ ಲಗ್ಗೆಯಿಟ್ಟ ಪಿ.ವಿ.ಸಿಂಧು

**ರಿಸ್, ಅ.24:** ಭಾರತದ ತಾರಾ ಬ್ಯಾಡ್ಮಿಂಟನ್ ಆಟಗಾರ್ತಿ, ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಫ್ರೆಂಚ್ ಓಪನ್ 2026 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದಾರೆ. ಶನಿವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ರೋಚಕ ಸೆಮಿಫೈನಲ್ ಹಣಾಹಣಿಯಲ್ಲಿ ಜಪಾನ್‌ನ ಉದಯೋನ್ಮುಖ ಆಟಗಾರ್ತಿ ಹಿನಾ ಅಕೆಚಿ ವಿರುದ್ಧ ಮೂರು ಗೇಮ್‌ಗಳ ಕಠಿಣ ಹೋರಾಟ ನಡೆಸಿ ಭರ್ಜರಿ ಜಯ ದಾಖಲಿಸಿದರು.

ಒಂದು ಗಂಟೆ 13 ನಿಮಿಷಗಳ ಕಾಲ ನಡೆದ ಈ ಜಿದ್ದಾಜಿದ್ದಿನ ಕಾದಾಟದಲ್ಲಿ ವಿಶ್ವ ಶ್ರೇಯಾಂಕದಲ್ಲಿ 22ನೇ ಸ್ಥಾನದಲ್ಲಿರುವ ಅಕೆಚಿ ವಿರುದ್ಧ ಸಿಂಧು 21–10, 20–22, 21–16 ಅಂಕಗಳ ಅಂತರದಲ್ಲಿ ಗೆಲುವು ಸಾಧಿಸಿದರು. ಇದರೊಂದಿಗೆ ಪ್ರಸಕ್ತ ಸಾಲಿನಲ್ಲಿ ಸಿಂಧು ತಮ್ಮ ಎರಡನೇ ಬಿಡಬ್ಲ್ಯುಎಫ್ ಸೂಪರ್ 750 ಟೂರ್ನಿಯ ಫೈನಲ್‌ಗೆ ತಲುಪಿದಂತಾಗಿದೆ.

**ಮೊದಲ ಗೇಮ್‌ನಲ್ಲಿ ಸಿಂಧು ಪಾರಮ್ಯ:** ಆರಂಭದಲ್ಲಿ ಇಬ್ಬರೂ ಆಟಗಾರ್ತಿಯರು 4–4 ಹಾಗೂ 8–8 ಸಮಬಲ ಸಾಧಿಸಿ ಕಠಿಣ ಪೈಪೋಟಿ ನೀಡಿದರು. ಆದರೆ ವಿರಾಮದ ವೇಳೆಗೆ 11–9 ಮುನ್ನಡೆ ಕಾಯ್ದುಕೊಂಡ ಸಿಂಧು, ನಂತರದ ಹಂತದಲ್ಲಿ ಆಕ್ರಮಣಕಾರಿ ಆಟ ಪ್ರದರ್ಶಿಸಿ ಸತತ ಅಂಕಗಳನ್ನು ಕಲೆಹಾಕಿದರು. ಕೇವಲ 18 ನಿಮಿಷಗಳಲ್ಲಿ 21–10 ರಿಂದ ಮೊದಲ ಗೇಮ್ ಅನ್ನು ತಮ್ಮದಾಗಿಸಿಕೊಂಡರು.

**ಎರಡನೇ ಗೇಮ್‌ನಲ್ಲಿ ಅಕೆಚಿ ತಿರುಗೇಟು:** ಎರಡನೇ ಗೇಮ್‌ನಲ್ಲಿ ಜಪಾನ್‌ನ 21 ವರ್ಷದ ಯುವ ಆಟಗಾರ್ತಿ ಅಕೆಚಿ ಅತ್ಯುತ್ತಮ ರಕ್ಷಣಾತ್ಮಕ ಆಟ ಮತ್ತು ಚಾಣಾಕ್ಷ ಶಾಟ್‌ಗಳ ಮೂಲಕ ತಿರುಗೇಟು ನೀಡಿದರು. ಸಿಂಧು 20–20 ರಲ್ಲಿ ಗೇಮ್ ಪಾಯಿಂಟ್ ಉಳಿಸಿಕೊಂಡರಾದರೂ, ಅಕೆಚಿ ಒತ್ತಡ ನಿಭಾಯಿಸಿ 22–20 ರಲ್ಲಿ ಗೇಮ್ ಗೆದ್ದು ಸಮಬಲ ಸಾಧಿಸಿದರು. ನಿರ್ಣಾಯಕ ಗೇಮ್‌ನಲ್ಲಿ ದಿಟ್ಟ ಜಯ: ಮೂರನೇ ಹಾಗೂ ನಿರ್ಣಾಯಕ ಗೇಮ್‌ನಲ್ಲಿ ಸ್ಕೋರ್ 15–15 ರಲ್ಲಿದ್ದಾಗ ಪಂದ್ಯ ಅತ್ಯಂತ ಕುತೂಹಲಕರ ಹಂತ ತಲುಪಿತ್ತು. ಈ ವೇಳೆ ನಡೆದ 38 ಶಾಟ್‌ಗಳ ಸುದೀರ್ಘ ರ್ಯಾಲಿಯಲ್ಲಿ ಅಕೆಚಿ ಮಾಡಿದ ನೆಟ್ ತಪ್ಪು ಸಿಂಧುಗೆ 18–16 ಮುನ್ನಡೆ ತಂದುಕೊಟ್ಟಿತು. ಅಂತಿಮವಾಗಿ ತಮ್ಮ ಟ್ರೇಡ್‌ಮಾರ್ಕ್ ಕ್ರಾಸ್–ಕೋರ್ಟ್ ಸ್ಮ್ಯಾಶ್ ಮೂಲಕ ಸಿಂಧು 21–16 ರಲ್ಲಿ ಪಂದ್ಯವನ್ನು ಮುಗಿಸಿ ಫೈನಲ್‌ಗೆ ಅರ್ಹತೆ ಪಡೆದರು.

**ಫೈನಲ್‌ನಲ್ಲಿ ವಿಶ್ವ ನಂ. 1 ಆಟಗಾರ್ತಿ ಆನ್ ಸೆ–ಯಂಗ್ ಸವಾಲು:** ಜುಲೈನಲ್ಲಿ ಜಪಾನ್ ಓಪನ್ ಸೂಪರ್ 750 ಪ್ರಶಸ್ತಿ ಗೆದ್ದಿದ್ದ ಸಿಂಧು, ಇದೀಗ ಮತ್ತೊಂದು ಪ್ರಮುಖ ಪ್ರಶಸ್ತಿಯ ಹೊಸ್ತಿಲಲ್ಲಿದ್ದಾರೆ. ಭಾನುವಾರ ನಡೆಯಲಿರುವ ಪ್ರಶಸ್ತಿ ಸುತ್ತಿನ ಮಹಾಕಾಳಗದಲ್ಲಿ ಅವರು ದಕ್ಷಿಣ ಕೊರಿಯಾದ ವಿಶ್ವದ ನಂ. 1 ಆಟಗಾರ್ತಿ ಆನ್ ಸೆ–ಯಂಗ್ ಅವರನ್ನು ಎದುರಿಸಲಿದ್ದಾರೆ.

ಗೆಲುವಿನ ಬಳಿಕ ಮಾತನಾಡಿದ ಸಿಂಧು, "ಫೈನಲ್ ಪ್ರವೇಶಿಸಿರುವುದು ಸಂತಸ ತಂದಿದೆ, ಆದರೆ ನನ್ನ ಕೆಲಸ ಇನ್ನೂ ಮುಗಿದಿಲ್ಲ. ಭಾನುವಾರದ ಪಂದ್ಯಕ್ಕೆ ಪೂರ್ಣ ಗಮನ ಹರಿಸಬೇಕಿದೆ. ವಿಶ್ವ ನಂ. 1 ಆಟಗಾರ್ತಿ ವಿರುದ್ಧದ ಪಂದ್ಯ ಕಠಿಣವಾಗಿರಲಿದೆ, ಆದರೆ ನಾನು ನನ್ನ ಶ್ರೇಷ್ಠ ಪ್ರದರ್ಶನ ನೀಡಲು ಸಿದ್ಧಳಾಗಿದ್ದೇನೆ" ಎಂದು ವಿಶ್ವಾಸ ವ್ಯಕ್ತಪಡಿಸಿದರು.

# ರಾಜಭವನದಲ್ಲಿ ಸಸ್ಯಾಹಾರ: ಕೇರಳ ರಾಜ್ಯಪಾಲರ ಆದೇಶಕ್ಕೆ ಆಕ್ರೋಶ

**ತಿರುವನಂತಪುರ, ಅ. 24:** ಕೇರಳ ರಾಜ್ಯಪಾಲ ಓಂ ಪ್ರಕಾಶ್ ಮಾಥುರ್ ಅವರು ಲೋಕಭವನ (ರಾಜಭವನ) ಅಡುಗೆಮನೆಯನ್ನು ಕೇವಲ ಸಸ್ಯಾಹಾರಿ ಮಾಡಲು ತೆಗೆದುಕೊಂಡಿದ್ದಾರೆ ಎನ್ನಲಾದ ನಿರ್ಧಾರವು ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ಮಾಥುರ್ ಅವರು ಕೇರಳದ 29ನೇ ರಾಜ್ಯಪಾಲರಾಗಿ ಅಧಿಕಾರವಹಿಸಿಕೊಳ್ಳುವ ಒಂದು ದಿನ ಮುಂಚೆ, ಅಂದರೆ ಗುರುವಾರ ಈ ವರದಿಗಳು ಹೊರಬಂದಿದ್ದವು ಎಂದು ಪಿಟಿಐ ಸುದ್ದಿ ಸಂಸ್ಥೆ ವರದಿ ಮಾಡಿದೆ. ಲೋಕ್ ಭವನ ಅಡುಗೆಮನೆಯಲ್ಲಿ ಮಾಂಸಾಹಾರಿ ಆಹಾರವನ್ನು ತಯಾರಿಸಬಾರದು ಅಥವಾ ಬಡಿಸಬಾರದು ಎಂದು ಅವರು ನಿರ್ದೇಶಿಸಿದ್ದರು.

ಇದು ರಾಜ್ಯಪಾಲರ ವೈಯಕ್ತಿಕ ಆಹಾರ ಪದ್ಧತಿಯನ್ನು ಮೀರಿ ವ್ಯಕ್ತಿಗತ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಆರೋಪಿಸಿದ್ದಾರೆ. ಕೇರಳವು ವಿವಿಧ ಆಹಾರ ಸಂಸ್ಕೃತಿ ಮತ್ತು ಸಮೃದ್ಧ ಮತ್ಸ್ಯ ಸಂಪನ್ಮೂಲಗಳನ್ನು ಹೊಂದಿರುವ ಕರಾವಳಿ ರಾಜ್ಯವಾಗಿದೆ. ಜನರಿಗೆ ಸಸ್ಯಾಹಾರಿ ಮತ್ತು ಮಾಂಸಾಹಾರಿ ಆಹಾರದ ನಡುವೆ ಆಯ್ಕೆ ಮಾಡುವ ಸ್ವಾತಂತ್ರ್ಯ ಇದೆ, ಇದನ್ನು ನಿರ್ಬಂಧಿಸುವ ಯಾವುದೇ ಯತ್ನ ಒಪ್ಪತಕ್ಕದ್ದಲ್ಲ ಎಂದು ಅವರು ಪಿಟಿಐಗೆ ತಿಳಿಸಿದ್ದಾರೆ. ಜನರ ಆಹಾರ ಆಯ್ಕೆಯಲ್ಲಿ ಹಸ್ತಕ್ಷೇಪ ಮಾಡುವುದು ಮತ್ತು ಕೇರಳದ ಸಾಂಪ್ರದಾಯಿಕ ಜೀವನಶೈಲಿಯನ್ನು ಅಳಿಸಲು ಯತ್ನಿಸುವುದು ಸಂವಿಧಾನದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಅವರು ವಾದಿಸಿದ್ದಾರೆ. ರಾಜ್ಯಪಾಲರು ಜನರ ಆಹಾರ ಮತ್ತು ಜೀವನಶೈಲಿಯ ಹಕ್ಕನ್ನು ರಕ್ಷಿಸುವ ಬದಲು, ಅವರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ತಮ್ಮ ಅಧಿಕಾರವನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಇದು ಸಂಘ ಪರಿವಾರದ ಅಸಾಂವಿಧಾನಿಕ ಹಿತಾಸಕ್ತಿಗಳ ಮುಂದುವರಿಕೆಯಾಗಿದೆ ಮತ್ತು ಕೇರಳದಲ್ಲಿ ಸಂಘ ಪರಿವಾರದ ಕೇಸರಿ ಅಜೆಂಡಾವನ್ನು ಜಾರಿಗೆ ತರುವ ಮೊದಲ ಹೆಜ್ಜೆಯಾಗಿದೆ ಎಂದು ಆಲಪ್ಪುಳ ಸಂಸದರೂ ಆಗಿರುವ ವೇಣುಗೋಪಾಲ್ ಆರೋಪಿಸಿದ್ದಾರೆ.

### ದುಃಖದ ಸಂದರ್ಭದಲ್ಲಿ ಮಾನವೀಯತೆಗೆ ಆದ್ಯತೆ ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರ ಸೂಚನೆ

# ಬಾಕಿ ಬಿಲ್ ಪಾವತಿಸಿಲ್ಲ ಎಂದು ಮೃತದೇಹ ಹಸ್ತಾಂತರ ತಡೆಯುವಂತಿಲ್ಲ

**ಬೆಂಗಳೂರು, ಅ.24:** ಆತ್ಮೀಯರನ್ನು ಕಳೆದುಕೊಂಡ ನೋವಿನಲ್ಲಿರುವ ಕುಟುಂಬಗಳಿಗೆ ಆಸ್ಪತ್ರೆಯ ಬಾಕಿ ಬಿಲ್ ಮತ್ತೊಂದು ಸಂಕಷ್ಟವಾಗಬಾರದು. ಹಣ ಪಾವತಿಸಿಲ್ಲ ಎಂಬ ಕಾರಣಕ್ಕೆ ಮೃತದೇಹ ಹಸ್ತಾಂತರಿಸದೆ ತಡೆಹಿಡಿಯುವಂತಿಲ್ಲ ಎಂದು ರಾಜ್ಯ ಸರ್ಕಾರ ಖಾಸಗಿ ಆಸ್ಪತ್ರೆಗಳಿಗೆ ಸೂಚನೆ ನೀಡಿದೆ.



ದುಃಖದ ಸಮಯದಲ್ಲಿ ಕುಟುಂಬಗಳ ನೋವಿಗೆ ಸ್ಪಂದಿಸುವ ಮತ್ತು ಮಾನವೀಯತೆಗೆ ಆದ್ಯತೆ ನೀಡುವ ಈ ಕ್ರಮವು ಸಾರ್ವಜನಿಕ ವಲಯದಲ್ಲಿ ಮಹತ್ವ ಪಡೆದಿದೆ. ಆತ್ಮೀಯರನ್ನು ಕಳೆದುಕೊಂಡ ದುಃಖದ ನಡುವೆಯೇ ಆಸ್ಪತ್ರೆಯ ಬಿಲ್ ಪಾವತಿಸುವ ಒತ್ತಡಕ್ಕೆ ಸಿಲುಕುವ ಕುಟುಂಬಗಳಿಗೆ ಈ ಕ್ರಮವು ಮಹತ್ವದ ಪರಿಹಾರವಾಗುವ ನಿರೀಕ್ಷೆಯಿದೆ.

ಮಾನವೀಯತೆಯ ದೃಷ್ಟಿಯಿಂದ ಮೃತದೇಹವನ್ನು ಗೌರವಯುತವಾಗಿ ಕುಟುಂಬಕ್ಕೆ ಹಸ್ತಾಂತರಿಸಬೇಕು ಎಂಬ ನಿಲುವನ್ನು ಸರ್ಕಾರ ಸ್ಪಷ್ಟಪಡಿಸಿದೆ.

**ದುಬಾರಿ ಚಿಕಿತ್ಸೆಯ ಹೊರೆ ಕಡಿಮೆ ಮಾಡಲು ಕ್ರಮ**

ಇದರ ಜೊತೆಗೆ, ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚುತ್ತಿರುವ ವೈದ್ಯಕೀಯ ವೆಚ್ಚದ ಹೊರೆ ಕಡಿಮೆ ಮಾಡುವುದು ಹಾಗೂ ಬಿಲ್ಲಿಂಗ್ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವುದು ಸರ್ಕಾರದ ಉದ್ದೇಶವಾಗಿದೆ. ರೋಗಿಗಳು ಮತ್ತು ಅವರ ಕುಟುಂಬಗಳಿಗೆ ಅನಗತ್ಯ ಆರ್ಥಿಕ ಸಂಕಷ್ಟ ಎದುರಾಗದಂತೆ ಕ್ರಮ ಕೈಗೊಳ್ಳಲು ಮುಂದಾಗಿದೆ.

**ರೋಗಿಗಳ ಹಿತಾಸಕ್ತಿಗೆ ಆದ್ಯತೆ**

ಆರೋಗ್ಯ ಸೇವೆ ಪ್ರತಿಯೊಬ್ಬರಿಗೂ ನ್ಯಾಯಯುತವಾಗಿ ದೊರೆಯಬೇಕು. ಸಂಕಷ್ಟದ ಸಮಯದಲ್ಲಿ ರೋಗಿಗಳು ಮತ್ತು ಅವರ ಕುಟುಂಬಗಳ ಹಿತಾಸಕ್ತಿಗೆ ಧಕ್ಕೆಯಾಗಬಾರದು ಎಂಬುದು ಸರ್ಕಾರದ ಆಶಯವಾಗಿದೆ. ವೈದ್ಯಕೀಯ ಸೇವೆಯ ಹೆಸರಿನಲ್ಲಿ ಜನಸಾಮಾನ್ಯರು ಅನಗತ್ಯ ಆರ್ಥಿಕ ಹೊರೆಯನ್ನು ಅನುಭವಿಸದಂತೆ ನೋಡಿಕೊಳ್ಳುವುದು ಹಾಗೂ ಆಸ್ಪತ್ರೆಗಳ ಬಿಲ್ಲಿಂಗ್‌ನಲ್ಲಿ ಪಾರದರ್ಶಕತೆ ಖಚಿತಪಡಿಸುವುದು ಈ ಕ್ರಮದ ಪ್ರಮುಖ ಉದ್ದೇಶಗಳಾಗಿವೆ.

---

### ವಿವಿಧ ಜಿಲ್ಲೆಗಳಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಸಿದ್ಧತೆ

# ಕಲಬುರಗಿ, ರಾಮನಗರ, ಹುಬ್ಬಳ್ಳಿಯಲ್ಲಿ ಷರತ್ತುಬದ್ಧ ಅನುಮತಿ



**ಬೆಂಗಳೂರು, ಅ.24:** ವಿಜಯದಶಮಿ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪಥಸಂಚಲನ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳ ಆಯೋಜನೆಗೆ ಸಿದ್ಧತೆಗಳು ಚುರುಕುಗೊಂಡಿವೆ.

ಕಲಬುರಗಿ, ರಾಮನಗರ ಮತ್ತು ಹುಬ್ಬಳ್ಳಿಯಲ್ಲಿ ಪಥಸಂಚಲನಕ್ಕೆ ಷರತ್ತುಬದ್ಧ ಅನುಮತಿ ದೊರೆತಿದ್ದು, ಕೋಲಾರ ಮತ್ತು ಮೈಸೂರಿನಲ್ಲಿಯೂ ಕಾರ್ಯಕ್ರಮಗಳಿಗಾಗಿ ಸಿದ್ಧತೆ ನಡೆಯುತ್ತಿದೆ. ಆದರೆ, ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಪಥಸಂಚಲನಕ್ಕೆ ಇನ್ನೂ ಅನುಮತಿ ದೊರೆತಿಲ್ಲ ಎಂದು ತಿಳಿದುಬಂದಿದೆ.

ಕಲಬುರಗಿಯಲ್ಲಿ ಭಾನುವಾರ ಮಧ್ಯಾಹ್ನ 3.30ಕ್ಕೆ ಆರ್‌ಎಸ್‌ಎಸ್ ಪಥಸಂಚಲನ ಆರಂಭವಾಗಲಿದ್ದು, ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಶಾಲೂ ಅವರು ಷರತ್ತುಬದ್ಧ ಅನುಮತಿ ನೀಡಿದ್ದಾರೆ. ಗೃಹ ಇಲಾಖೆಯ ಫಾರ್ಮ್ 1 ಮತ್ತು 2 ಅನ್ನು ಭರ್ತಿ ಮಾಡಿ ಸಲ್ಲಿಸಿದ ಹಿನ್ನೆಲೆಯಲ್ಲಿ ಅನುಮತಿ ನೀಡಲಾಗಿದೆ ಎಂದು ತಿಳಿದುಬಂದಿದೆ.

ಪಥಸಂಚಲನವು ನಿಗದಿತ ಮಾರ್ಗದಲ್ಲೇ ಸಾಗಬೇಕು ಹಾಗೂ ಪ್ರಚೋದನಕಾರಿ ಭಾಷಣಗಳಿಗೆ ಅವಕಾಶವಿಲ್ಲ ಎಂದು ಪೊಲೀಸರು ಷರತ್ತು ವಿಧಿಸಿದ್ದು, ನಗರದ ನಗರೇಶ್ವರ ಶಾಲೆಯಿಂದ ಆರಂಭವಾಗುವ ಪಥಸಂಚಲನ ಶರಣಬಸವೇಶ್ವರ ಜಾತ್ರಾ ಮೈದಾನದಲ್ಲಿ ಮುಕ್ತಾಯಗೊಳ್ಳಲಿದೆ. ರಾಮನಗರದಲ್ಲಿಯೂ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಪೊಲೀಸ್ ಇಲಾಖೆ ಅನುಮತಿ ನೀಡಿದೆ. ಭಾನುವಾರ ಬೆಳಗ್ಗೆ 9.30ಕ್ಕೆ ಸಂಘದ ಕಚೇರಿಯಿಂದ ಆರಂಭ ವಾಗುವ ಪಥಸಂಚಲನವು ಅಗ್ರಹಾರ ದವರೆಗೆ ಸುಮಾರು ಎರಡು ಕಿ.ಮೀ. ಸಾಗಲಿದೆ. ಹುಬ್ಬಳ್ಳಿಯ ನೆಹರು ಮೈದಾನದಲ್ಲಿ ಅಕ್ಟೋಬರ್ 25ರಂದು ನಡೆಯಲಿರುವ ಪಥಸಂಚಲನ ಮತ್ತು ಸಾರ್ವಜನಿಕ ಸಭೆಗೂ ಅನುಮತಿ ದೊರೆತಿದೆ. ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸೇರಿದಂತೆ ಬಿಜೆಪಿ ಶಾಸಕರು ಭಾಗವಹಿಸಲಿದ್ದಾರೆಂದು ತಿಳಿದುಬಂದಿದೆ.

ಕೋಲಾರ ಮತ್ತು ಮೈಸೂರಿನಲ್ಲಿಯೂ ಆರ್‌ಎಸ್‌ಎಸ್ ಪಥಸಂಚಲನ ಹಾಗೂ ಬೌದ್ಧಿಕ್ ಕಾರ್ಯಕ್ರಮಗಳ ಆಯೋಜನೆಗೆ ಸಿದ್ಧತೆಗಳು ನಡೆಯುತ್ತಿವೆ.ಇನ್ನೊಂದೆಡೆ, ತುಮಕೂರು ಜಿಲ್ಲೆಯಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಈವರೆಗೂ ಪೊಲೀಸ್ ಅನುಮತಿ ದೊರೆತಿಲ್ಲ. ತುಮಕೂರು ನಗರ, ಗ್ರಾಮಾಂತರ, ಕುಣಿಗಲ್ ಮತ್ತು ಗುಬ್ಬಿಯಲ್ಲಿ ಪಥಸಂಚಲನ ಆಯೋಜಿಸಲು ಸಿದ್ಧತೆ ನಡೆಸಲಾಗಿದೆ. ಪದವೀಧರರ ಕ್ಷೇತ್ರದ ಚುನಾವಣಾ ನೀತಿಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಅನುಮತಿ ಪ್ರಕ್ರಿಯೆ ವಿಳಂಬವಾಗಿರುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

---

# ಶಿಕ್ಷಕರ ಕ್ಷೇತ್ರ ಚುನಾವಣೆ ವೇಳೆ ಗಲಾಟೆ ಐವರ ವಿರುದ್ಧ ಪ್ರಕರಣ ದಾಖಲು

**ಬೆಂಗಳೂರು, ಅ.24:** ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ವೇಳೆ ಶಾಸಕ ಮುನಿರತ್ನ ಅವರೊಂದಿಗೆ ನಡೆದ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಾಜಿ ಕಾರ್ಪೊರೇಟರ್ ಗೋವಿಂದರಾಜು ನೀಡಿದ ದೂರಿನ ಆಧಾರದಲ್ಲಿ ಶೇಖರ್, ವೇಲು ನಾಯ್ಕರ್, ಮೋಹನ್ ಕುಮಾರ್, ಜಿ.ಕೆ. ವೆಂಕಟೇಶ್ ಹಾಗೂ ಶಾಸು ಕುಮಾರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮಲ್ಲತ್ತಹಳ್ಳಿಯ ಅಂಬೇಡ್ಕರ್ ಕಾಲೇಜಿನ ಮತಗಟ್ಟೆ ಬಳಿ ಗುರುವಾರ ಶಾಸಕ ಮುನಿರತ್ನ ತೆರಳಿದ್ದ ವೇಳೆ ಅವರಿಗೂ ಆರೋಪಿಗಳಿಗೂ ನಡುವೆ ನೂಕಾಟ, ತಳ್ಳಾಟ ಹಾಗೂ ಮಾತಿನ ಚಕಮಕಿ ನಡೆದಿತ್ತು ಎನ್ನಲಾಗಿದೆ.



ಈ ಸಂಬಂಧ ಮುನಿರತ್ನ ಪರವಾಗಿ ಗೋವಿಂದರಾಜು ದೂರು ನೀಡಿದ್ದು, ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಮುಂದುವರಿಸಿದ್ದಾರೆ.

---

# ಸಿಲಿಕಾನ್ ಸಿಟಿಯ ಶೇ.63ರಷ್ಟು ಪಿ.ಜಿ.ಗಳು ಅನಧಿಕೃತ

**5,480ರ ಪೈಕಿ 3,597 ಪಿಜಿಗಳಿಗೆ ಪರವಾನಗಿಯೇ ಇಲ್ಲ: ಜಿಬಿಎಯ ಆರೋಗ್ಯ ಇಲಾಖೆ ಪರಿಶೀಲನೆ ವೇಳೆ ಪತ್ತೆ**

**ಬೆಂಗಳೂರು, ಅ.24:** ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಪೇಯಿಂಗ್ ಗೆಸ್ಟ್ (ಪಿಜಿ)ಗಳ ವಿರುದ್ಧ ಬಿಗಿ ಕ್ರಮ ಜಾರಿಯಾಗಿದ್ದು, ನಗರದಲ್ಲಿರುವ ಒಟ್ಟು ಪಿಜಿಗಳ ಶೇ.63ರಷ್ಟು ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ.

ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಇತ್ತೀಚೆಗೆ ಈ ವಿಚಾರವಾಗಿ ನೀಡಿದ ತೀರ್ಪುಗಳ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಲಾಗಿದೆ. ಇದಕ್ಕಾಗಿ ಜಿಬಿಎ ತನ್ನ ಆರೋಗ್ಯ ಇಲಾಖೆ ಮತ್ತು ಸ್ಥಳೀಯ ಎಂಜಿನಿಯರ್‌ಗಳನ್ನು ನಿಯೋಜಿಸಿತ್ತು. ಪರಿಶೀಲನೆಯಲ್ಲಿ ನಗರದಲ್ಲಿ ಒಟ್ಟು 5,480 ಪಿಜಿ ವಸತಿಗಳಿರುವುದು ತಿಳಿದುಬಂದಿದ್ದು, ಅವುಗಳಲ್ಲಿ 3,597 ಪಿಜಿಗಳು ಪರವಾನಗಿ ಇಲ್ಲದ ವಿಭಾಗಕ್ಕೆ ಸೇರಿವೆ ಎಂದು ತಿಳಿದುಬಂದಿದೆ.

ಪರವಾನಗಿ ನೀಡುವ ಅಧಿಕಾರ ಹೊಂದಿರುವ ಜಿಬಿಎ ಆರೋಗ್ಯ ಇಲಾಖೆ ನೀಡಿರುವ ಮಾಹಿತಿ ಪ್ರಕಾರ, 2025ರಲ್ಲಿ ನಗರಾಭಿವೃದ್ಧಿ ಇಲಾಖೆ ಹೊರಡಿಸಿದ ಸುತ್ತೋಲೆಯ ಅನ್ವಯ, 40 ಅಡಿಗಿಂತ ಕಡಿಮೆ ಅಗಲದ ರಸ್ತೆಗಳಲ್ಲಿರುವ, ಕಟ್ಟಡದ ಅನುಮೋದಿತ ನಕ್ಷೆಯ ನಿಯಮಗಳನ್ನು ಉಲ್ಲಂಘಿಸಿರುವ, ವಸತಿ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ನೆಲಮಾಳಿಗೆಯಲ್ಲಿ ಅಡುಗೆಮನೆ ಹೊಂದಿರುವ ಪಿಜಿಗಳಿಗೆ ವ್ಯಾಪಾರ ಪರವಾನಗಿ ನೀಡಲು ಸಾಧ್ಯವಿಲ್ಲ. ಇಂತಹ ಪಿಜಿಗಳನ್ನು ಅನಧಿಕೃತ ಎಂದು ಪರಿಗಣಿಸಲಾಗುತ್ತದೆ.




ಇಂತಹ ಕಟ್ಟಡಗಳು ಅಲ್ಲಿ ವಾಸಿಸುವವರ ಸುರಕ್ಷತೆಗೆ ಅಪಾಯ ಉಂಟುಮಾಡುತ್ತವೆ.

ಯಾವುದೇ ಅವಘಡ ಸಂಭವಿಸಿದರೆ ಕಟ್ಟಡದ ಮಾಲೀಕರು ಮತ್ತು ನಿರ್ಮಾಣಕಾರರ ಜತೆಗೆ ಸಹಾಯಕ ಎಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಜಂಟಿ ಆಯುಕ್ತರು, ನಗರ ಯೋಜನಾ ಅಧಿಕಾರಿಗಳು, ಬೆಸ್ಕಾಂ ಅಧಿಕಾರಿಗಳು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳ ಹೊಣೆಗಾರಿಕೆಯನ್ನೂ ನಿಗದಿಪಡಿಸಬೇಕಾಗುತ್ತದೆ.

**50 ಸಾವಿರ ಮಂದಿ ವಾಸ**

ಪರಿಶೀಲನಾ ವರದಿ ಸಲ್ಲಿಕೆಯಾದ ಬಳಿಕ ಕಳೆದ ವಾರ ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅವರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆ ನಡೆಯಿತು. ನಿಯಮ ಉಲ್ಲಂಘಿಸಿರುವ ಕಟ್ಟಡಗಳಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದ್ದು, ಮುಂದಿನ ಆದೇಶಗಳಿಗಾಗಿ ಕಾಯಲಾಗುತ್ತಿದೆ. ದೇಶದ ವಿವಿಧ ಭಾಗಗಳಿಂದ ನಗರಕ್ಕೆ ವಿದ್ಯಾಭ್ಯಾಸ ಮತ್ತು ಉದ್ಯೋಗಕ್ಕಾಗಿ ಬಂದಿರುವ ಸುಮಾರು 50,000 ಜನರು ಈ 3,000ಕ್ಕೂ ಹೆಚ್ಚು ಪಿಜಿಗಳಲ್ಲಿ ವಾಸಿಸುತ್ತಿರಬಹುದು. ಯಾವುದೇ ಕಠಿಣ ನಿರ್ಧಾರ ಕೈಗೊಂಡರೂ ಅದು ಅವರ ಮೇಲೆ ಪರಿಣಾಮ ಬೀರಲಿದೆ ಎಂದು ಜಿಬಿಎಯ ಹಿರಿಯ ಆರೋಗ್ಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮುಂದಿನ ಕ್ರಮಗಳ ಕುರಿತು ಮುಖ್ಯ ಆಯುಕ್ತರಿಂದ ನಿರ್ದೇಶನಕ್ಕಾಗಿ ಆರೋಗ್ಯ ಇಲಾಖೆ ಕಾಯುತ್ತಿದೆ ಎಂದು ಹೇಳಿದ್ದಾರೆ.

**ವಾಣಿಜ್ಯ ಉದ್ದೇಶಕ್ಕೆ ಗೃಹಬಳಕೆ ವಿದ್ಯುತ್ ಬಳಕೆ**

ಹಲವು ಪಿಜಿಗಳು ವಾಣಿಜ್ಯ ಬಳಕೆಯ ಬದಲು ವಸತಿ ವಿಭಾಗದಲ್ಲಿ ಆಸ್ತಿ ತೆರಿಗೆಯನ್ನು ಪಾಲಿಕೆಗೆ ಹಾಗೂ ವಿದ್ಯುತ್ ಶುಲ್ಕವನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತಕ್ಕೆ (ಬೆಸ್ಕಾಂ) ಪಾವತಿಸುತ್ತಿವೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು 3,000 ಕೋಟಿ ರೂಪಾಯಿಯಿಂದ 5,000 ಕೋಟಿ ರೂಪಾಯಿವರೆಗೆ ನಷ್ಟವಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

---

# ಸ್ಟಿಂಗ್ ಆಪರೇಷನ್: ಸಿಸಿಬಿಯಿಂದ ದೆಹಲಿ ಮೂಲದ ವ್ಯಕ್ತಿ ಬಂಧನ

**ಬೆಂಗಳೂರು, ಅ.24:** ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿ ದಂತೆ ಚರ್ಚೆಗೆ ಕಾರಣವಾಗಿರುವ ಸ್ಟಿಂಗ್ ಆಪರೇಷನ್ ಪ್ರಕರಣದ ತನಿಖೆ ನಡೆಸುತ್ತಿರುವ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರು ದೆಹಲಿ ಮೂಲದ ರಿತೇಶ್ ಎಂಬಾತನನ್ನು ಬಂಧಿಸಿದ್ದಾರೆ ಎನ್ನಲಾಗಿದೆ. ಸ್ಟಿಂಗ್ ಕಾರ್ಯಾಚರಣೆಗೆ ಬಳಸುವ ಉದ್ದೇಶದಿಂದಲೇ ಆತ ಸೆಕೆಂಡ್‌ಹ್ಯಾಂಡ್ ಮೊಬೈಲ್ ಫೋನ್ ಖರೀದಿಸಿದ್ದ ಎಂಬ ಮಾಹಿತಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ ಎಂದು ವರದಿಯಾಗಿದೆ. ಸ್ಟಿಂಗ್ ಆಪರೇಷನ್‌ಗೆ ಸಂಬಂಧಿಸಿದ ಉದ್ದೇಶಕ್ಕಾಗಿ ರಿತೇಶ್ ಸೆಕೆಂಡ್‌ಹ್ಯಾಂಡ್ ಮೊಬೈಲ್ ಫೋನ್ ಖರೀದಿಸಿದ್ದ. ಈ ಮೊಬೈಲ್ ಅನ್ನು ಯಾವಾಗ ಖರೀದಿಸಲಾಯಿತು. ಅದನ್ನು ಯಾರು ಬಳಸಿದರು, ಅದರಲ್ಲಿ ಯಾವ ರೀತಿಯ ಮಾಹಿತಿ ಸಂಗ್ರಹಿಸಲಾಯಿತು ಮತ್ತು ಕಾರ್ಯಾಚರಣೆಯಲ್ಲಿ ಅದರ ಪಾತ್ರವೇನು ಎಂಬುದನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಮೊಬೈಲ್ ಖರೀದಿಗೆ ಬಳಸಿದ ಹಣದ ಮೂಲ, ಪಾವತಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳು ಹಾಗೂ ರಿತೇಶ್‌ಗೆ ಈ ಕಾರ್ಯಾಚರಣೆಯಲ್ಲಿ ವಹಿಸಲಾಗಿದ್ದ ಜವಾಬ್ದಾರಿಯ ಬಗ್ಗೆ ತನಿಖೆ ನಡೆಯುತ್ತಿದೆ ಎನ್ನಲಾಗಿದೆ. ಡಿಜಿಟಲ್ ಸಾಕ್ಷ್ಯಗಳು, ಕರೆಗಳ ವಿವರಗಳು ಮತ್ತು ಇತರ ಸಂಪರ್ಕಗಳ ಪರಿಶೀಲನೆಯಿಂದ ಪ್ರಕರಣದ ಇತರ ಕೊಂಡಿಗಳನ್ನು ಪತ್ತೆಹಚ್ಚಲು ತನಿಖಾಧಿಕಾರಿಗಳು ಮುಂದಾಗುವ ಸಾಧ್ಯತೆಯಿದೆ. ಸೆಕೆಂಡ್‌ಹ್ಯಾಂಡ್ ಫೋನ್ ಖರೀದಿಸಿರುವುದೊಂದೇ ಅಪರಾಧದ ಅಂತಿಮ ಸಾಕ್ಷ್ಯವಾಗುವುದಿಲ್ಲ. ಆ ಫೋನ್‌ನ ಬಳಕೆ, ಪ್ರಕರಣದ ನಡುವಿನ ನೇರ ಸಂಬಂಧವನ್ನು ತನಿಖೆಯಲ್ಲಿ ಸ್ಥಾಪಿಸುವುದು ನಿರ್ಣಾಯಕವಾಗಲಿದೆ.



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಶನಿವಾರ ನಡೆದ ಚಾಮುಂಡೇಶ್ವರಿ ರಥೋತ್ಸವದ ವೇಳೆ ಮೈಸೂರು ರಾಜವಂಶದ ಸದಸ್ಯ ಹಾಗೂ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಾಂಪ್ರದಾಯಿಕ ಆರಂಭಿಕ ಪೂಜೆ ನೆರವೇರಿಸಿ, ರಥವನ್ನು ಎಳೆದರು.

---

# ವಿಶ್ವ ಪೋಲಿಯೋ ದಿನ: ಪೋಲಿಯೋ ಮುಕ್ತ ಜಗತ್ತಿನ ಸಂಕಲ್ಪ ರೋಟರಿ ಜಿಲ್ಲೆ 3191ರಿಂದ ಬೃಹತ್ ಜಾಗೃತಿ ಅಭಿಯಾನ

**ಬೆಂಗಳೂರು, ಅ. 24:** ವಿಶ್ವ ಪೋಲಿಯೋ ದಿನದ ಅಂಗವಾಗಿ ಪೋಲಿಯೋ ರೋಗದ ಸಂಪೂರ್ಣ ನಿರ್ಮೂಲನೆ ಹಾಗೂ ಮಕ್ಕಳಿಗೆ ಲಸಿಕೆ ಹಾಕಿಸುವ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ರೋಟರಿ ಜಿಲ್ಲೆ 3191 ವತಿಯಿಂದ ಬೆಂಗಳೂರಿನಲ್ಲಿ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಪೋಲಿಯೋ ಮುಕ್ತ ಜಗತ್ತಿನ ಗುರಿಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಆಯೋಜಿಸಲಾದ ಈ ಅಭಿಯಾನದಲ್ಲಿ ಬೈಕ್ ರ್‍ಯಾಲಿ, ಪಾದಯಾತ್ರೆ, ಸೈಕಲ್ ಜಾಥಾ ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

ಬೆಂಗಳೂರಿನ ಟೌನ್‌ಹಾಲ್‌ನಿಂದ ರಾಮನಗರ ದವರೆಗೆ 40 ಬೈಕ್ ಸವಾರರು'ಪೋಲಿಯೋ ನಿರ್ಮೂಲನೆ ಈಗಲೇ' ಎಂಬ ಸಂದೇಶದೊಂದಿಗೆ ಜಾಗೃತಿ ಬೈಕ್ ರ್‍ಯಾಲಿಯಲ್ಲಿ ಭಾಗವಹಿಸಿದರು. ಟೌನ್‌ಹಾಲ್‌ನಿಂದ ಲಾಲ್‌ಬಾಗ್‌ವರೆಗೆ ನಡೆದ ಪಾದಯಾತ್ರೆಯಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ರೋಟರಿ ಸದಸ್ಯರು ಸೇರಿದಂತೆ ಸುಮಾರು 600 ಮಂದಿ ಪಾಲ್ಗೊಂಡರು. ಇದೇ ಸಂದರ್ಭದಲ್ಲಿ 50 ಸೈಕಲ್ ಸವಾರರು ಸೈಕಲ್ ಜಾಥಾದ ಮೂಲಕ ಪೋಲಿಯೋ ನಿರ್ಮೂಲನೆಯ ಸಂದೇಶವನ್ನು ಸಾರಿದರು.




ರೋಟರಿ ಜಿಲ್ಲಾ ಪೋಲಿಯೋಪ್ಲಸ್ ಸಮಿತಿ ಅಧ್ಯಕ್ಷ ಅರವಿಂದ್ ನಾಯ್ಡು ಮಾತನಾಡಿ, 'ಪೋಲಿಯೋ ಸಂಪೂರ್ಣವಾಗಿ ನಿರ್ಮೂಲನೆ ಯಾಗುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ. ಪ್ರತಿಯೊಂದು ಮಗುವಿಗೂ ಪೋಲಿಯೋ ಲಸಿಕೆ ತಲುಪಿಸುವುದು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ನಮ್ಮ ಪ್ರಮುಖ ಉದ್ದೇಶವಾಗಿದೆ. ಪೋಲಿಯೋವನ್ನು ಶಾಶ್ವತವಾಗಿ ನಿರ್ಮೂಲನೆ ಮಾಡಲು ರೋಟರಿ ಬದ್ಧವಾಗಿದೆ' ಎಂದರು.

ಕಳೆದ ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ರೋಟರಿ ಇಂಟರ್‌ನ್ಯಾಷನಲ್ ಮತ್ತು ಅದರ ಜಾಗತಿಕ ಪಾಲುದಾರ ಸಂಸ್ಥೆಗಳು ಪೋಲಿಯೋ ನಿರ್ಮೂಲನೆಗಾಗಿ ನಿರಂತರವಾಗಿ ಶ್ರಮಿಸುತ್ತಿವೆ. ಈ ಪ್ರಯತ್ನಗಳ ಫಲವಾಗಿ ಜಾಗತಿಕವಾಗಿ ಪೋಲಿಯೋ ಪ್ರಕರಣಗಳು ಶೇ. 99.9ರಷ್ಟು ಕಡಿಮೆಯಾಗಿವೆ. ಪ್ರಸ್ತುತ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದಲ್ಲಿ ಕಾಡು ಪೋಲಿಯೋ ವೈರಸ್ ಸಕ್ರಿಯವಾಗಿದ್ದು, ಜಗತ್ತನ್ನು ಸಂಪೂರ್ಣವಾಗಿ ಪೋಲಿಯೋ ಮುಕ್ತಗೊಳಿಸುವ ಗುರಿಯೊಂದಿಗೆ ಅಭಿಯಾನ ಮುಂದುವರಿದಿದೆ.

ಪೋಲಿಯೋ ನಿರ್ಮೂಲನಾ ಕಾರ್ಯಕ್ರಮ ಗಳಿಗಾಗಿ ರೋಟರಿ ಇಂಟರ್‌ನ್ಯಾಷನಲ್ ಇದುವರೆಗೆ 260 ಕೋಟಿ ಅಮೆರಿಕನ್ ಡಾಲರ್‌ಗಿಂತಲೂ ಹೆಚ್ಚಿನ ಮೊತ್ತವನ್ನು ಕೊಡುಗೆಯಾಗಿ ನೀಡಿದೆ. ಈ ಪ್ರಯತ್ನಗಳ ಮೂಲಕ 122 ದೇಶಗಳಲ್ಲಿ 300 ಕೋಟಿಗೂ ಅಧಿಕ ಮಕ್ಕಳಿಗೆ ಲಸಿಕೆ ನೀಡಲು ನೆರವಾಗಿದೆ. ಕೋಲಾರ, ರಾಮನಗರ, ತಿರುಪತಿ, ಶ್ರೀಕಾಳಹಸ್ತಿ, ಕೆಜಿಎಫ್, ಮುಳಬಾಗಿಲು, ಮಾಗಡಿ, ಚನ್ನಪಟ್ಟಣ, ಚಿತ್ತೂರು ಮತ್ತು ಬಂಗಾರಪೇಟೆ ಸೇರಿದಂತೆ ವಿವಿಧ ಪ್ರದೇಶಗಳ 39 ಶಾಲೆಗಳ 6,000ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಪೋಲಿಯೋ ಕುರಿತು ಮಾಹಿತಿ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಮಕ್ಕಳಿಗೆ ಬಾಯಿಮೂಲಕ ನೀಡುವ ಪೋಲಿಯೋ ಲಸಿಕೆಯ ಮಹತ್ವವನ್ನು ತಿಳಿಸಿ, ಪ್ರತಿಯೊಬ್ಬ ಮಗುವಿಗೂ ಲಸಿಕೆ ದೊರೆಯುವಂತೆ ನೋಡಿಕೊಳ್ಳುವ ಅಗತ್ಯವನ್ನು ಒತ್ತಿಹೇಳಲಾಯಿತು.

ಪೋಲಿಯೋ ನಿರ್ಮೂಲನೆಗೆ ಜನಸಾಮಾನ್ಯರ ಸಹಕಾರ ಅತ್ಯಗತ್ಯವಾಗಿದ್ದು, ಪ್ರತಿಯೊಂದು ಮಗುವಿಗೂ ಲಸಿಕೆ ಹಾಕಿಸುವ ಮೂಲಕ ಮುಂದಿನ ಪೀಳಿಗೆಯನ್ನು ಪೋಲಿಯೋದಿಂದ ರಕ್ಷಿಸಬಹುದು. ಈ ನಿಟ್ಟಿನಲ್ಲಿ ರೋಟರಿ ಜಿಲ್ಲೆ 3191 ತನ್ನ ಜಾಗೃತಿ ಅಭಿಯಾನಗಳ ಮೂಲಕ ಪೋಲಿಯೋ ಮುಕ್ತ ಜಗತ್ತಿನ ಗುರಿಸಾಧಿಸಲು ಬದ್ಧವಾಗಿದೆ.

---

# ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ 3-4 ದಿನ ರಾಜ್ಯದಲ್ಲಿ ಮಳೆ ಸಾಧ್ಯತೆ

**ಬೆಂಗಳೂರು, ಅ.24:** ಬಂಗಾಳ ಕೊಲ್ಲಿಯಲ್ಲಿ ವಾಯುಭಾರದ ಕುಸಿತದ ಪರಿಣಾಮ ರಾಜ್ಯದಲ್ಲಿ ಮುಂದಿನ ಮೂರ್ನಾಲ್ಕು ದಿನ ಜೋರು ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.ಅಂಡಮಾನ್ ಬಳಿ ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿದೆ. ವಾಯುಭಾರ ಕುಸಿತವೇ ಚಂಡಮಾರುತವಾಗಿ ಮಾರ್ಪಾಡಾಗಿ, ಮುಂದಿನ ಎರಡು ದಿನ, ಚಂಡಮಾರುತ ಅಪ್ಪಳಿಸುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನಲ್ಲೂ ಗಂಭೀರ ಪರಿಣಾಮ ಉಂಟುಮಾಡುತ್ತಿದ್ದು, ದಕ್ಷಿಣ ಜಿಲ್ಲೆಗಳತ್ತ ಮಳೆ ಹೊತ್ತುಬರುವ ಸಾಧ್ಯತೆ ಇದೆ.

---

### ತೇಗ ಸಿರಿ-ವೃಕ್ಷಾಭಿವೃದ್ಧಿ ಯೋಜನೆಗೆ ಸರ್ಕಾರ ಆದೇಶ

# ಮೂರು ವರ್ಷ, 450 ಕೋಟಿ ರೂ. ವೆಚ್ಚ, ಜಿಲ್ಲಾ, ತಾಲೂಕು, ಗ್ರಾ.ಪಂ. ಮಟ್ಟದಲ್ಲಿ ಸಮಿತಿ ರಚನೆ

**ಬೆಂಗಳೂರು, ಅ.24:** ರೈತರ ಜಮೀನುಗಳಿಗೆ ಹೊಂದಿಕೊಂಡಿರುವ ರಸ್ತೆಬದಿಯ ಸರ್ಕಾರಿ ಜಮೀನುಗಳಲ್ಲಿ ರೈತರ ಸಹಭಾಗಿತ್ವದೊಂದಿಗೆ ತೇಗ ಹಾಗೂ ಇತರೆ ಆರ್ಥಿಕ ಮೌಲ್ಯದ ಮರಗಳನ್ನು ಬೆಳೆಸುವ ಮಹತ್ವಾಕಾಂಕ್ಷೆಯ "ತೇಗ ಸಿರಿ" ರಾಜ್ಯಮಟ್ಟದ ಸಮಗ್ರ ವೃಕ್ಷಾಭಿವೃದ್ಧಿ ಯೋಜನೆಗೆ ರಾಜ್ಯ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ.

ಒಟ್ಟು ರೂ. 450 ಕೋಟಿ ವೆಚ್ಚದಲ್ಲಿ 2026–27ರಿಂದ 2028–29ರವರೆಗೆ ಮೂರು ವರ್ಷಗಳ ಅವಧಿಯಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾ ಗುತ್ತಿದ್ದು, ಇದಕ್ಕಾಗಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಮಿತಿಗಳನ್ನು ರಚಿಸಿ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಈ ಯೋಜನೆಯಡಿ ರಸ್ತೆ ಬದಿಯಲ್ಲಿ ಬೆಳೆಸುವ ಮರಗಳ ಉತ್ಪನ್ನ ಅಥವಾ ಲಾಭದಲ್ಲಿ ಶೇ. 70 ರಷ್ಟು ಪಾಲನ್ನು ಫಲಾನುಭವಿ ರೈತರಿಗೆ ನೀಡಲಾಗುತ್ತದೆ. ಅರ್ಹ ರೈತರಿಗೆ ಅಧಿಕೃತವಾಗಿ ಭಾವಚಿತ್ರ ಸಹಿತ 'ಟ್ರೀ–ಪಟ್ಟಾ / ಮರಪಟ್ಟಾ' ವಿತರಿಸಲಾಗುತ್ತದೆ. ರಸ್ತೆಬದಿಯುದ್ದಕ್ಕೂ ಜಮೀನು ಹೊಂದಿರುವ ರೈತರು ಮಾತ್ರ ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.



ನೆಡುತೋಪಿಗಾಗಿ ಗುಂಡಿ ತೋಡುವುದು, ನೆಡುವುದು, ಗೂಟ ನೆಡುವುದು, ಮಣ್ಣು ಕೆಲಸ, ಕಳೆ ತೆಗೆಯುವುದು, ಗೊಬ್ಬರ ಹಾಕುವುದು ಹಾಗೂ ಬೆಂಕಿ ರೇಖೆ ನಿರ್ಮಾಣದಂತಹ ಕೂಲಿ ಆಧಾರಿತ ಕಾಮಗಾರಿಗಳನ್ನು 'ವಿಕಸಿತ ಭಾರತ–ಉದ್ಯೋಗ ಮತ್ತು ಜೀವನೋಪಾಯ ಖಾತ್ರಿ ಮಿಷನ್ (ಗ್ರಾಮೀಣ) – ವಿಬಿ ಜಿ–ರಾಮ್–ಜಿ' ಯೋಜನೆಯಡಿ ಕೈಗೊಳ್ಳಲಾಗುತ್ತದೆ.

ಅರಣ್ಯ ಇಲಾಖೆಯ ತಾಂತ್ರಿಕ ಮೇಲ್ವಿಚಾರಣೆಯಲ್ಲಿ ಗ್ರಾಮ ಪಂಚಾಯತ್ ಈ ಕಾಮಗಾರಿಗಳನ್ನು ನಿರ್ವಹಿಸಲಿದೆ. ಅರಣ್ಯ ಇಲಾಖೆಯು ತೇಗ, ಬೀಟೆ, ಹೊನ್ನೆ, ಹಲಸು ಮಾವು, ಹಾಲೆ, ಬೇವು, ಕಿರಾಲ್ ಬೋಗಿ ಮೊದಲಾದ ಆರ್ಥಿಕ ಮೌಲ್ಯದ ಗುಣಮಟ್ಟದ ಸಸಿಗಳನ್ನು ಬೆಳೆಸಿ ಗ್ರಾಮ ಪಂಚಾಯತ್‌ಗಳಿಗೆ ಸರಬರಾಜು ಮಾಡಲಿದೆ. ಆದರೆ, ಹುಣಸೆ ಹಾಗೂ ನೇರಳೆಯಂತಹ ನಿಧಾನವಾಗಿ ಬೆಳೆಯುವ ಮತ್ತು ಹಣ್ಣು ಬಿಡುವ ಜಾತಿಯ ಮರಗಳನ್ನು ನೆಡಲು ಅವಕಾಶವಿಲ್ಲ.

**ಯೋಜನೆ ಅನುಷ್ಠಾನಕ್ಕೆ 3 ಹಂತದ ಸಮಿತಿ**

ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಸರ್ಕಾರ 3 ಹಂತದ ಸಮಿತಿಗಳನ್ನು ರಚಿಸಿದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಕಾರ್ಯನಿರ್ವಹಿಸಲಿದ್ದು, ಜಿಲ್ಲಾ ಪಂಚಾಯತ್ ಸಿಇಒ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಲೋಕೋಪಯೋಗಿ, ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸದಸ್ಯರಾಗಿದ್ದಾರೆ. ಈ ಸಮಿತಿ ತಿಂಗಳಿಗೊಮ್ಮೆ ಸಭೆ ಸೇರಲಿದೆ. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು (ಇಒ) ಅಧ್ಯಕ್ಷರಾಗಿ ಹಾಗೂ ತಹಶೀಲ್ದಾರ್ ಸಹ–ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿ ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಲಿದೆ. ಗ್ರಾಮ ಪಂಚಾಯತ್ ಮಟ್ಟದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) ಅಧ್ಯಕ್ಷತೆಯಲ್ಲಿ ಹಾಗೂ ಗ್ರಾಮ ಆಡಳಿತ ಅಧಿಕಾರಿ ಸಹ–ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಲಿದ್ದು, ನೆಡುವ ಋತುವಿನಲ್ಲಿ ವಾರಕ್ಕೊಮ್ಮೆ ಸಭೆ ನಡೆಸಿ ರೈತರು ಹಾಗೂ ಸಸಿಗಳ ಗುರುತಿಸುವಿಕೆ ಕಾರ್ಯ ನಿರ್ವಹಿಸಲಿದೆ. ಜಿಲ್ಲಾಮಟ್ಟದ ಕೆಡಿಪಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಯೋಜನೆಯ ಪ್ರಗತಿಯನ್ನು ಪರಿಶೀಲಿಸಲಿದ್ದಾರೆ. ಯೋಜನೆಯ ಪ್ರಚಾರ ಮತ್ತು ಜಾಗೃತಿಗಾಗಿ ಪ್ರತಿ ಅರಣ್ಯ ವಲಯಕ್ಕೆ ಗೌರವಧನದ ಆಧಾರದಲ್ಲಿ 'ಸುಗಮಗಾರರನ್ನು' ನಿಯೋಜಿಸಲು ಆದೇಶದಲ್ಲಿ ತಿಳಿಸಲಾಗಿದೆ.

---

### ಹರಿದಾಸರ ಕೃತಿಗಳಿಗೆ ನೃತ್ಯನಮನ; ಬಾಲಪ್ರತಿಭೆ ಪೂರ್ವಿ ಎಂ.ಎಸ್. ಕಲಾಪ್ರದರ್ಶನ

# ಅ.31ರಂದು ದಾಸ ನೃತ್ಯಾರ್ಚನೆ ಭರತನಾಟ್ಯ ರಂಗಪ್ರವೇಶ

**ಬೆಂಗಳೂರು, ಅ.24–** ಬಾಲ ನೃತ್ಯಪ್ರತಿಭೆ ಪೂರ್ವಿ ಎಂ.ಎಸ್. ಭರತನಾಟ್ಯ ರಂಗಪ್ರವೇಶದ ಅಂಗವಾಗಿ 'ದಾಸ ನೃತ್ಯಾರ್ಚನೆ' ಅ. 31ರ ಶನಿವಾರ ಸಂಜೆ 4 .00ಗಂಟೆಗೆ ದೊಡ್ಡಕಲ್ಲಸಂದ್ರದ ಕನಕಪುರ ಮುಖ್ಯರಸ್ತೆಯ ಮೀನಾಕ್ಷಿ ರಂಗಮಂಚ್‌ನಲ್ಲಿ ನಡೆಯಲಿದೆ. ಹರಿದಾಸರ ಭಕ್ತಿಪೂರ್ಣ ಕೃತಿಗಳನ್ನು ಭರತನಾಟ್ಯದ ಮೂಲಕ ಪ್ರಸ್ತುತಪಡಿಸುವುದು ಕಾರ್ಯಕ್ರಮದ ವಿಶೇಷವಾಗಿದೆ.

ಮಾನಸಾ ಸಂದೀಪ್ ಮತ್ತು ಸಂದೀಪ್ ಎಂ.ಆರ್. ದಂಪತಿಯ ಪುತ್ರಿಯಾದ ಪೂರ್ವಿ, ವಿದುಷಿ ಪದ್ಮಗಂಧಿನಿ ರಾವ್ ಹುಲಿಕಲ್ ಮಾರ್ಗದರ್ಶನದಲ್ಲಿ ನೃತ್ಯಾಭ್ಯಾಸ ಮಾಡಿದ್ದಾರೆ. ಕಾರ್ಯಕ್ರಮದಲ್ಲಿ ಖ್ಯಾತ ಕರ್ನಾಟಕ ಸಂಗೀತ ವಿದ್ವಾಂಸ ವಿದ್ವಾನ್ ಪಟ್ಟಾಭಿರಾಮ ಪಂಡಿತ್ ಟಿ.ಎಸ್. ಹಾಗೂ ಭರತನಾಟ್ಯ ಕಲಾವಿದೆ, ನೃತ್ಯ ಸಂಯೋಜಕಿ, ನಟುವನಾರ್ ಮತ್ತು ಗಾಯಕಿ ವಿದುಷಿ ಅಪರ್ಣಾ ಕೆ. ಶರ್ಮಾ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಖ್ಯಾತ ನೃತ್ಯಗುರು ಮತ್ತು ದೂರದರ್ಶನ ಕಲಾವಿದೆ ವಿದುಷಿ ಡಾ. ಪ್ರಿಯಾ ಗಣೇಶ್ ಅತಿಥಿಗಳಾಗಿರಲಿದ್ದಾರೆ.



**ಪೂರ್ವಿಯ ಕಲಾಸಾಧನೆ:** ಆರನೇ ವಯಸ್ಸಿನಲ್ಲಿ ಭರತನಾಟ್ಯ ಕಲಿಕೆ ಆರಂಭಿಸಿದ ಪೂರ್ವಿ, ರಾಮನಾಥಪುರ, ಹೊರನಾಡು, ನಂದಿಕೂರು ಮತ್ತು ಸುತ್ತೂರು ಮಠ ಸೇರಿದಂತೆ ಹಲವು ಸಾಂಸ್ಕೃತಿಕ ವೇದಿಕೆಗಳಲ್ಲಿ ಪ್ರದರ್ಶನ ನೀಡಿದ್ದಾರೆ.

ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಜೂನಿಯರ್ ಭರತನಾಟ್ಯ ಪರೀಕ್ಷೆಯಲ್ಲಿ ಶೇ.91 ಅಂಕ ಗಳಿಸಿದ್ದಾರೆ. ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪೂರ್ವಿ, ವಿದ್ವಾನ್ ತುಮಕೂರು ಬಿ. ಶಶಿಶಂಕರ್ ಅವರ ಬಳಿ ನಟುವಾಂಗ ಹಾಗೂ ವಿದುಷಿ ರಾಧಿಕಾ ವಾಸುದೇವನ್ ಬಳಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿಯುತ್ತಿದ್ದಾರೆ.

**ಅನುಭವಿ ಗುರುಗಳ ಮಾರ್ಗದರ್ಶನ:** ಎರಡು ದಶಕಗಳ ಕಲಾನುಭವ ಹೊಂದಿರುವ ವಿದುಷಿ ಪದ್ಮಗಂಧಿನಿ ರಾವ್ ಹುಲಿಕಲ್ ಅವರು ಡಾ. ಪ್ರಿಯಾ ಗಣೇಶ್, ವಿದ್ವಾನ್ ಅನಿಲ್ ಕುಮಾರ್ ಮತ್ತು ವಿದುಷಿ ದಿವ್ಯಶ್ರೀ ಗುರುಪ್ರಸಾದ್ ಮಾರ್ಗದರ್ಶನದಲ್ಲಿ ತರಬೇತಿ ಪಡೆದಿದ್ದಾರೆ. ಪೋಸ್ಟ್–ವಿದ್ವತ್ ಪರೀಕ್ಷೆಗಳನ್ನು ಪೂರ್ಣಗೊಳಿಸಿರುವ ಅವರು 2020ರಲ್ಲಿ ರಂಗಪ್ರವೇಶ ಮಾಡಿದ್ದಾರೆ.

ಮೈಸೂರು ದಸರಾ, ದೂರದರ್ಶನ, ಭಾರತೀಯ ವಿದ್ಯಾಭವನ ಮತ್ತು ಅಯೋಧ್ಯೆಯ ಶ್ರೀರಾಮಮಂದಿರ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಪ್ರದರ್ಶನ ನೀಡಿದ್ದಾರೆ. 'ಅಂತರ್ಯಾಗ ಸುಧಾ', 'ಸೌಂದರ್ಯ ಲಹರಿ ವಿಲಾಸ' ಮತ್ತು 'ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ' ಅವರ ಪ್ರಮುಖ ನೃತ್ಯರೂಪಕಗಳು.

**ದಾಸಸಾಹಿತ್ಯದ ನೃತ್ಯವೈಭವ:** ಕಾರ್ಯಕ್ರಮದಲ್ಲಿ ಪುಷ್ಪಾಂಜಲಿ, ಕನಕದಾಸರ 'ನಮ್ಮಮ್ಮ ಶಾರದೆ', ಶ್ರೀಪಾದರಾಜರ 'ಭೂಷಣಕೆ ಭೂಷಣ', ಪುರಂದರದಾಸರ 'ಆಡಪೋದಲ್ಲೆ ಮಕ್ಕಳು', ವಿಜಯದಾಸರ 'ಕುನಿಕುನಿಯುತ ಬಾರೋ', ಜಗನ್ನಾಥದಾಸರ 'ಆವ ರೂಪವ ನೋಡಿ' ನಿಂದಾಸ್ತುತಿ ಮತ್ತು ಉಗಾಭೋಗ, ಗೋಪಾಲದಾಸರ ಸಾಹಿತ್ಯವಿರುವ ತಿಲ್ಲಾನ ಹಾಗೂ ಹರಪನಹಳ್ಳಿ ಭೀಮವ್ವ ಅವರ ಮಂಗಳ ಸೇರಿದಂತೆ ಎಂಟು ಕೃತಿಗಳು ಪ್ರಸ್ತುತಗೊಳ್ಳಲಿವೆ.

ವಿದುಷಿ ಹರ್ಷಿತಾ ವಿದ್ಯಾ ಗಾಯನ, ಪದ್ಮಗಂಧಿನಿ ರಾವ್ ಹುಲಿಕಲ್ ನಟುವಾಂಗ, ವಿದ್ವಾನ್ ಶ್ರೀಹರಿ ರಂಗಸ್ವಾಮಿ ಮೃದಂಗ, ವಿದ್ವಾನ್ ತುಮಕೂರು ಬಿ. ಶಶಿಶಂಕರ್ ಘಟಂ ಹಾಗೂ ವಿದ್ವಾನ್ ನರಸಿಂಹ ಮೂರ್ತಿ ಕೊಳಲಿನಲ್ಲಿ ಸಹಕರಿಸಲಿದ್ದಾರೆ. ಸುಷ್ಮಾ ಡಿ.ಎಸ್. ಕಾರ್ಯಕ್ರಮ ನಿರೂಪಣೆ ಮಾಡಲಿದ್ದಾರೆ.



ಹಂಪಿಯ ಸಾಸಿವೆಕಾಳು ಬಸ್ ನಿಲ್ದಾಣದ ಬಳಿ ಶನಿವಾರ ಸ್ವಚ್ಛತಾ ಕಾರ್ಯದ ವೇಳೆ ನಿಯಮ ಉಲ್ಲಂಘಿಸಿ ಜೆಸಿಬಿ ಯಂತ್ರವನ್ನು ಬಳಸಲಾಗಿದೆ. ಯುನೆಸ್ಕೋ ಸಾಮಾನ್ಯವಾಗಿ ವಿಶ್ವ ಪರಂಪರೆಯ ತಾಣಗಳು ಮತ್ತು ಪುರಾತತ್ವ ಸಂರಕ್ಷಿತ ವಲಯಗಳಲ್ಲಿ ಜೆಸಿಬಿಯಂತಹ ಭಾರೀ ಯಂತ್ರೋಪಕರಣಗಳ ಬಳಕೆಯನ್ನು ನಿಷೇಧಿಸುತ್ತದೆ ಅಥವಾ ಕಟ್ಟುನಿಟ್ಟಾಗಿ ನಿಯಂತ್ರಿಸುತ್ತದೆ.

### ಮದುವೆಯಾಗುವುದಾಗಿ ನಂಬಿಸಿ 7 ವರ್ಷ ಸಹಜೀವನ

## ದೀರ್ಘ ಕಾಲದವರೆಗೆ ದೈಹಿಕ ಸಂಬಂಧ ವಂಚನೆಯಲ್ಲ: ಹೈಕೋರ್ಟ್

**ಬೀದರ್, ಅ.27:** ಮದುವೆಯಾಗುವುದಾಗಿ ನಂಬಿಸಿ ಏಳು ವರ್ಷಗಳ ದೀರ್ಘಕಾಲದ ವರೆಗೆ ಸಹಜೀವನ ನಡೆಸಿದ ನಂತರ ಜಾತಿ ಕಾರಣಕ್ಕೆ ಮದುವೆಗೆ ನಿರಾಕರಿಸಿದ್ದನ್ನು 'ಮದುವೆಯ ಸುಳ್ಳು ಭರವಸೆ' ನೀಡಿ ನಿರಾಕರಿಸಿರುವುದು ವಂಚನೆ ಎಂದು ಪರಿಗಣಿಸಲಾಗುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಬೀದರ್ ಮೂಲದ ವೈದ್ಯ ಡಾ. ರಾಮದಾಸ್ ಅಲಿಯಾಸ್ ರಾಮದಾಸ್ ಪಾಟೀಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಪೀಠದಲ್ಲಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಇಬ್ಬರೂ ವಯಸ್ಕರಾಗಿದ್ದು, ಸುಮಾರು 7 ವರ್ಷಗಳ ಕಾಲ ಸಹಜೀವನದೊಂದಿಗೆ ಪರಸ್ಪರ ಒಪ್ಪಿಗೆಯಿಂದ ದೈಹಿಕ ಸಂಬಂಧ ಹೊಂದಿದ್ದರು. ಕೇವಲ ಮದುವೆ ಮುರಿದು ಬಿದ್ದ ಮಾತ್ರಕ್ಕೆ ಅದನ್ನು ಆರಂಭದಿಂದಲೂ ವಂಚಿಸುವ ದುರುದ್ದೇಶವಿತ್ತು ಎಂದು ಹೇಳಲಾಗುವುದಿಲ್ಲ ಎಂದು ನ್ಯಾಯಾಲಯ ಪ್ರತಿಪಾದಿಸಿದೆ.

ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿರುವ ಪೀಠ, ದೀರ್ಘಕಾಲದ ಪರಸ್ಪರ ಒಪ್ಪಿಗೆಯ ಸಂಬಂಧಗಳು ಕಹಿ ಅಂತ್ಯ ಕಂಡಾಗ ಸೆಕ್ಷನ್ 69 ಅನ್ನು ಅಸ್ತ್ರವನ್ನಾಗಿ ಬಳಸುವ ಪ್ರವೃತ್ತಿ ಹೆಚ್ಚಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದೆ.



ಮದುವೆಯ ಭರವಸೆ ನೀಡುವ ಆರಂಭದ ದಿನದಲ್ಲೇ ಅದನ್ನು ಈಡೇರಿಸುವ ಯಾವುದೇ ಉದ್ದೇಶ ಇರದೇ ವಂಚಿಸಿದ್ದರೆ ಮಾತ್ರ ಅದು ಅಪರಾಧವಾಗುತ್ತದೆ. ಪ್ರೀತಿಯ ಸಂಬಂಧವು ಹಲವು ವರ್ಷಗಳ ನಂತರದ ದಿನಗಳಲ್ಲಿ ಜಾತಿ ತಾರತಮ್ಯದಂತಹ ಕಾರಣಗಳಿಂದ ಮುರಿದುಬಿದ್ದರೆ ಅದನ್ನು ವಂಚನೆ ಎನ್ನಲಾಗದು ಎಂದು ಸ್ಪಷ್ಟಪಡಿಸಿದೆ.

ಅಲ್ಲದೆ, ದೂರಿನಲ್ಲಿ ಯಾವುದೇ ದೈಹಿಕ ಹಲ್ಲೆ ಅಥವಾ ಜಾತಿ ನಿಂದನೆಗೆ ಸಂಬಂಧಿಸಿದಂತೆ ಸೂಕ್ತ ಸಾಕ್ಷ್ಯಗಳಿಲ್ಲದಿರುವುದರಿಂದ ಮತ್ತು ಇಡೀ ಸಂಬಂಧವು ಪರಸ್ಪರ ಒಪ್ಪಿಗೆಯಿಂದ ಕೂಡಿದ್ದರಿಂದ ಈ ಪ್ರಕರಣದಲ್ಲಿ ಜಾತಿ ದೌರ್ಜನ್ಯ ಕಾಯಿದೆ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗುವುದಿಲ್ಲ. ಈ ಹಿನ್ನೆಲೆಯಲ್ಲಿ, ಅರ್ಜಿದಾರರ ವಿರುದ್ಧ ಮಂಗಳೂರಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣವನ್ನು ರದ್ದುಗೊಳಿಸಲಾಗುತ್ತಿದೆ ಎಂದು ನ್ಯಾಯಾಲಯ ಆದೇಶಿಸಿದೆ.

**ಪ್ರಕರಣದ ಹಿನ್ನೆಲೆ:** ಅರ್ಜಿದಾರರು ಮತ್ತು ದೂರುದಾರರು ವೈದ್ಯರಾಗಿದ್ದು, ಮಂಗಳೂರಿನ ಬೇರೆ ಬೇರೆ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. 2017ರಲ್ಲಿ ಬೀದರ್‌ನಲ್ಲಿ ಇಬ್ಬರ ಪರಿಚಯವಾಗಿ ಅಲ್ಲಿಂದ ಇಬ್ಬರ ನಡುವೆ ಸ್ನೇಹ ಬೆಳೆದು ಬಳಿಕ ಅದು ಪ್ರೇಮ ಸಂಬಂಧವಾಗಿ 2019ರ ವರೆಗೂ ಮುಂದುವರಿದಿತ್ತು.

2017ರಿಂದ 2023ರ ವರೆಗೂ ಇಬ್ಬರ ನಡುವೆ ದೈಹಿಕ ಸಂಬಂಧವೂ ಇತ್ತು. ಆದರೆ, ದೂರುದಾರ ಪರಿಶಿಷ್ಟ ಜಾತಿಗೆ ಸೇರಿದವರು ಎಂಬ ಕಾರಣದಿಂದ ಇಬ್ಬರ ನಡುವೆ ಭಿನ್ನಾಭಿಪ್ರಾಯ ಉಂಟಾಗಿತ್ತು.

ಅಲ್ಲದೆ, ಆರೋಪಿ ಬೇರೆ ಯುವತಿಯನ್ನು ಮದುವೆಯಾಗಲು ನಿರ್ಧರಿಸಿದ್ದರು. ಇದರಿಂದ ಅಸಮಾಧಾನಗೊಂಡ ಸಂತ್ರಸ್ತೆ 2025ರಲ್ಲಿ ಮಂಗಳೂರಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪೊಲೀಸರು ತನಿಖೆ ನಡೆಸಿ ಅರ್ಜಿದಾರರ ವಿರುದ್ಧ ಆರೋಪಪಟ್ಟಿ ಸಲ್ಲಿಸಿದ್ದರು. ಅದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

## ಬರಿದಾದ ಮಾಣಿಕೇಶ್ವರ ಬ್ಯಾರೇಜ್: ರೈತರಲ್ಲಿ ಆತಂಕ

**ಬೀದರ, ಅ. 24:** ಜಿಲ್ಲೆಯ ಹುಲಸೂರ ತಾಲ್ಲೂಕಿನ ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಮಾಣಿಕೇಶ್ವರ ಸೇತುವೆ ಸಹಿತ ಬ್ಯಾರೇಜ್‌ನಲ್ಲಿ ನೀರು ಸಂಗ್ರಹವಾಗುತ್ತಿಲ್ಲ. ಗೇಟ್‌ಗಳ ದುರಸ್ತಿಗೆ ಹಲವು ಬಾರಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿದ್ದರೂ ನೀರು ಸೋರಿಕೆ ನಿಂತಿಲ್ಲ. ಈಗ ಹಳೆಯ ಗೇಟ್‌ಗಳನ್ನು ತೆರವುಗೊಳಿಸಿ ಹೊಸ ಗೇಟ್‌ಗಳನ್ನು ಅಳವಡಿಸಲು ಮತ್ತೆ 50 ಕೋಟಿ ಅನುದಾನ ಬಿಡುಗಡೆಯಾಗಿದೆ.

ಹುಲಸೂರ ಸಮೀಪದ ಮಾಣಿಕೇಶ್ವರ ಗ್ರಾಮದ ಬಳಿ ಮಾಂಜ್ರಾ ನದಿಗೆ ಅಡ್ಡಲಾಗಿ ರೂ.50.73 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಸೇತುವೆ ಸಹಿತ ಬ್ರಿಜ್ ಕಂ ಬ್ಯಾರೇಜ್‌ನಲ್ಲಿ ನೀರು ಸಂಗ್ರಹವಾಗುತ್ತಿಲ್ಲ. ಈಗ ಹಳೆಯ ಗೋಡ್ಬೋಲೆ ಮಾದರಿಯ ಗೇಟ್‌ಗಳನ್ನು ಬದಲಿಸಿ, ವಿದ್ಯುತ್ ಚಾಲಿತ ಹೊಸ ಗೇಟ್‌ಗಳನ್ನು ಅಳವಡಿಸಲು ಸರ್ಕಾರ 150 ಕೋಟಿ ವೆಚ್ಚದ ಯೋಜನೆಗೆ ಅನುಮೋದನೆ ನೀಡಿದೆ. ಮೊದಲ ಹಂತದಲ್ಲಿ 50 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ಬರಗಾಲದ ಸಂದರ್ಭದಲ್ಲಿ ರೈತರು, ಜಾನುವಾರುಗಳಿಗೆ ನೀರಿನ ಆಸರೆಯಾಗಬೇಕಿದ್ದ ಬ್ಯಾರೇಜ್‌ನಲ್ಲಿ ನೀರು ಸಂಗ್ರಹವಾಗದಿರುವುದು ಸ್ಥಳೀಯರ ಅಸಮಾಧಾನಕ್ಕೆ ಕಾರಣವಾಗಿದೆ. ಈ ಹಿಂದಿನ ಕಾಮಗಾರಿಯ ಗುಣಮಟ್ಟದ ಮೇಲೆ ಪ್ರಶ್ನೆಗಳು ಎದ್ದಿವೆ. ಈ ಕುರಿತು ಸಮಗ್ರ ತಾಂತ್ರಿಕ ತನಿಖೆ ನಡೆಸಬೇಕು ಎಂಬ ಆಗ್ರಹವೂ ವ್ಯಕ್ತವಾಗಿದೆ.

ಮಾಣಿಕೇಶ್ವರ ಬ್ಯಾರೇಜ್ ನಿರ್ಮಾಣಕ್ಕೆ 50.73 ಕೋಟಿ ವೆಚ್ಚವಾಗಿದೆ. ಬ್ಯಾರೇಜ್ 486 ಮೀಟರ್ ಉದ್ದವಿದೆ. 990 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶ ಹೊಂದಿದೆ. ಆದರೆ, ಗೇಟ್‌ಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದಿರುವುದು ಹಾಗೂ ನೀರು ಸೋರಿಕೆಯಾಗುತ್ತಿರುವುದರಿಂದ ನೀರಿನ ಸಂಗ್ರಹಣೆಗೆ ತೊಂದರೆಯಾಗುತ್ತಿದೆ.

ಗೇಟ್‌ಗಳ ವಿವಿಧ ಭಾಗಗಳು ಹಾಳಾಗಿದ್ದು, ಅಣೆಕಟ್ಟಿನ



ಕೆಳಭಾಗದಲ್ಲಿ ನೀರಿನ ಸೆಳೆತದಿಂದ ಅಡಿಪಾಯದ ಮಣ್ಣು ಕೊಚ್ಚಿಹೋಗದಂತೆ ನಿರ್ಮಿಸಿರುವ ರಕ್ಷಣಾತ್ಮಕ ಕಾಂಕ್ರೀಟ್ ಪದರವೂ ಹಾನಿಗೊಳಗಾಗಿದೆ. ಇದರಿಂದ ನೀರು ಸೋರಿಕೆಯಾಗುತ್ತಿದೆ ಎಂದು ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

2024–25ನೇ ಹಣಕಾಸು ವರ್ಷದಲ್ಲಿ ಬ್ಯಾರೇಜ್‌ನ ವಾರ್ಷಿಕ ನಿರ್ವಹಣೆಗಾಗಿ ಕರ್ನಾಟಕ ನೀರಾವರಿ ನಿಗಮವು 6.98 ಲಕ್ಷದ ಟೆಂಡರ್ ಪ್ರಕಟಿಸಿತ್ತು. ಗೇಟ್‌ಗಳ ದುರಸ್ತಿ ಕಾರ್ಯಗಳನ್ನು ಹಲವು ಬಾರಿ ಕೈಗೊಂಡಿದ್ದರೂ ಸಮಸ್ಯೆ ಬಗೆಹರಿದಿಲ್ಲ. ಇದರಿಂದ ಬೇಸಿಗೆಯಲ್ಲಿ ರೈತರು, ಜನ ಜಾನುವಾರುಗಳಿಗೆ ನೀರಿನ ಸಮಸ್ಯೆ ಉಂಟಾಗುತ್ತಿದೆ.

ತನಿಖೆಗೆ ಆಗ್ರಹ: 50.73 ಕೋಟಿ ವೆಚ್ಚದ ಬ್ಯಾರೇಜ್‌ನಲ್ಲಿ ನೀರು ಸಂಗ್ರಹವಾಗದಿರುವುದಕ್ಕೆ ಕಾರಣವೇನು ಎಂಬುದನ್ನು ಪತ್ತೆಹಚ್ಚಬೇಕು. ನಿರ್ಮಾಣ, ಗೇಟ್‌ಗಳ ಅಳವಡಿಕೆ, ದುರಸ್ತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದ ಕಾಮಗಾರಿಗಳ ಗುಣಮಟ್ಟ ಮತ್ತು ವೆಚ್ಚದ ಕುರಿತು ಸಮಗ್ರ ತಾಂತ್ರಿಕ ತನಿಖೆ ನಡೆಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

**ಹೊಸ ಗೇಟ್‌ಗಳ ಅಳವಡಿಕೆಗೆ ಕ್ರಮ:** ಗೋಡಬೋಲೆ ಮಾದರಿಯ ಗೇಟ್‌ಗಳನ್ನು ಪ್ರವಾಹದ ಸಂದರ್ಭದಲ್ಲಿ ಸ್ವಯಂಚಾಲಿತವಾಗಿ ತೆರೆದು, ನೀರು ಸರಾಗವಾಗಿ ಹರಿಯುವಂತೆ ವಿನ್ಯಾಸಗೊಳಿಸಲಾಗಿತ್ತು. ಆದರೆ, ಗೇಟ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದಾಗಿ ವಿದ್ಯುತ್ ಚಾಲಿತ ಗೇಟ್‌ಗಳ ಅಳವಡಿಕೆ ಮೂಲಕ ನೀರು ಸೋರಿಕೆ ತಡೆಯಬಹುದು' ಎಂದು ಕರ್ನಾಟಕ ನೀರಾವರಿ ನಿಗಮದ ಭಾಲ್ಕಿ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಜ್ಞಾನೇಶ್ವರ ಮಂಡೆ ತಿಳಿಸಿದರು.

ಗೇಟ್‌ಗಳ ಸಮಸ್ಯೆ ಪರಿಹರಿಸಲು ಸರ್ಕಾರ 150 ಕೋಟಿ ವೆಚ್ಚದ ಕಾಮಗಾರಿಗೆ ಅನುಮೋದನೆ ನೀಡಿದೆ. ಮೊದಲ ಹಂತದಲ್ಲಿ ರೂ.50 ಕೋಟಿ ಅನುದಾನ ಬಿಡುಗಡೆಯಾಗಿದೆ. ಮೊದಲ ಹಂತದಲ್ಲಿ ಮಾಣಿಕೇಶ್ವರ ಮತ್ತು ಜೀರಗ್ಯಾಳ ಅಣೆಕಟ್ಟುಗಳಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಪ್ರತಿ ಅಣೆಕಟ್ಟಿನಲ್ಲಿ 20ರಿಂದ 21 ಗೇಟ್‌ಗಳನ್ನು ಅಳವಡಿಸಲು ಯೋಜಿಸಲಾಗಿದೆ. ಇದರಿಂದ ನೀರು ಸಂಗ್ರಹಣೆಯ ಸಮಸ್ಯೆ ಬಗೆಹರಿಯುವ ನಿರೀಕ್ಷೆಯಿದೆ ಎಂದರು.

ಮಾಣಿಕೇಶ್ವರ ಮತ್ತು ಜೀರಗ್ಯಾಳ ಅಣೆಕಟ್ಟುಗಳು ಭಾಲ್ಕಿ ವಿಭಾಗದ ವ್ಯಾಪ್ತಿಗೆ ಬರುತ್ತವೆ. ಉಳಿದ ಅಣೆಕಟ್ಟುಗಳು ಬೀದರ್ ವಿಭಾಗದ ವ್ಯಾಪ್ತಿಯಲ್ಲಿವೆ ಎಂದು ಅವರು ತಿಳಿಸಿದರು.

**ಬ್ಯಾರೇಜ್ ನಿರ್ಮಾಣಕ್ಕೆ 50.73 ಕೋಟಿ ವೆಚ್ಚ :** ಮೈಸೂರು ಕನ್‌ಸ್ಟ್ರಕ್ಷನ್ ಕಂಪನಿಯು ಮಾಣಿಕೇಶ್ವರ ಬ್ಯಾರೇಜ್ ನಿರ್ಮಾಣ ಕಾಮಗಾರಿ ಕೈಗೊಂಡಿತ್ತು. 2006ರ ಜೂನ್ 6ರಂದು ಆರಂಭವಾದ ಕಾಮಗಾರಿ 2012ರ ಸೆಪ್ಟೆಂಬರ್‌ನಲ್ಲಿ ಪೂರ್ಣಗೊಂಡಿದೆ. ಸಿವಿಲ್ ಕಾಮಗಾರಿಗೆ 38.94 ಕೋಟಿ ಹಾಗೂ ಗೇಟ್‌ಗಳ ಅಳವಡಿಕೆಗೆ 11.79 ಕೋಟಿ ಸೇರಿ 50.73 ಕೋಟಿ ವೆಚ್ಚವಾಗಿದೆ. 486 ಮೀಟರ್ ಉದ್ದದ ಬ್ಯಾರೇಜ್‌ನಲ್ಲಿ 52 ಗೇಟ್‌ಗಳಿದ್ದು, ನೀರಿನ ಸಂಗ್ರಹ ಸಾಮರ್ಥ್ಯ 0.085 ಟಿಎಂಸಿ ಅಡಿ ಇದೆ. 990 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶ ಹೊಂದಿದೆ. 2024–25ನೇ ಸಾಲಿನ ವಾರ್ಷಿಕ ನಿರ್ವಹಣಾ ಟೆಂಡರ್ ಮೊತ್ತ 6.98 ಲಕ್ಷ ತಗುಲಿದೆ.

## ನಾಪತ್ತೆಯಾಗಿದ್ದ ಕೆಆರ್‌ಡಿಐಎಲ್ ಎಇಇ ಮುಂಬೈನಲ್ಲಿ ಪತ್ತೆ

**ಗದಗ, ಅ.24:** ಸೆಪ್ಟೆಂಬರ್ 14ರಂದು ನಾಪತ್ತೆಯಾಗಿದ್ದ ಇಲ್ಲಿನ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಡಿಐಎಲ್) ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಫರ್ವೇಜ್ ಧಾರವಾಡ, ಅಕ್ಟೋಬರ್ 22ರಂದು ಮುಂಬೈನಲ್ಲಿ ಪತ್ತೆಯಾಗಿದ್ದಾರೆ.

ಸರ್ಕಾರದಿಂದ ಅನುದಾನ ಬಿಡುಗಡೆಯಾಗದೆ, ಗುತ್ತಿಗೆದಾರರ ಒತ್ತಡಕ್ಕೆ ಬೇಸತ್ತು ನಾಲ್ಕು ಪುಟಗಳ ಡೆತ್‌ನೋಟ್ ಬರೆದಿಟ್ಟು ನಿಗೂಢವಾಗಿ ನಾಪತ್ತೆಯಾಗಿದ್ದ ಗದಗ ಕೆಆರ್‌ಐಡಿಎಲ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪರ್ವೇಜ್ ಧಾರವಾಡ ನಾಪತ್ತೆ ಪ್ರಕರಣಕ್ಕೆ ಕೊನೆಗೂ ಮಹತ್ವದ ಅಂತ್ಯ ಸಿಕ್ಕಿದೆ. ಬರೋಬ್ಬರಿ 40 ದಿನಗಳ ಕಾಲ ಪೊಲೀಸರ ಕಣ್ಣಿಗೆ ಬೀಳದೆ ಐದು ರಾಜ್ಯಗಳಲ್ಲಿ ಅಲೆದಾಡುತ್ತಿದ್ದ ಅಧಿಕಾರಿಯನ್ನು ರಾಜ್ಯ ಪೊಲೀಸ್ ತಂಡ ಮಹಾರಾಷ್ಟ್ರದ ಮುಂಬೈನಲ್ಲಿ ಪತ್ತೆಹಚ್ಚಿ ವಶಕ್ಕೆ ಪಡೆದಿದೆ.

ಪೊಲೀಸರು ತಮ್ಮ ಲೊಕೇಶನ್ ಪತ್ತೆಹಚ್ಚಬಾರದು ಎಂಬ ಉದ್ದೇಶದಿಂದ ಅಧಿಕಾರಿ ಪರ್ವೇಜ್ ಮೊಬೈಲ್ ಫೋನ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದರು. ಯಾವುದೇ ಎಟಿಎಂ ಅಥವಾ ಡಿಜಿಟಲ್ ಪಾವತಿಗಳನ್ನು ಬಳಸದೆ ನಗದು ಹಣದಲ್ಲೇ ಬದುಕು ಸಾಗಿಸುತ್ತಿದ್ದರು. ಇದು ತನಿಖಾ ತಂಡಕ್ಕೆ ಜಾಡು ಹಿಡಿಯಲು ಭಾರೀ ಸವಾಲಾಗಿ ಪರಿಣಮಿಸಿತ್ತು. ಸೆಪ್ಟೆಂಬರ್ 12ರಂದು ಬೆಂಗಳೂರಿನ ಕೆಆರ್‌ಐಡಿಎಲ್ ಎಂಡಿ ಅವರಿಗೆ ಪತ್ರ ಬರೆದಿದ್ದ ಪರ್ವೇಜ್, ಸರ್ಕಾರ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಕೆಲಸ ಮುಗಿಸಿದ ಗುತ್ತಿಗೆದಾರರ ಕಿರುಕುಳದಿಂದ ತೀವ್ರ ಮಾನಸಿಕ ಹಿಂಸೆಯಾಗಿದೆ. ನನ್ನ ಸಾವಿಗೆ ನಾನೇ ಕಾರಣ ಎಂದು 4 ಪುಟಗಳ ಡೆತ್‌ನೋಟ್ ಬರೆದಿಟ್ಟಿದ್ದರು.

ಮರುದಿನ (ಸೆ.13) ಬೆಂಗಳೂರಿನಲ್ಲಿ ಮೀಟಿಂಗ್ ಇದೆ ಎಂದು ಕುಟುಂಬಸ್ಥರಿಗೆ ಹೇಳಿ ಗದಗದಿಂದ ರೈಲು ಹತ್ತಿದ್ದ ಅಧಿಕಾರಿ, ಎರಡು ದಿನಗಳ ಬಳಿಕ ಮೊಬೈಲ್ ಸ್ವಿಚ್ ಆಫ್ ಮಾಡಿ ಕಣ್ಮರೆಯಾಗಿದ್ದರು. ಸೆಪ್ಟೆಂಬರ್ 16ರಂದು ಗದಗ–ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು 5 ವಿಶೇಷ ತಂಡಗಳನ್ನು ರಚಿಸಿ ಶೋಧ ಕಾರ್ಯ ಚುರುಕುಗೊಳಿಸಿದ್ದರು. ಅಧಿಕಾರಿಯ ಚಲನವಲನದ ಜಾಡು ಹಿಡಿದ ಪೊಲೀಸರಿಗೆ ಬೆಚ್ಚಿಬೀಳಿಸುವ



ಮಾಹಿತಿ ಲಭ್ಯವಾಗಿತ್ತು. ಬೆಂಗಳೂರಿನಿಂದ ಆಂಧ್ರಪ್ರದೇಶದ ವಿಜಯವಾಡಕ್ಕೆ ತೆರಳಿದ್ದ ಅಧಿಕಾರಿ, ಅಲ್ಲಿಂದ ಮಧ್ಯಪ್ರದೇಶದ ಭೋಪಾಲ್‌ಗೆ ತೆರಳಿದ್ದರು. ಭೋಪಾಲ್ ರೈಲ್ವೆ ನಿಲ್ದಾಣದ ಸಿಸಿಟಿವಿ ಕ್ಯಾಮೆರಾದಲ್ಲಿ ಇವರ ಚಲನವಲನ ಸೆರೆಯಾಗಿತ್ತು. ಬಳಿಕ ಸ್ಥಳೀಯ ರೈಲಿನ ಮೂಲಕ ಉಜ್ಜಯಿನಿಗೆ ತೆರಳಿದ್ದರು.

ಪೊಲೀಸರು ಅಲ್ಲಿನ ಮಹಾಕಾಳೇಶ್ವರ ದೇವಸ್ಥಾನ ಹಾಗೂ ಶಾಹಿ ಮಸೀದಿಯ ಬಳಿ ಶೋಧ ನಡೆಸಿದರೂ ಸಿಕ್ಕಿರಲಿಲ್ಲ. ನಂತರ ರಾಜಸ್ಥಾನದ ಪ್ರಸಿದ್ಧ ಅಜ್ಮೀರ್ ಶರೀಫ್ ದರ್ಗಾಕ್ಕೆ ತೆರಳಿದ್ದ ಸುಳಿವು ಸಿಕ್ಕು ಪೊಲೀಸರು ಅತ್ತ ಧಾವಿಸಿದ್ದರು. ಅಲ್ಲಿಂದ ಮಹಾರಾಷ್ಟ್ರದ ಮೀರಜ್ ಮೂಲಕ ಮುಂಬೈ ಸೇರಿಕೊಂಡಿದ್ದ ಪರ್ವೇಜ್‌ನನ್ನು ಪೊಲೀಸರು ಕೊನೆಗೂ ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

## ಸೈದ್ಧಾಂತಿಕ ಸಂಘಟನೆ ಬಲವರ್ಧನೆಯೇ ಸಂಕಲ್ಪ: ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್

**ಶಿವಮೊಗ್ಗ, ಅ.24:** ಕ್ರಾಂತಿಕಾರಿ ಪರಂಪರೆಯ ಶಿವಮೊಗ್ಗದಲ್ಲಿ ಸೈದ್ಧಾಂತಿಕ ಸಂಘಟನೆ ಬಲ ವರ್ಧನೆಯೇ ನಮ್ಮ ಸಂಕಲ್ಪ" ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹೇಳಿದ್ದಾರೆ.

ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಶನಿವಾರ ಭೇಟಿ ನೀಡಿದ ಅವರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು."ಸ್ವಾತಂತ್ರ್ಯ ಹೋರಾಟದ ಉಜ್ವಲ ಪರಂಪರೆ ಹೊಂದಿರುವ ಶಿವಮೊಗ್ಗ ಜಿಲ್ಲೆ ಕ್ರಾಂತಿಕಾರಿ ಹೋರಾಟಗಳು ಹಾಗೂ ಸಮಾಜವಾದಿ ಚಿಂತನೆಗಳಿಗೆ ಹೆಸರಾದ ನೆಲ. ಆದರೆ, ಸಮಾಜವಾದಿ ವಿಚಾರಧಾರೆಗೆ ಭದ್ರ ನೆಲೆಯಾಗಿದ್ದ ಜಿಲ್ಲೆ ಇಂದು ಕೋಮುವಾದದತ್ತ ವಾಲುತ್ತಿರುವುದು ಗಂಭೀರವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ವಿಚಾರವಾಗಿದೆ" ಎಂದು ಅವರು ಅಭಿಪ್ರಾಯಪಟ್ಟರು.

ಶಿವಮೊಗ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಸಂಘಟನಾತ್ಮಕವಾಗಿ ಬಲಿಷ್ಠವಾಗಿದೆ. ಈ ಶಕ್ತಿಯನ್ನು ತಳಮಟ್ಟದಲ್ಲಿ ಸೈದ್ಧಾಂತಿಕವಾಗಿ ಮತ್ತಷ್ಟು ಗಟ್ಟಿಗೊಳಿಸುವ ಮೂಲಕ ಕೋಮುವಾದಿ ರಾಜಕಾರಣವನ್ನು ಎದುರಿಸಬೇಕಿದೆ. ಶಿಕಾರಿಪುರದಲ್ಲಿ ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಾತ್ರೆಯ ಸ್ಮರಣಾರ್ಥ ನಡೆದ ಜನತಾ ಜೋಡೋ ಕಾರ್ಯಕ್ರಮದ ಯಶಸ್ಸೇ ಜಿಲ್ಲೆಯ ಕಾಂಗ್ರೆಸ್ ಸಂಘಟನಾ ಶಕ್ತಿಗೆ ಸಾಕ್ಷಿಯಾಗಿದೆ" ಎಂದು ತಿಳಿಸಿದರು.

ಅಖಿಲ ಭಾರತ ಕಾಂಗ್ರೆಸ್



ಸಮಿತಿಯ ತೀರ್ಮಾನದಂತೆ 'ಮತ ಉಳಿಸಿ–ದೇಶ ಉಳಿಸಿ' ಅಭಿಯಾನವನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸಬೇಕಿದೆ. ಮತದಾನದ ಹಕ್ಕು, ಸಂವಿಧಾನದ ಆಶಯಗಳು ಹಾಗೂ ಪ್ರಜಾಪ್ರಭುತ್ವದ ರಕ್ಷಣೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಜವಾಬ್ದಾರಿ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರ ಮೇಲಿದೆ" ಎಂದರು.

## ಬ್ರಿಮ್ಸ್ ಆರ್ಥಿಕ ಚೇತರಿಕೆ, ವಾರ್ಷಿಕ 6.14 ಕೋಟಿ ಉಳಿತಾಯ: ಡಾ.ಶಾಂತಲಾ ಕೌಜಲಗಿ

**ಬೀದರ್, ಅ. 24:** ಆರ್ಥಿಕ ಹೊರೆಯಿಂದ ಸಂಕಷ್ಟ ಎದುರಿಸುತ್ತಿದ್ದ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಬ್ರಿಮ್ಸ್) ಇದೀಗ ಚೇತರಿಕೆಯತ್ತ ಸಾಗುತ್ತಿದ್ದು, ಕಳೆದ ಏಪ್ರಿಲ್‌ನಿಂದ ವಿವಿಧ ವೆಚ್ಚಗಳ ನಿರ್ವಹಣೆಯಲ್ಲಿ ಕೈಗೊಂಡ ಸುಧಾರಣಾ ಕ್ರಮಗಳಿಂದ ಸಂಸ್ಥೆಗೆ ವಾರ್ಷಿಕ ಸುಮಾರು 6.14 ಕೋಟಿ ಉಳಿತಾಯವಾಗಲಿದೆ ಎಂದು ಬ್ರಿಮ್ಸ್ ನಿರ್ದೇಶಕಿ ಡಾ.ಶಾಂತಲಾ ಕೌಜಲಗಿ ತಿಳಿಸಿದ್ದಾರೆ.

ನನ್ನ ಹಾಗೂ ಆರ್ಥಿಕ ಸಲಹೆಗಾರ ಪ್ರಕಾಶ್ ಸೂರ್ಯವಂಶಿ ಅವರ ನೇತೃತ್ವದಲ್ಲಿ ಆಸ್ಪತ್ರೆಯ ವಿವಿಧ ವಿಭಾಗಗಳ ವೆಚ್ಚವನ್ನು ಮರು ಪರಿಶೀಲಿಸಿ, ಆರ್ಥಿಕ ಹೊರೆ ತಗ್ಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಬುಧವಾರ ಮಾಹಿತಿ ಹಂಚಿಕೊಂಡಿದ್ದಾರೆ.

ಆಸ್ಪತ್ರೆಯಲ್ಲಿ ದಾಖಲಾಗುವ ರೋಗಿಗಳಿಗೆ ನೀಡುವ ಊಟೋಪಚಾರ, ವಿದ್ಯುತ್, ವೈದ್ಯಕೀಯ ಆಮ್ಲಜನಕ, ಎಚ್‌ಎನ್‌ಎಸ್, ಡೀಸೆಲ್, ಔಷಧ ಖರೀದಿ ಟೆಂಡರ್, ಸ್ಟೇಷನರಿ ಹಾಗೂ ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ಸೇರಿದಂತೆ ವಿವಿಧ ಸೇವೆಗಳ ವೆಚ್ಚದಲ್ಲಿ ಉಳಿತಾಯಕ್ಕೆ ಆದ್ಯತೆ ನೀಡಲಾಗಿದೆ. ಇದರಿಂದ ಆಸ್ಪತ್ರೆಯ ಆರ್ಥಿಕ ಸ್ಥಿತಿ ಸುಧಾರಿಸುವುದರ ಜೊತೆಗೆ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸಲು ಅನುಕೂಲವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಹಾನಗರ ಪಾಲಿಕೆಗೆ 4.75 ಕೋಟಿ ಬಾಕಿ ತೆರಿಗೆ ಹಾಗೂ 1 ಕೋಟಿ ನೀರಿನ ತೆರಿಗೆ ಪಾವತಿಸಲಾಗಿದೆ. ಇದರೊಂದಿಗೆ ವಿದ್ಯುತ್ ಬಾಕಿ ಬಿಲ್‌ಗಳನ್ನೂ ಪಾವತಿಸಿ, ಬಾಕಿ ಹೊರೆ ತಗ್ಗಿಸಲಾಗಿದೆ. ಆಸ್ಪತ್ರೆಯ



ದೈನಂದಿನ ಕಾರ್ಯನಿರ್ವಹಣೆ ಹಾಗೂ ರೋಗಿಗಳಿಗೆ ಅಗತ್ಯ ಸೇವೆಗಳನ್ನು ಒದಗಿಸಲು ನೆರವಾಗಲಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಬ್ರಿಮ್ಸ್‌ನಲ್ಲಿ ದಾಖಲಾಗುವ ರೋಗಿಗಳ ಉತ್ತಮ ಆರೈಕೆಯ ಸಲುವಾಗಿ ಬ್ಯಾಂಕ್‌ನ ಸಿಎಸ್‌ಆರ್ ನೆರವಿನಿಂದ ಪ್ರಥಮ ಬಾರಿಗೆ 250 ಹಾಸಿಗೆ ಹಾಗೂ 4,200 ಬೆಡ್‌ಶಿಟ್ ಖರೀದಿ ಪ್ರಕ್ರಿಯೆ ಹಂತದಲ್ಲಿದೆ. ಬೆಡ್ ಮತ್ತು ಬೆಡ್‌ಶಿಟ್‌ಗಳು ಶೀಘ್ರವೇ ಆಸ್ಪತ್ರೆಗಳಿಗೆ ಸರಬರಾಜು ಆಗಲಿವೆ ಎಂದು ಬ್ಯಾಂಕ್ ಮುಖ್ಯಸ್ಥರು ಭರವಸೆ ನೀಡಿದ್ದಾರೆ.

ಇವು ಪೂರೈಕೆ ಯಾದಲ್ಲಿ ಬ್ರಿಮ್ಸ್‌ನ ಆರ್ಥಿಕ ಹೊರೆ ಮತ್ತಷ್ಟು ಕಡಿಮೆ ಆಗುತ್ತದೆ. ರೋಗಿಗಳ ಆರೈಕೆಗೂ ಸಹಾಯವಾಗಲಿದೆ.

**ಟೆಂಡರ್‌ಗಳಲ್ಲಿ ಲೋಪವಾಗಿಲ್ಲ:** ಬ್ರಿಮ್ಸ್‌ನ ವಿವಿಧ ಟೆಂಡರ್ ಪ್ರಕ್ರಿಯೆಗಳ ಕುರಿತು ಇತ್ತೀಚೆಗೆ ಕೇಳಿ ಬಂದಿರುವ ಆರೋಪಗಳು ಸತ್ಯಕ್ಕೆ ದೂರುವಾದುದು. ಔಷಧ, ರಾಸಾಯನಿಕ, ರಿಯೇಜೆಂಟ್, ಕಂಪ್ಯೂಟರ್, ವಿದ್ಯುತ್ ಸಾಮಗ್ರಿಗಳು, ಪ್ಲಂಬಿಂಗ್ ಹಾಗೂ ಕ್ಯಾಟರಿಂಗ್ ಸೇವೆ ಸೇರಿದಂತೆ ವಿವಿಧ ಸಾಮಗ್ರಿ ಖರೀದಿ ಮತ್ತು ಸೇವೆಗಳ ಟೆಂಡರ್‌ನಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗಿದೆ. ಯಾವುದೇ ನಿಯಮ ಉಲ್ಲಂಘನೆಯಾಗಿಲ್ಲ' ಎಂದು ಡಾ. ಶಾಂತಲಾ ಕೌಜಲಗಿ ಸ್ಪಷ್ಟಪಡಿಸಿದ್ದಾರೆ.

ಖರೀದಿ ಹಾಗೂ ಸೇವಾ ಪ್ರಕ್ರಿಯೆಗಳನ್ನು ನಿಗದಿತ ಟೆಂಡರ್ ವ್ಯವಸ್ಥೆಯ ಮೂಲಕ ನಡೆಸಲಾಗುತ್ತಿದೆ. ಸಂಸ್ಥೆಯಲ್ಲಿ ಪಾರದರ್ಶಕತೆ ಹೆಚ್ಚುತ್ತಿರುವುದನ್ನು ಸಹಿಸದ ಕೆಲವರು ಉದ್ದೇಶಪೂರ್ವಕವಾಗಿ ಆರೋಪ ಮಾಡುತ್ತಿದ್ದಾರೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ (ಕೆಟಿಪಿಪಿ) ಸೇರಿದಂತೆ ಅನ್ವಯವಾಗುವ ನಿಯಮಗಳ ಕುರಿತು ಸರಿಯಾದ ಮಾಹಿತಿ ಪಡೆದು ಆರೋಪ ಮಾಡಬೇಕು. ಬಿಡ್‌ದಾರರಿಗೆ ಟೆಂಡರ್ ಷರತ್ತುಗಳ ಬಗ್ಗೆ ಆಕ್ಷೇಪಣೆಗಳಿದ್ದರೆ ನಿಯಮಾನುಸಾರ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ ಎಂದು ತಿಳಿಸಿದ್ದಾರೆ.









## ಹಂಪಿಗೆ ಯುನೆಸ್ಕೋ ತಜ್ಞರ ನಿಯೋಗ ಆಗಮನ: 3 ದಿನ ಸ್ಮಾರಕಗಳ ಅವಲೋಕನ

**ಹೊಸಪೇಟೆ (ವಿಜಯನಗರ), ಅ.24:** ಯುನೆಸ್ಕೊ ವಿಶ್ವ ಪಾರಂಪರಿಕ ಕೇಂದ್ರ ಹಾಗೂ ಸ್ಮಾರಕಗಳು ಮತ್ತು ತಾಣಗಳ ಮೇಲಿನ ಅಂತರರಾಷ್ಟ್ರೀಯ ಮಂಡಳಿಯ (ಐಸಿಒಎಂಒಎಸ್) ತಜ್ಞರ ನಿಯೋಗ ಹಂಪಿಗೆ ಶನಿವಾರ ಮಧ್ಯಾಹ್ನ 2 ಗಂಟೆ ವೇಳೆಗೆ ಆಗಮಿಸಿದ್ದು, ಇದೇ 27ರವರೆಗೆ ಹಲವು ಸಭೆಗಳನ್ನು ನಡೆಸಿ ಸ್ಮಾರಕಗಳ ವೀಕ್ಷಣೆ ಮಾಡಲಿದೆ.

ಅಂತರರಾಷ್ಟ್ರೀಯ ಪಾರಂಪರಿಕ ಪರಿಣಿತ ಕೀನ್ಯಾದ ಜಾರ್ಜ್ ಅಬುಂಗ್, ಜಪಾನ್‌ನ ಇಚಿಡಾ ಶಿಮೋಡಾ ಅವರು ಹಂಪಿಯ ಪರಂಪರೆಯನ್ನು ಸಂರಕ್ಷಿಸಲಾಗಿದೆಯೇ ಎಂಬುದರ ಕುರಿತು ಸೂಕ್ಷ್ಮ ಅವಲೋಕನ ನಡೆಸಲಿದ್ದು, ಇಲ್ಲಿಂದ ತೆರಳಿದ ಬಳಿಕ ಯುನೆಸ್ಕೊಗೆ ವರದಿ ಸಲ್ಲಿಸಲಿದ್ದಾರೆ. ಅದರ ಬಳಿಕ ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಹಂಪಿ ಭದ್ರವಾಗಿ ಇರುತ್ತದೆಯೋ, ಅಪಾಯಕಾರಿ ತಾಣಗಳ ಪಟ್ಟಿಯಲ್ಲಿ ಸೇರುತ್ತದೆಯೋ ಎಂಬುದು ಗೊತ್ತಾಗಲಿದೆ.

ಬೆಂಗಳೂರಿನಿಂದ ಬೆಳಿಗ್ಗೆ ಕಾರುಗಳಲ್ಲಿ ಹೊರಟಿದ್ದ ಈ ತಂಡದ ಜತೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಹೆಚ್ಚುವರಿ ಮಹಾನಿರ್ದೇಶಕ ಜಾನ್ವಿಜ್ ಶರ್ಮಾ ಸಹಿತ ಆರು ಅಧಿಕಾರಿಗಳು ಇದ್ದರು. ಆರು ಕಾರುಗಳಲ್ಲಿ ಅಧಿಕಾರಿಗಳು ಸಂಚರಿಸಿದರು.

ಇದೀಗ ಯುನೆಸ್ಕೊ ತಂಡ ರಾಜ್ಯ ಸರ್ಕಾರ, ಎಎಸ್‌ಐ, ಹಂಪಿ ವಿಶ್ವಪಾರಂಪರಿಕ ತಾಣ ನಿರ್ವಹಣಾ ಪ್ರಾಧಿಕಾರ (ಹವಾಮ), ಪ್ರವಾಸೋದ್ಯಮ, ರಾಜ್ಯ ಪುರಾತತ್ವ, ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಗಳ ಜತೆಗೆ ಸಭೆ ನಡೆಸತೊಡಗಿದೆ. ಯುನೆಸ್ಕೊ ತಜ್ಞರ ತಂಡ ಭಾನುವಾರದಿಂದ (ಅ.25) ಕ್ಷೇತ್ರ ಭೇಟಿ ಆರಂಭಿಸಲಿದೆ. ಬೆಳಿಗ್ಗೆ ಕಮಲಾಪುರದ ಎಎಸ್‌ಐ ಮ್ಯೂಸಿಯಂ, ಮಾಲ್ಯವಂತ ರಘು ನಾಥ ದೇವಸ್ಥಾನ, ವಿಜಯ ವಿಠಲ ದೇವಸ್ಥಾನಗಳಿಗೆ ಭೇಟಿ ನೀಡಿ, ಮಧ್ಯಾಹ್ನದ ನಂತರ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಅಂಜನಾದ್ರಿ, ಆನೆಗುಂದಿಯ ಗಗನ ಮಹಲ್ಗಳಿಗೆ ಭೇಟಿ ನೀಡಲಿದೆ. ಸಂಜೆ 5.30ಕ್ಕೆ ಹೊಸಪೇಟೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹಂಪಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು, ಪ್ರವಾಸೋದ್ಯಮಕ್ಕೆ ಸಂಬಂಧಿತ ಹಿತಾಸಕ್ತಿದಾರರ ಮತ್ತು ಪಾಲುದಾರರ ಸಭೆ ನಡೆಸಲಿದೆ.

26ರಂದು ಬೆಳಗ್ಗೆ ವಿರೂಪಾಕ್ಷ ದೇವಸ್ಥಾನ, ಕೃಷ್ಣ ದೇವಸ್ಥಾನ, ಕಮಲಮಹಲ್ ಪ್ರದೇಶಗಳಿಗೆ ಭೇಟಿ ನೀಡಲಿರುವ ತಂಡ, ಮಧ್ಯಾಹ್ನದ ನಂತರ ಇವಾಲ್ವ್ ಬ್ಯಾಕ್ ರೆಸಾರ್ಟ್‌ನಲ್ಲಿ ಹಂಪಿ ಮಾಸ್ಟರ್ ಪ್ಲಾನ್, ಸಂಯೋಜಿತ ನಿರ್ವಹಣಾ ಯೋಜನೆಗಳ ಕುರಿತು ಸಮಾಲೋಚನೆ ನಡೆಸಲಿದೆ. 27ರ ಬೆಳಿಗ್ಗೆ ಸಹ ಹಿಂದಿನ ದಿನದ ಸಭೆ ಮುಂದುವರಿಯಲಿದೆ. ಅಂದು ಮಧ್ಯಾಹ್ನ 2.30ಕ್ಕೆ ರಸ್ತೆ ಮೂಲಕ ಬೆಂಗಳೂರಿಗೆ ತೆರಳಲಿದೆ. 28ರಂದು ಬೆಂಗಳೂರಿನಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಎಎಸ್‌ಐ ಮತ್ತು ಯುನೆಸ್ಕೊ ತಂಡಗಳ ಜತೆಗೆ ಚರ್ಚಿಸಲಿದೆ.

ಯುನೆಸ್ಕೊ ತಂಡ ಕೊನೆಯ ಬಾರಿಗೆ ಹಂಪಿಗೆ ಬಂದುದು 2009ರಲ್ಲಿ. ಬಳಿಕ ಪ್ರತಿ ವರ್ಷ ಹಂಪಿಯ ಸ್ಥಿತಿಗತಿಗಳ ಕುರಿತು ವರದಿ ತರಿಸಿಕೊಂಡು ಅವಲೋಕನ ನಡೆಸುತ್ತಲೇ ಇದೆ. ಪಾರಂಪರಿಕ ತಾಣಗಳಿಗೆ ಗಂಭೀರ ಅಪಾಯ ಎದುರಾಗುವ ಲಕ್ಷಣ ಇದೆ ಎಂದಾಗ ತಜ್ಞರ ತಂಡ ಖುದ್ದಾಗಿ ಕ್ಷೇತ್ರ ಭೇಟಿ ನೀಡಿ ಪರಿಶೀಲಿಸುತ್ತದೆ ಎಂದು ಹೇಳಲಾಗುತ್ತಿದೆ. ಈ ಬಾರಿ ತಜ್ಞರ ತಂಡದ ಪ್ರಮುಖ ಗುರಿ ಅಂಜನಾದ್ರಿ ಎಂದು ಜಿಲ್ಲಾಡಳಿತ ಹಾಗೂ ಎಎಸ್‌ಐ ಮೂಲಗಳು ತಿಳಿಸಿವೆ.

# ಶ್ರಮದಾನ-ಸಸಿ ನೆಡುವ ಕಾರ್ಯಕ್ರಮ ಸಮಾಜದ ಪ್ರಗತಿಗೆ ಸಂಘಟನೆಯೇ ಬುನಾದಿ: ಎನ್.ರವಿಕುಮಾರ್

**ಕಲಬುರಗಿ, ಅ. 24:** ಸಮಾಜದ ಪ್ರಗತಿಗೆ ಸಂಘಟನೆಯೇ ಬುನಾದಿಯಾಗಿದ್ದು, ಸಮಾಜದ ಅಭಿವೃದ್ಧಿ ಮತ್ತು ಒಳಿತಿಗಾಗಿ ಪ್ರತಿಯೊಬ್ಬರೂ ಒಗ್ಗಟ್ಟು ಹಾಗೂ ನಿಷ್ಠೆಯಿಂದ ಶ್ರಮಿಸಬೇಕು. ಸಮಾಜ ನಮಗೆ ಏನು ಮಾಡಿದೆ ಎಂಬುದಕ್ಕಿಂತ ಸಮಾಜಕ್ಕಾಗಿ ನಾವೇನು ಮಾಡಿದ್ದೇವೆ ಎಂಬುದನ್ನು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಂಡು ಸಮಾಜದ ಪ್ರಗತಿಗೆ ಶ್ರಮಿಸಬೇಕು. ಇದರೊಂದಿಗೇ ವ್ಯಕ್ತಿಯ ಪ್ರಗತಿಯೂ ಅಡಗಿದೆ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದರು.



ಜಿಲ್ಲೆಯ ಜೇವರ್ಗಿ ತಾಲೂಕಿನ ಚಿಗರಳ್ಳಿ ಗ್ರಾಮದ ಶ್ರೀ ಮಾತಾ ಮಾಣಿಕೇಶ್ವರಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ದೇವೇಂದ್ರ ಹೆಚ್. ಕ್ಯಾಸಪ್ಪಳ್ಳಿ ನೇತೃತ್ವದಲ್ಲಿ ಮಹಾಯೋಗಿನಿ ಶ್ರೀ ಮಾತಾ ಮಾಣಿ ಕೇಶ್ವರಿ ಅಮ್ಮನವರ ತಪೋವನದಲ್ಲಿ ಸೇವಾ ಪಾಕ್ಷಿಕದ ಅಂಗವಾಗಿ ಆಯೋ ಜಿಸಿದ್ದ ಶ್ರಮದಾನ ಹಾಗೂ ಸಸಿ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರವಿ ಕುಮಾರರವರು ಮಾತನಾಡಿದರು.

ಯುವಕರು ಸಮಾಜಮುಖಿ ಚಿಂತನೆ ಬೆಳೆಸಿಕೊಂಡು ಸಮಾಜದ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾದ ಕಾರ್ಯ ಗಳಲ್ಲಿ ತೊಡಗಿಸಿಕೊಳ್ಳಬೇಕು. ಸಂಘಟನಾತ್ಮಕ ಪ್ರಯತ್ನಗಳ ಮೂಲಕ ಸಮಾ ಜದ ಏಳಿಗೆ ಸಾಧ್ಯವಾಗುವುದರಿಂದ ಎಲ್ಲರೂ ಒಗ್ಗಟ್ಟಿನಿಂದ ಸಮಾಜಸೇವೆಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಸಮುದಾಯ ಭವನಕ್ಕೆ 10 ಲಕ್ಷ ಅನುದಾನ ಚಿಗರಳ್ಳಿ ಗ್ರಾಮದ ಶ್ರೀ ಮಾತಾ ಮಾಣಿಕೇಶ್ವರಿ ಅಮ್ಮನವರ ತಪೋವನದಲ್ಲಿ ಸಮುದಾಯ ಭವನ ನಿರ್ಮಾಣಕ್ಕಾಗಿ ತಮ್ಮ ಶಾಸಕರ ಅನುದಾನದಿಂದ 10 ಲಕ್ಷ ನೀಡುವುದಾಗಿ ಎನ್. ರವಿಕುಮಾರ್ ಘೋಷಿಸಿದರು. ಈ ಘೋಷಣೆಯಿಂದ ಗ್ರಾಮಸ್ಥರಲ್ಲಿ ಸಂತಸ ಮೂಡಿದ್ದು, ಸಮುದಾಯ ಭವನ ನಿರ್ಮಾಣದ ನಿರೀಕ್ಷೆ ಹೆಚ್ಚಾಗಿದೆ. ತಪೋವನದಲ್ಲಿ 100 ಸಸಿಗಳ ನೆಡುವಿಕೆ ನಂತರ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ದೇವೇಂದ್ರ ಹೆಚ್. ಕ್ಯಾಸಪ್ಪಳ್ಳಿ, ಚಿಗರಳ್ಳಿ ಗ್ರಾಮದ ಸರ್ವೆ ನಂ.20ರಲ್ಲಿ ಇರುವ ದೇವಸ್ಥಾನದ ಮೂರು ಎಕರೆ ಜಾಗದಲ್ಲಿ ಈಗಾಗಲೇ ಸುಮಾರು 100 ಸಸಿಗಳನ್ನು ನೆಡಲಾಗಿದೆ ಎಂದು ಹೇಳಿದರು.

ಈ ತಪೋವನದಲ್ಲಿ ಅನೇಕ ಶರಣಯರು, ಸಂತರು ಹಾಗೂ ಸತ್ಪುರುಷರು ತಪಸ್ಸು ಮತ್ತು ಅನುಷ್ಠಾನಗಳನ್ನು ನಡೆಸಿದ್ದು, ಲೋಕ ಕಲ್ಯಾಣಕ್ಕಾಗಿ ಸೇವೆ ಸಲ್ಲಿಸಿರುವ ಪವಿತ್ರ ಕ್ಷೇತ್ರವಾಗಿದೆ. ಟ್ರಸ್ಟ್ ನೋಂದಣಿಯಾದ ನಂತರ ಪ್ರತಿ ಅಮಾವಾಸ್ಯೆ ಹಾಗೂ ಹುಣ್ಣಿಮೆಯಂದು ಹಣ್ಣು ವಿತರಣೆ, ಅನ್ನಸಂತರ್ಪಣೆ ಸೇರಿದಂತೆ ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ ಎಂದು ಟ್ರಸ್ಟಿಗಳು ತಿಳಿಸಿದರು.

ಕಳೆದ ಸುಮಾರು 30 ವರ್ಷಗಳಿಂದ ದೇವಸ್ಥಾನದಲ್ಲಿ ಜಯಂತೋತ್ಸವ, ಅಮಾವಾಸ್ಯೆ, ಹುಣ್ಣಿಮೆ ಹಾಗೂ ವಿವಿಧ ಹಬ್ಬ–ಹರಿದಿನಗಳ ಸಂದರ್ಭದಲ್ಲಿ ಅನ್ನಸಂತರ್ಪಣೆ ಸೇರಿದಂತೆ ಧಾರ್ಮಿ ಕ ಮತ್ತು ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ತಪೋವನದ ಪರಿಸರವನ್ನು ಸ್ವಚ್ಛವಾಗಿಡುವುದು, ಹಸಿರು ಪರಿಸರ ಬೆಳೆಸು ವುದು ಹಾಗೂ ಸಮಾಜಸೇವಾ ಚಟುವ ಟಿಕೆಗಳನ್ನು ವಿಸ್ತರಿಸುವ ಉದ್ದೇಶದಿಂದ ಶ್ರಮದಾನ ಮತ್ತು ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಧಾರ್ಮಿಕ ಸೇವೆಯ ಜೊತೆಗೆ ಪರಿಸರ ಸಂರಕ್ಷಣೆಗೆ ಟ್ರಸ್ಟ್ ವಿಶೇಷ ಆದ್ಯತೆ ನೀಡುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡರಾದ ಶಿವರಾಜ ಪಾಟೀಲ ರದ್ದೇವಾಡಗಿ, ಶರಣಪ್ಪ ತಳವಾರ, ನಿಂಗಣ್ಣ ದೊಡ್ಡಮನಿ, ಧರ್ಮಣ್ಣ ಇಟಗಾ, ಬಿಜೆಪಿ ಮಂಡಲ ಅಧ್ಯಕ್ಷ ದೇವಿಂದ್ರ ಮುತ್ತಕೋಡ, ಕೋಲಿ ಸಮಾಜದ ಅಧ್ಯಕ್ಷ ಮೈಲಾರಿ ಗುಡೂರ, ಭೀಮರಾಯ ಜನಿವಾರ, ಸಂತೋಷ ಜೈನಾಪುರ, ಗುರು ಜೈನಾಪುರ, ಗಿರೀಶ್ ತುಂಬಗಿ, ಸಿದ್ದು ಸಾಹು ಗೋಗಿ, ನಾಗೇಂದ್ರ ಇಟಗಾ, ರಾಚಣ್ಣ ತಳವಾರ, ಚಂದ್ರಕಾಂತ ಗಂವ್ಹಾರ, ಮಾಣಿಕ ಯಾಳವಾರ, ಕಾಂತಪ್ಪ ಕಲ್ಲೂರ್, ವೀರಣ್ಣ ಶಿವಪುರ, ಎಸ್. ಕೆ. ಹೇರೂರ, ಶಂಕರಲಿಂಗ ಕರಕಿಹಳ್ಳಿ ಸೇರಿದಂತೆ ಮಾತಾ ಮಾಣಿಕೇಶ್ವರಿ ಚಾರಿಟೇಬಲ್ ಟ್ರಸ್ಟ್‌ನ ಪದಾಧಿಕಾರಿಗಳು, ಸಮಾಜದ ಪ್ರಮುಖರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಟ್ರಸ್ಟ್ ಅಧ್ಯಕ್ಷ ದೇವೇಂದ್ರ ಹೆಚ್. ಕ್ಯಾಸಪ್ಪಳ್ಳಿ ಅವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು.



ವಿಜಯನಗರ ಜಿಲ್ಲೆಯ ಹಂಪಿಯಲ್ಲಿ ಶನಿವಾರ ಮಳೆಯ ನಂತರ ಕಂಡುಬಂದ ವಿಜಯ ವಿಠಲ ದೇವಾಲಯ.

## ಜಿಲ್ಲೆಯಾದ್ಯಂತ ವೈಭವದಿಂದ ರಾಜ್ಯೋತ್ಸವ ಆಚರಣೆಗೆ ನಿರ್ಧಾರ: ಡಿಸಿ ಇಕ್ರಮ್ ಶರೀಫ್

**ಕಲಬುರಗಿ, ಅ. 24:** ಬರುವ ನವೆಂಬರ್ 1 ರಂದು ಜಿಲ್ಲೆಯಾದ್ಯಂತ ಕರ್ನಾಟಕ ರಾಜ್ಯೋತ್ಸವವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಲು ನಿರ್ಧರಿಸಿದೆ ಎಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ತಿಳಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ಬಾರಿಯೂ ನವೆಂಬರ್ 1 ರಂದ ಬೆಳಿಗ್ಗೆ 9 ಗಂಟೆಗೆ ಗಂಜ್ ಪ್ರದೇಶದ ನಗರೇಶ್ವರ ಶಾಲಾ ಮೈದಾನದಲ್ಲಿ ನಾಡದೇವತೆ ಶ್ರೀ ಭುವನೇಶ್ವರಿ ದೇವಿಯ ಪೂಜೆಯೊಂದಿಗೆ ಕಾರ್ಯಕ್ರಮ ಆರಂಭವಾಗಲಿದೆ.

ಶಿಷ್ಟಾಚಾರದಂತೆ ಜಿಲ್ಲಾ ಉಸ್ತುವಾರಿ ಸಚಿವರು ಧ್ವಜಾರೋಹಣ ನೆರವೇರಿಸಿ ರಾಜ್ಯೋತ್ಸವ ಸಂದೇಶ ನೀಡಲಿದ್ದಾರೆ. ಕಾರ್ಯಕ್ರಮ ವ್ಯವಸ್ಥಿತವಾಗಿ ಸಂಘಟಿಸಬೇಕು. ಕಾರ್ಯಕ್ರಮ ಯಶಸ್ಸಿಗೆ ವಿವಿಧ ಸಮಿತಿಗಳನ್ನು ರಚಿಸಿ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗುತ್ತದೆ. ಅಧಿಕಾರಿಗಳು ತಮಗೆ ನೀಡಲಾದ ಜವಾಬ್ದಾರಿಯನ್ನು ಯಾವುದೇ ಲೋಪವಿಲ್ಲದೆ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಹೇಳಿದರು.

ನಗರೇಶ್ವರ ಶಾಲಾ ಆವರಣ ಸಂಪೂರ್ಣ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು. ಶಾಲಾ–ಕಾಲೇಜು ಮಕ್ಕಳು ಆಗಮಿಸುವುದರಿಂದ ಶ್ಯಾಮಿಯಾನ ಹಾಕಬೇಕು. ಕುಡಿಯುವ ನೀರಿನ ವ್ಯವಸ್ಥೆ, ಆಸನದ ವ್ಯವಸ್ಥೆ ಮಾಡಬೇಕು. ನಗರೇಶ್ವರ ಶಾಲೆಯಿಂದ ರಂಗಮಂದಿರ ವರೆಗೆ ಮೆರವಣಿಗೆ ಸಾಗಲಿರುವುದರಿಂದ ಸಾರ್ವಜನಿಕರಿಗೆ ಯಾವುದೇ ಸಂಚಾರ ದಟ್ಟಣೆಯಾಗದಂತೆ ಸೂಕ್ತ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಡಿ.ಸಿ. ನಿರ್ದೇಶಿಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಶಾಲಾ ಮಕ್ಕಳು ಹಾಗೂ ಸಾರ್ವಜನಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ತುರ್ತು ಪರಿಸ್ಥಿತಿ ಎದುರಿಸಲು ಆರೋಗ್ಯ ಇಲಾಖೆಯ ಸಿಬ್ಬಂದಿ, ಆಂಬುಲೆನ್ಸ್ ಹಾಗೂ ಅಗ್ನಿಶಾಮಕ ವಾಹನಗಳನ್ನು ಸಿದ್ಧ ಸ್ಥಿತಿಯಲ್ಲಿಡಲು ಸೂಚಿಸಲಾಯಿತು.

## ಶೇ.86.97ರಷ್ಟು ವಿಧಾನ ಪರಿಷತ್ ಈಶಾನ್ಯ ಕ್ಷೇತ್ರದಲ್ಲಿ ಮತದಾನ- ಅ.27ರಂದು ಮತ ಎಣಿಕೆ

**ಕಲಬುರಗಿ, ಅ. 24:** ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆಯಲ್ಲಿ ಶಾಂತಿಯುತ ವಾಗಿ ಒಟ್ಟಾರೆ ಶೇ. 86.97 ರಷ್ಟು ದಾಖಲೆಯ ಮತದಾನ ದಾಖಲಾಗಿದೆ. ಕಲಬುರಗಿ, ಬೀದರ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ ಹಗೂ ಬಳ್ಳಾರಿ ಸೇರಿದಂತೆ ಆರು ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿರುವ ಕ್ಷೇತ್ರದಲ್ಲಿ ಒಟ್ಟು 34,784 ಶಿಕ್ಷಕ ಮತದಾರರಿದ್ದಾರೆ.




ಕ್ಷೇತ್ರದ ವ್ಯಾಪ್ತಿಗೆ ಬರುವ ಜಿಲ್ಲಾವಾರು ಮತದಾನದ ವಿವರಗಳ ಪ್ರಕಾರ ಕೊಪ್ಪಳ ಜಿಲ್ಲೆ: ಶೇ. 92.59 (ಅತಿ ಹೆಚ್ಚು), ವಿಜಯನಗರ ಜಿಲ್ಲೆ: ಶೇ. 91.07, ಯಾದಗಿರಿ ಜಿಲ್ಲೆ: ಶೇ. 90.79, ಬಳ್ಳಾರಿ ಜಿಲ್ಲೆ: ಶೇ. 86.50, ಬೀದರ್ ಜಿಲ್ಲೆ: ಶೇ. 86.47, ರಾಯಚೂರು ಜಿಲ್ಲೆ: ಶೇ. 86.04, ಕಲಬುರಗಿ ಜಿಲ್ಲೆ: ಶೇ. 84.38 ಮತದಾನವಾಗಿದೆ. ಈ ಚುನಾವಣೆಯು ಒಟ್ಟು 7 ಜಿಲ್ಲೆಗಳ 144 ಮತಗಟ್ಟೆಗಳಲ್ಲಿ ಯಾವುದೇ ಅಹಿತಕರ ಘಟನೆಗಳಿಲ್ಲದೆ ಶಾಂತಿಯುತವಾಗಿ ಮುಕ್ತಾಯಗೊಂಡಿದೆ. ಅಕ್ಟೋಬರ್ 27 ರಂದು ಕಲಬುರಗಿ ವಿವಿ ಆವರಣದಲ್ಲಿ ಮತಗಳ ಎಣಿಕೆ ನಡೆಯಲಿದೆ ಎಂದು ಪ್ರಾದೇಶಿಕ ಆಯುಕ್ತರು ತಿಳಿಸಿದರು.

ಈಶಾನ್ಯ ಶಿಕ್ಷರ ಮತಕ್ಷೇತ್ರದಲ್ಲಿ ಕಲಬುರಗಿ–4,360 ಮತಗಳು, ಬೀದರ್–2,756 ಮತಗಳು, ರಾಯಚೂರು–2,462 ಮತಗಳು, ವಿಜಯನಗರ– 1,620 ಮತಗಳು, ಬಳ್ಳಾರಿ–1,453 ಮತಗಳು, ಕೊಪ್ಪಳ–1,354 ಮತಗಳು, ಯಾದಗಿರಿ–1,007 ಮತಗಳು ಚಲಾವಣೆಯಾಗಿವೆ.

## ಬೇಡಿಕೆ ಈಡೇರದಿದ್ದರೆ ಅ.27ರಂದು ರಾಜ್ಯಾದ್ಯಂತ ಬಂದ್: ಸರ್ಕಾರಕ್ಕೆ ರೈತ ಸಂಘಟನೆಗಳ ಎಚ್ಚರಿಕೆ

**ಬೆಳಗಾವಿ, ಅ.24:** ಕಬ್ಬು ಬೆಂಬಲ ಬೆಲೆಗೆ ಆಗ್ರಹಿಸಿ ಹೋರಾಟ ನಡೆಸುತ್ತಿರುವ ಉತ್ತರ ಕರ್ನಾಟಕದ ರೈತರು ಈಗ ರಾಜ್ಯ ಸರ್ಕಾರಕ್ಕೆ ಅಂತಿಮ ಗಡುವು ನೀಡಿದ್ದಾರೆ.




ಅ.26ರಂದು ಬೆಳಗಾವಿ ಯಲ್ಲಿ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆಯಲಿರುವ ಉನ್ನತ ಮಟ್ಟದ ಸಭೆಗೂ ಮುನ್ನ ರೈತ ಸಂಘಟನೆಗಳು ಮೂರು ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದು, ಇವುಗಳು ಈಡೇರದಿದ್ದರೆ ಅಕ್ಟೋಬರ್ 27ರಂದು ರಾಜ್ಯಾದ್ಯಂತ ಬಂದ್ ಆಚರಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಕರ್ನಾಟಕ ರೈತ ಸಂಘ ಹಸಿರುಸೇನೆಯ ಪ್ರಧಾನ ಕಾರ್ಯದರ್ಶಿ ಪ್ರೇಮ್ ಚೌಗಲಾ ಅವರು, ಮುಖ್ಯಮಂತ್ರಿ ಅವರೊಂದಿಗಿನ ಸಭೆಯಲ್ಲಿ ರೈತರ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ನಿರೀಕ್ಷೆಯಿದೆ. ಸಭೆಯಲ್ಲಿ ಮೂರು ಪ್ರಮುಖ ಬೇಡಿಕೆಗಳನ್ನು ಮಂಡಿಸಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರವು ಟನ್ ಕಬ್ಬಿಗೆ ರೂ.1,000 ಬೆಂಬಲ ಬೆಲೆ ನೀಡಬೇಕು, ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ರೂ.4,500 ಪಾವತಿಸಬೇಕು ಹಾಗೂ ಕಬ್ಬಿನ ತೂಕ ಮಾಡುವಾಗ ಕಸ ಅಥವಾ ಕೆಸರು ಇದೆ ಎಂಬ ಕಾರಣ ನೀಡಿ ಹಣ ಕಡಿತಗೊಳಿಸುವ ಅಕ್ರಮ ಪದ್ಧತಿಯನ್ನು ತಡೆಯಬೇಕು ಎಂಬುದು ರೈತರ ಪ್ರಮುಖ ಬೇಡಿಕೆಗಳಾಗಿವೆ ಎಂದು ತಿಳಿಸಿದರು. ಇದೇ ವೇಳೆ ಈ ಬೇಡಿಕೆಗಳಿಗೆ ರಾಜ್ಯ ಸರ್ಕಾರ ಸ್ಪಂದಿಸದಿದ್ದರೆ ಅಕ್ಟೋಬರ್ 27ರಂದು ಕರ್ನಾಟಕ ಬಂದ್ ನಡೆಸಲಾಗುವುದು ಎಂದೂ ಎಚ್ಚರಿಕೆ ನೀಡಿದ್ದಾರೆ.

**ಪ್ರಮುಖ ಬೇಡಿಕೆಗಳು**

1. ಸಕ್ಕರೆಯ ಕನಿಷ್ಠ ಬೆಂಬಲ ಬೆಲೆಯನ್ನು ಪ್ರತಿ ಕೆ.ಜಿ.ಗೆ ರೂ.60ಕ್ಕೆ ಹೆಚ್ಚಿಸಬೇಕು
2. ಕರ್ನಾಟಕಕ್ಕೆ ತೈಲ ಮಾರುಕಟ್ಟೆ ಕಂಪನಿಗಳಿಂದ ಶೇ.100ರಷ್ಟು ಎಥನಾಲ್ ಹಂಚಿಕೆ ಮಾಡಬೇಕು
3. ದೇಶೀಯ ಬಳಕೆಯ ಸಕ್ಕರೆ ಮತ್ತು ವಾಣಿಜ್ಯ ಬಳಕೆಯ ಸಕ್ಕರೆಗೆ ಪ್ರತ್ಯೇಕ ಬೆಲೆ ನಿಗದಿಪಡಿಸಬೇಕು ಹಾಗೂ ವಾಣಿಜ್ಯ ಸಕ್ಕರೆಗೆ ಹೆಚ್ಚಿನ ಬೆಲೆ ನೀಡಬೇಕು

## ಅಯೋಡಿನ್‌ಯುಕ್ತ ಉಪ್ಪಿನ ಬಳಕೆ ಆರೋಗ್ಯಕರ ಜೀವನಕ್ಕೆ ಸಹಕಾರಿ: ಡಾ. ರಾಮಕೃಷ್ಣ

**ಬಳ್ಳಾರಿ,ಅ.24.**ಅಯೋಡಿನ್ ಕೊರತೆಯಿಂದ ಉಂಟಾಗುವ ಗಂಭೀರ ಆರೋಗ್ಯ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಅಯೋಡಿನ್‌ಯುಕ್ತ ಉಪ್ಪಿನ ಬಳಕೆಯನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು ಎಂದು ಶ್ರೀಮತಿ ರುಕ್ಮಿಣಮ್ಮ ಚಂಗಾರೆಡ್ಡಿ ಸ್ಮಾರಕ ಸರಕಾರಿ ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ ಡಾ. ರಾಮಕೃಷ್ಣ ಅವರು ಹೇಳಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸರ್ವೇಕ್ಷಣಾ ಘಟಕ ಬಳ್ಳಾರಿ ಹಾಗೂ ಶ್ರೀಮತಿ ರುಕ್ಮಿಣಮ್ಮ ಚಂಗಾರೆಡ್ಡಿ ಸ್ಮಾರಕ ಸರಕಾರಿ ವಾಣಿಜ್ಯ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ ವಿಶ್ವ ಅಯೋಡಿನ್ ಕೊರತೆಯ ನ್ಯೂನತೆ ನಿಯಂತ್ರಣ ಜಾಗೃತಿ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಂಕ್ರಾಮಿಕ ರೋಗಶಾಸ್ತ್ರಜ್ಞರಾದ ಡಾ. ವಿಶಾಲಾಕ್ಷಿ ಅವರು ಉಪನ್ಯಾಸದಲ್ಲಿ ಮಾತನಾಡಿ, ದೇಹದ ಥೈರಾಯ್ಡ್ ಗ್ರಂಥಿಯು ಸರಿಯಾಗಿ ಕಾರ್ಯ ನಿರ್ವಹಿಸಲು ಹಾಗೂ ಬೆಳವಣಿಗೆಗೆ ಅಗತ್ಯವಾದ ಹಾರ್ಮೋನ್ ಉತ್ಪಾದಿಸಲು ಅಯೋ ಡಿನ್ ಅತ್ಯಗತ್ಯ. ಇದರ ಕೊರತೆಯಿಂದ ಗಳಗಂಡ (ಗಾಯಿಟರ್), ಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಕುಂಠಿತವಾಗುವುದು ಹಾಗೂ ಗರ್ಭಿಣಿಯರಲ್ಲಿ ಗರ್ಭಪಾತದಂತಹ ಅಪಾಯಗಳು ಎದುರಾಗಬಹುದು. ಆದ್ದರಿಂದ ಪ್ರತಿದಿನ ಅಯೋಡಿನ್‌ಯುಕ್ತ ಉಪ್ಪನ್ನೇ ಬಳಸಬೇಕು ಮತ್ತು ಅದನ್ನು ತೇವಾಂಶವಿಲ್ಲದ, ಮುಚ್ಚಿದ ಪಾತ್ರೆಯಲ್ಲಿ ಸಂಗ್ರಹಿಸಿಡಬೇಕು ಎಂದು ಅವರು ವಿವರಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವಿ.ಪಿ. ಅವರು ಮಾತನಾಡಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಅಯೋಡಿನ್ ಕೊರತೆಯ ನ್ಯೂನತೆಗಳ ನಿಯಂತ್ರಣ ಕಾರ್ಯಕ್ರಮದಡಿ ಸಾರ್ವಜನಿಕರಿಗೆ ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಕಿಷ್ಕಿಂದಾ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವ ಯಶಸ್ವಿ: 155 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

## ಬಿಸಿಎ, ಎಂಬಿಎ, ಎಂಸಿಎ, ಎಂಟೆಕ್ ವಿಭಾಗಗಳ ಎಂಟು ವಿದ್ಯಾರ್ಥಿಗಳಿಗೆ ಚಿನ್ನ, ಬೆಳ್ಳಿ ಪದಕಗಳ ಗೌರವ

**ಬಳ್ಳಾರಿ ಅ 24.** ಬಳ್ಳಾರಿಯ ಸಿರುಗುಪ್ಪ ತಾಲೂಕಿನ ಸಿಂಧಿಗೇರಿ ಸಮೀಪದ ಕಿಷ್ಕಿಂದಾ ವಿಶ್ವವಿದ್ಯಾಲಯದ ಎರಡನೇ ವಾರ್ಷಿಕ ಘಟಿಕೋತ್ಸವ ಶನಿವಾರ ಯಶಸ್ವಿಯಾಗಿ ನಡೆಯಿತು. ವಿಶ್ವವಿದ್ಯಾಲಯದ ಮೌಂಟ್ ವ್ಯೂ ಕ್ಯಾಂಪಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಒಟ್ಟು 155 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಶೈಕ್ಷಣಿಕ ಸಾಧನೆಯಲ್ಲಿ ಉನ್ನತ ಸ್ಥಾನ ಗಳಿಸಿದ ಎಂಟು ವಿದ್ಯಾರ್ಥಿಗಳಿಗೆ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ನೀಡಿ ಗೌರವಿಸಲಾಯಿತು.



ಬಿಸಿಎ ವಿಭಾಗದಲ್ಲಿ ಕುಮಾರಿ ಶೃತಿ ಅವರು 9.72 ಸಿಜಿಪಿಎ ಅಂಕಗಳೊಂದಿಗೆ ಪ್ರಥಮ ರ?ಯಾಂಕ್ ಪಡೆದು ಚಿನ್ನದ ಪದಕಕ್ಕೆ ಭಾಜನರಾದರೆ, ಕುಮಾರಿ ಎಂ. ಲತಾ ಅವರು 9.65 ಸಿಜಿಪಿಎ ಅಂಕಗಳೊಂದಿಗೆ ದ್ವಿತೀಯ ರ?ಯಾಂಕ್ ಪಡೆದು ಬೆಳ್ಳಿ ಪದಕ ಪಡೆದರು. ಎಂಬಿಎ ವಿಭಾಗದಲ್ಲಿ ಕುಮಾರಿ ಶ್ವೇತಾ ಜಿ. ಅವರು 9.77 ಸಿಜಿಪಿಎ ಅಂಕಗಳೊಂದಿಗೆ ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕ ಗಳಿಸಿದರೆ, ಕುಮಾರಿ ಮರಾಠಿ ಸಾಹಿತ್ಯ ಅವರು 9.69 ಸಿಜಿಪಿಎ ಅಂಕಗಳೊಂದಿಗೆ ದ್ವಿತೀಯ ರ?ಯಾಂಕ್ ಪಡೆದು ಬೆಳ್ಳಿ ಪದಕಕ್ಕೆ ಭಾಜನರಾದರು.

ಎಂಸಿಎ ವಿಭಾಗದಲ್ಲಿ ಕುಮಾರಿ ಆರ್.ಎಂ. ಸುಹಾನಾ ಸಫ್ರೀನ್ ಅವರು 9.9 ಸಿಜಿಪಿಎ ಅಂಕಗಳೊಂದಿಗೆ ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕ ಪಡೆದರು. ಕುಮಾರಿ ಪೆದ್ದದೇವರ ನಜ್ನೀನ್ ಅವರು 9.73 ಸಿಜಿಪಿಎ ಅಂಕಗಳೊಂದಿಗೆ ದ್ವಿತೀಯ ರ್‍ಯಾಂಕ್ ಗಳಿಸಿ ಬೆಳ್ಳಿ ಪದಕ ಸ್ವೀಕರಿಸಿದರು.

ಎಂಟೆಕ್ ವಿಭಾಗದಲ್ಲಿ ಕುಮಾರಿ ಪಿ. ಸಹನಾ ಪ್ರಸಾದ್ ಅವರು 9.31 ಸಿಜಿಪಿಎ ಅಂಕಗಳೊಂದಿಗೆ ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕ ಪಡೆದರೆ, ಎಂ. ರಾಘವೇಂದ್ರ ಅವರು 9.29 ಸಿಜಿಪಿಎ ಅಂಕಗಳೊಂದಿಗೆ ದ್ವಿತೀಯ ರ್‍ಯಾಂಕ್ ಪಡೆದು ಬೆಳ್ಳಿ ಪದಕಕ್ಕೆ ಭಾಜನರಾದರು. ನಾಲ್ಕು ವಿಭಾಗಗಳಲ್ಲಿ ತಲಾ ಇಬ್ಬರು ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ರ್‍ಯಾಂಕ್ ಗಳಿಸಿ ಪದಕಗಳ ಗೌರವ ಪಡೆದರು.

ವಿಭಾಗವಾರು ಪದವಿ ಪಡೆದವರಲ್ಲಿ ಬಿಸಿಎಯ 44, ಎಂಬಿಎಯ 51, ಎಂಸಿಎಯ 42 ಹಾಗೂ ಎಂಟೆಕ್‌ನ 18 ವಿದ್ಯಾರ್ಥಿಗಳು ಸೇರಿದ್ದಾರೆ. ಇವರಲ್ಲಿ 86 ಪುರುಷರು ಮತ್ತು 69 ಮಹಿಳೆಯರು ಸೇರಿದಂತೆ ಒಟ್ಟು 155 ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು.

ಘಟಿಕೋತ್ಸವವು ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗೆ ಗೌರವ ಸಲ್ಲಿಸುವುದರ ಜತೆಗೆ, ಉನ್ನತ ಶಿಕ್ಷಣ, ಸಂಶೋಧನೆ ಹಾಗೂ ವೃತ್ತಿ ಪರ ಕ್ಷೇತ್ರಗಳಲ್ಲಿ ಮತ್ತಷ್ಟು ಸಾಧನೆ ಮಾಡಲು ಪ್ರೇರಣೆ ನೀಡಿತು. ವಿಶ್ವವಿದ್ಯಾಲಯದ ಆಡಳಿತ ಮಂಡಳಿ, ಅಧಿಕಾರಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಉಪಸ್ಥಿತಿಯಲ್ಲಿ ಎರಡನೇ ವಾರ್ಷಿಕ ಘಟಿಕೋತ್ಸವ ಯಶಸ್ವಿಯಾಗಿ ಸಂಪನ್ನಗೊಂಡಿತು.

## ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಸೌಲಭ್ಯಗಳನ್ನು ಸದ್ಬಳಕೆಗೆ ಸಲಹೆ



**ಬಳ್ಳಾರಿ, ಅ.24:** ಅರ್ಹ ಸಾರ್ವಜನಿಕರು ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಮುಖ್ಯಮಂತ್ರಿ ಆರೋಗ್ಯ ಯೋಜನೆಯ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು, ಆರ್ಥಿಕ ಹೊರೆಯಿಲ್ಲದೆ ಅಗತ್ಯ ಚಿಕಿತ್ಸೆಯನ್ನು ಪಡೆಯಬೇಕು ಎಂದು ಆರೋಗ್ಯ ಇಲಾಖೆ ಸಿಬ್ಬಂದಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಮೋಕ ಸಮುದಾಯ ಆರೋಗ್ಯ ಕೇಂದ್ರದ ವತಿಯಿಂದ ಬಳ್ಳಾರಿ ಜಿಲ್ಲೆಯ ಹೊಸಮೋಕ ಗ್ರಾಮದಲ್ಲಿ ಇಂದು ಆಯೋಜಿಸಿದ್ದ ಮಾಹಿತಿ ಕಾರ್ಯಕ್ರಮದಲ್ಲಿ ಮೋಕದ ಆರೋಗ್ಯ ಮಿತ್ರರಾದ ಅನುರಾಧಿಕಾ ಅವರು ಸಾರ್ವಜನಿಕರಿಗೆ ಯೋಜನೆಯ ಸೌಲಭ್ಯಗಳು ಮತ್ತು ಅರ್ಹತೆಯ ಕುರಿತು ಮಾಹಿತಿ ನೀಡಿದರು. ಬಿಪಿಎಲ್ ಪಡಿತರ ಚೀಟಿ ಹೊಂದಿರುವವರು ಅಥವಾ ಆರ್‌ಎಸ್‌ಬಿವೈ ಯೋಜನೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ವರ್ಷಕ್ಕೆ ಒಂದು ಕುಟುಂಬಕ್ಕೆ 5 ಲಕ್ಷದವರೆಗೆ ಉಚಿತ ಚಿಕಿತ್ಸಾ ಸೌಲಭ್ಯ ಲಭ್ಯವಾಗಲಿದೆ ಎಂದು ತಿಳಿಸಿದರು.

ಎಪಿಎಲ್ ಪಡಿತರಚೀಟಿ ಹೊಂದಿರುವವರು ಅಥವಾ ಬಿಪಿಎಲ್ ಕಾರ್ಡ್ ಇಲ್ಲದವರು ಆಧಾರ್ ಕಾರ್ಡ್ ಮೂಲಕ ಯೋಜನೆಯ ಸೌಲಭ್ಯ ಪಡೆಯಲು ಅವಕಾಶವಿದೆ. ಇಂತಹ ಫಲಾನುಭವಿಗಳಿಗೆ ಯೋಜನೆಯ ಪ್ಯಾಕೇಜ್ ದರದ ಶೇ.30ರಷ್ಟು ಚಿಕಿತ್ಸಾ ಸೌಲಭ್ಯ ದೊರೆಯಲಿದ್ದು, ಒಂದು ಕುಟುಂಬಕ್ಕೆ ವರ್ಷಕ್ಕೆ ಗರಿಷ್ಠ 1.50 ಲಕ್ಷದವರೆಗೆ ಸೌಲಭ್ಯ ಲಭ್ಯವಾಗಲಿದೆ ಎಂದು ವಿವರಿಸಿದರು.

ಯೋಜನೆಯ ನಿಯಮಗಳ ಪ್ರಕಾರ, ಅಗತ್ಯವಿರುವವರು ಸಮೀಪದ ಸರ್ಕಾರಿ ಆಸ್ಪತ್ರೆಯಿಂದ ರೆಫರಲ್ ಪಡೆದು, ನಿಗದಿತ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಪಡೆಯಬಹುದು.

ಸಾರ್ವಜನಿಕರು ಯೋಜನೆಯ ಅರ್ಹತೆ, ನೋಂದಣಿ ಹಾಗೂ ಚಿಕಿತ್ಸಾ ಸೌಲಭ್ಯಗಳ ಕುರಿತು ಆರೋಗ್ಯ ಇಲಾಖೆಯ ಸಿಬ್ಬಂದಿಯಿಂದ ಮಾಹಿತಿ ಪಡೆದು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಲಾಯಿತು.

## ಗೌರಿಬಿದನೂರಿನ ವೀರಮ್ಮನಹಳ್ಳಿ ಬಳಿ ಲಘು ಭೂಕಂಪ ರಿಕ್ಟರ್ ಮಾಪಕದಲ್ಲಿ 2.9ರಷ್ಟು ತೀವ್ರತೆ ದಾಖಲು

**ಗೌರಿಬಿದನೂರು, ಅ.24:** ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಅಲಿಪುರ ಬಳಿಯ ವೀರಮ್ಮನಹಳ್ಳಿ ಸಮೀಪ ಶನಿವಾರ ನಸುಕಿನಜಾವ ಲಘು ಭೂಕಂಪನ ಸಂಭವಿಸಿದ್ದು,ರಿಕ್ಟರ್ ಮಾಪಕದಲ್ಲಿ 2.9 ತೀವ್ರತೆ ದಾಖಲಾಗಿದೆ.



ರಾಷ್ಟ್ರೀಯ ಭೂಕಂಪನಶಾಸ್ತ್ರ ಕೇಂದ್ರದ (ಎನ್ ಸಿಎಸ್) ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮಾಹಿತಿಯ ಪ್ರಕಾರ, ನಸುಕಿನ ಜಾವ 3 ಗಂಟೆ 29 ನಿಮಿಷ 42 ಸೆಕೆಂಡ್‌ಗೆ ಭೂಮಿ ಕಂಪಿಸಿದೆ. ಭೂಕಂಪನದ ಕೇಂದ್ರಬಿಂದು 13.497 ಅಕ್ಷಾಂಶ ಮತ್ತು 77.420 ರೇಖಾಂಶದಲ್ಲಿದ್ದು, ಭೂಮಿಯ ಮೇಲ್ಮೈಯಿಂದ ಸುಮಾರು 5 ಕಿ.ಮೀ ಆಳದಲ್ಲಿ ಕಂಪನ ದಾಖಲಾಗಿದೆ.

ಭೂಕಂಪನದ ತೀವ್ರತೆ ಕಡಿಮೆ ಮಟ್ಟದಲ್ಲಿದ್ದು, ಘಟನೆಯನ್ನು ಪರಿಶೀಲಿಸ ಲಾಗಿದೆ ಎಂದು ಎನ್‌ಸಿಎಸ್ ದತ್ತಾಂಶದಲ್ಲಿ ಉಲ್ಲೇಖಿಸಲಾಗಿದೆ. ಘಟನೆಯಿಂದ ಯಾವುದೇ ಹಾನಿ ಸಂಭವಿಸಿದೆಯೇ ಅಥವಾ ಸ್ಥಳೀಯರಿಗೆ ಕಂಪನದ ಅನುಭವವಾಗಿದೆಯೇ ಎಂಬ ಬಗ್ಗೆ ಈವರೆಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಇದಕ್ಕೂ ಮುನ್ನ ಶುಕ್ರವಾರ ಬೆಳಗ್ಗೆ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಲಘು ಭೂಕಂಪನ ಸಂಭವಿಸಿತ್ತು. ಬೆಳಗ್ಗೆ 9.01ರ ಸುಮಾರಿಗೆ ಸಂಭವಿಸಿದ ಈ ಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 3.0 ದಾಖಲಾಗಿತ್ತು ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್ ಡಿಎಂಸಿ) ತಿಳಿಸಿತ್ತು.

ದೊಡ್ಡಬಳ್ಳಾಪುರ ತಾಲೂಕಿನ ತೂಬಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿಮ್ಮೋಜನಹಳ್ಳಿ ಗ್ರಾಮದಿಂದ ಉತ್ತರಕ್ಕೆ ಸುಮಾರು 0.5 ಕಿ.ಮೀ ದೂರದಲ್ಲಿ ಭೂಕಂಪನದ ಕೇಂದ್ರಬಿಂದು ಪತ್ತೆಯಾಗಿತ್ತು. ಭೂಮಿಯ ಮೇಲ್ಮೈಯಿಂದ ಸುಮಾರು 10 ಕಿ.ಮೀ ಆಳದಲ್ಲಿ ಕಂಪನ ಸಂಭವಿಸಿತ್ತು ಎಂದು ಕೆಎಸ್‌ಎನ್‌ಡಿಎಂಸಿ ಮಾಹಿತಿ ನೀಡಿತ್ತು. ಭೂಕಂಪನದ ತೀವ್ರತೆ ಕಡಿಮೆ ಇರುವುದರಿಂದ ಕೇಂದ್ರಬಿಂದುವಿನ ಸುತ್ತಮುತ್ತಲಿನ 20ರಿಂದ 30 ಕಿ.ಮೀ ವ್ಯಾಪ್ತಿಯಲ್ಲಿ ಕೆಲವರಿಗೆ ಸಣ್ಣ ಪ್ರಮಾಣದ ಕಂಪನದ ಅನುಭವವಾಗಿರ ಬಹುದು. ಇಂತಹ ಲಘು ಭೂಕಂಪನ ಗಳಿಂದ ಸ್ಥಳೀಯ ಜನರಿಗೆ ಅಥವಾ ಆಸ್ತಿಪಾಸ್ತಿಗೆ ಹಾನಿಯಾಗುವ ಸಾಧ್ಯತೆ ಕಡಿಮೆ ಎಂದು ಕೆಎಸ್‌ಎನ್‌ಡಿಎಂಸಿ ನಿರ್ದೇಶಕರು ತಿಳಿಸಿದ್ದರು.

ಈ ಪ್ರದೇಶವು ಭೂಕಂಪನದ ದೃಷ್ಟಿಯಿಂದ ಕಡಿಮೆ ಅಪಾಯದ ಸೀಸ್ಮಿಕ್ ಝೋನ್–2 ವ್ಯಾಪ್ತಿಗೆ ಬರುತ್ತದೆ. ಹೀಗಾಗಿ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದರು.


ಕೆಂಪೇಗೌಡ ಫೌಂಡೇಷನ್ (ರಿ)
ನಾಡಪ್ರಭು ಕೆಂಪೇಗೌಡ ಜಯಂತಿಯ
ದಶಮಾನೋತ್ಸವ
ಸಂಭ್ರಮ
ಒಂದೂವರೆ ಶತಮಾನದ ರಾಷ್ಟ್ರೀಯ ಹಾಡು
150 ನೇ ವರ್ಷದ
ವಂದೇ ಮಾತರಂ
ಕಾರ್ಯಕ್ರಮ
ಕರ್ನಾಟಕದ ಹೆಸರಾಂತ ಕಲಾವಿದರು ಮತ್ತು ಸ್ಥಳೀಯ ಕಲಾವಿದರಿಂದ
ರಾಷ್ಟ್ರೀಯ ಸಾಂಸ್ಕೃತಿಕ ಮಹೋತ್ಸವ
ದಿನಾಂಕ: 25/10/2026 ಭಾನುವಾರ | ಸ್ಥಳ: ಭಾರತ್ ಮಂಟಪಂ, ನವದೆಹಲಿ
ಕಾರ್ಯಕ್ರಮ ಆರಂಭ ಮಧ್ಯಾಹ್ನ 02:00 ಗಂಟೆಗೆ | ಊಟ: ಮಧ್ಯಾಹ್ನ 01:00 ಗಂಟೆಗೆ
ಸಹಕಾರ: ಭಾರತ ಸರ್ಕಾರ ಸಂಸ್ಕೃತಿ ಸಚಿವಾಲಯ ಮತ್ತು ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ
ತಮಗೆಲ್ಲರಿಗೂ ಆತ್ಮೀಯ ಸ್ವಾಗತ
ದಿವ್ಯ ಸಾನಿಧ್ಯ
ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ
ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ
ಶ್ರೀಮದ್ ನಿರಂಜನ ಪ್ರಣವ ಶ್ರೀ ಶ್ರೀ ಶ್ರೀ
ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು
ಪೀಠಾಧ್ಯಕ್ಷರು, ಸುಕ್ಷೇತ್ರ ಶ್ರೀ ಕೋಡಿಮಠ ಮಹಾಸಂಸ್ಥಾನ, ಹಾರನಹಳ್ಳಿ
ಪರಮಪೂಜ್ಯ ಶ್ರೀ ಶ್ರೀ ಶ್ರೀ
ನಿಶ್ಚಲಾನಂದನಾಥ ಸ್ವಾಮೀಜಿಗಳು
ಪೀಠಾಧ್ಯಕ್ಷರು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಕೆಂಗೇರಿ
ಪರಮಪೂಜ್ಯ ಶ್ರೀ ಶ್ರೀ ಶ್ರೀ
ಡಾ. ನಂಜಾವಧೂತ ಸ್ವಾಮೀಜಿಗಳು
ಪೀಠಾಧ್ಯಕ್ಷರು, ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠ
ಪರಮಪೂಜ್ಯ ಶ್ರೀ ಶ್ರೀ ಶ್ರೀ
ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿಗಳು
ಪೀಠಾಧ್ಯಕ್ಷರು, ಶ್ರೀ ಮಾದಾರ ಚೆನ್ನಯ್ಯ ಗುರುಪೀಠ, ಚಿತ್ರದುರ್ಗ